
# ಸಣ್ಣಕತೆಗಳು

ಬಸವರಾಜ್ ಕಂಟಿ



https://honalu.net

# ಮುನ್ನುಡಿ

ಹೊನಲಿಗೆ ಬರೆಯಲು ಮೊದಲುಮಾಡಿದಾಗ ಇಶ್ಟೆಲ್ಲ ಬರೆಯುತ್ತೇನೆ ಎಂದುಕೊಂಡಿರಲಿಲ್ಲ. ಒಂದೆರಡು ಕವಿತೆ ಬರೆದು ಸುಮ್ಮನಿದ್ದ ನನಗೆ ಮತ್ತೆ ಮತ್ತೆ ಬರೆಯಲು ಹುರುಪು ತುಂಬಿದ್ದು ಹೊನಲು ತಂಡ. ಬರಹದ ಮಟ್ಟಿಗೆ ಹೇಳುವುದಾದರೆ, ಸುಮ್ಮನೆ ಒಂದೆಡೆ ಕೂತಿದ್ದ ನನಗೆ, ಅಂಬೆಗಾಲಿಟ್ಟು ಮುಂದೆ ಹೋಗಲು ಅನುವು ಮಾಡಿಕೊಟ್ಟಿದ್ದು ಈ ಹೊನಲು. ಇಂಗ್ಲೀಶ್ ಮಾದ್ಯಮದಲ್ಲಿ ಓದಿರುವ ನನಗೆ (ಆದರೆ ಇಂಗ್ಲೀಶ್ ಪಂಡಿತನಲ್ಲ!) ಕನ್ನಡ ಬರೆಯಲು ತುಸು ತೊಡಕೆನಿಸಿದರೂ, ಕನ್ನಡದ ಮೇಲಿನ ಪ್ರೀತಿಯಿಂದ, ಮತ್ತು "ಎಲ್ಲರ ಕನ್ನಡ"ದ ವಿಚಾರಗಳು ಮನಸ್ಸಿನಲ್ಲಿ ನಾಟಿದ್ದರಿಂದ, ಕನ್ನಡದಲ್ಲೇ ಬರೆಯಲು ತೀರ್ಮಾನಿಸಿದೆ. ನನ್ನ ಬರಹಗಳನ್ನು ಓದಿ, ಹಿನ್ನುಣಿಕೆ ಕೊಟ್ಟು, ಹೊನಲಿನಲ್ಲಿ ಮೂಡಿಸಲು ನೆರವಾದ ಹೊನಲು ತಂಡಕ್ಕೆ ನಣ್ಮಿಗಳು.

**ಬಸವರಾಜ್ ಕಂಟಿ**

ಬೆಂಗಳೂರು.

**ತಿಳಿಸುವಿಕೆ:**

ಈ ಹೊತ್ತಗೆಯಲ್ಲಿರುವ ಎಲ್ಲಾ ಬರಹಗಳ ಹಕ್ಕುಗಳು ಬರಹಗಾರರು ಮತ್ತು ಹೊನಲು ತಂಡಕ್ಕೆ ಸೇರಿವೆ. ಬರಹಗಳ ಆಯ್ದ ಬಾಗವನ್ನು ಇಲ್ಲವೇ ಇಡೀ ಬರಹವನ್ನು ಬೇರೆ ಕಡೆ ಬಳಸಿಕೊಳ್ಳಲು ಬಯಸುವವರು ಬರಹದಲ್ಲಿ ಇಲ್ಲವೇ ಲಿಪಿಯಲ್ಲಿ ಯಾವುದೇ ಮಾರ್‍ಪಾಡುಗಳನ್ನು ಮಾಡದೇ, ಬರಹಗಾರರ ಹೆಸರನ್ನು ಮತ್ತು ಹೊನಲು ಮಿಂಬಾಗಿಲಿನಿಂದ (honalu.net) ಪಡೆದುಕೊಳ್ಳಲಾಗಿದೆ ಎಂದು ತಿಳಿಸುತ್ತಾ ಬಳಸಿಕೊಳ್ಳಬಹುದು. ಬರಹಗಳಲ್ಲಿ ಬಳಸಿರುವ ಚಿತ್ರಗಳ ಸೆಲೆಗಳನ್ನು ಆಯಾ ಬರಹದ ಕೆಳಗಡೆ ಕೊಡಲಾಗಿದ್ದು, ಅವುಗಳ ಹಕ್ಕುಗಳು ಆ ಸೆಲೆಗಳದ್ದಾಗಿರುತ್ತದೆ.

| | |
|---|---|
| **ಮುಂಪುಟ ಕಟ್ಟಣೆ** | **:** ರತೀಶ ರತ್ನಾಕರ |
| **ಹೊರಹೊಮ್ಮಿಕೆ** | **:** 27.11.2015 |
| **ಮಿಂಬಲೆಯ ವಿಳಾಸ** | : http://honalu.net/ |
| **ಮಿಂಚೆ** | : minche@honalu.net |

# ಒಳನೋಟ


1. ಸಂಚು 01


2. ಪತ್ತೇದಾರಿ ಕತೆ - ಕೊಲೆಗಾರ ಯಾರು? 05

3. ಪತ್ತೇದಾರಿ ಕತೆ - ಪವಾಡ! 15

4. ಸರ್ಕ್ಾರಿ ಆಸ್ಪತ್ರೆ 27

5. ನಂಬಿಕೆ 32

# ಸಂಚು



ಗೋದೂಳಿ ಸಮಯ. ಅವಳು ಮತ್ತು ಅವನು ಒಬ್ಬರ ತೋಳಿನಲ್ಲಿ ಒಬ್ಬರು ಸೇರಿ ಹೊರಳಾಡುತ್ತಿದ್ದರು. ಜಗವೇ ಮರೆತಂತಿದ್ದರು. ಅಶ್ಟರಲ್ಲಿ ಅವನ ಮೊಬಾಯಿಲಿಗೆ ಕರೆ ಬಂದಿತು.

"ಯಾರದು?" ಅವಳು ಕೇಳಿದಳು ಬೇಸರದಿಂದ, ರಸಬಂಗವಾಗಿ.

"ನಿನ್ನ ಗಂಡ! ಸುಮ್ಮನಿರು" ಎಂದನು. ಅವಳು ನಾಲಗೆ ಕಚ್ಚಿ ಸುಮ್ಮನಾದಳು. ಇವನು ಕರೆ ಎತ್ತಿ,

"ಹೇಳಪ್ಪಾ... ಹೇಗಿದೀಯಾ? ಹೇಗಿದೆ ಸಿಂಗಾಪೂರು?" ಅಂದ.

"ಅದೇನು ಇದ್ದದ್ದೇ ಬಿಡು. ನೀನ್ ಹೇಳು ಹೇಗಿದೀಯಾ?"

"ಚೆನ್ನಾಗಿದೀನಪ್ಪಾ. ಎಲ್ಲಾ ನಿನ್ ದಯೆ"

"ನನ್ ದಯೆ ಯಾಕಪ್ಪಾ?"

"ಮತ್ತೆ? ನನ್ ಬಿಸನೆಸ್ ಗೆ ನೀನೆ ಅಲ್ವಾ ಇನ್ವೆಸ್ಟ್ ಮಾಡಿದ್ದು?"

"ಅದಾ... ದುಡ್ಡ್ ಇತ್ತು, ಇನ್ವೆಸ್ಟ್ ಮಾಡ್ದೆ. ಅಶ್ಟೇ... ಪ್ರೆಂಡ್ ಅಂದ್ಮೇಲೆ ಅಶ್ಟೂ ಮಾಡದಿದ್ರೆ ಹೇಗೆ... ಎಲ್ಲಿದೀಯಾ ಈಗ?".

"ನನ್ ಮನೇಲಿ... ಇನ್ನೇನ್ ವಿಶೇಶ?"

ಹೀಗೆ ಗೆಳೆಯರು ಮಾತು ಮುಂದುವರೆಸಿದರು, ತಮ್ಮ ನಿತ್ಯ ಬದುಕಿನ ಬಗ್ಗೆ ಮಾತಾಡಿಕೊಂಡರು. ಕಾಲೇಜಿನ ದಿನಗಳಿಂದ ಇಬ್ಬರೂ ಹತ್ತಿರದ ಗೆಳೆಯರಾಗಿದ್ದರು. ಇವಳಿಗೆ ಬೇಸರವಾಗಿ ಮಂಚದಿಂದ ಎದ್ದಳು. ಅಶ್ಟರಲ್ಲಿ ಅವಳ ಮೊಬಾಯಿಲಿಗೂ ಕರೆ ಬಂದಿತು, ಅವಳ ಗೆಳತಿಯದು. ಕೋಣೆಯಿಂದ ಹೊರ ಹೋಗಿ ಮಾತಾಡಿದಳು, ಗಂಡನಿಗೆ ಕೇಳಬಾರದೆಂದು. ತುಂಬಾ ಹೊತ್ತಾದ ಮೇಲೆ ಇಬ್ಬರದೂ ಕರೆ ಮುಗಿದು ಮತ್ತೆ ಮಂಚದಲ್ಲಿ ಒಂದಾದರು.

"ಇವನನ್ನಾ ದಾರಿಯಿಂದ ತೆಗೆಯೋ ವಿಶಯ ಏನ್ ಮಾಡ್ದೆ?" ಅವಳು ಕೇಳಿದಳು.

"ನಾನೂ ಅದನ್ನೇ ಯೋಚ್ನೆ ಮಾಡ್ತಾ ಇದ್ದೆ" ಅವಳ ಗಂಡನನ್ನ ಹೇಗಾದರೂ ಮಾಡಿ ಕೊಲ್ಲುವ ಮನಸ್ಸು ಮಾಡಿದ್ದರು. "ಹಾಗಾದ್ರೆ ಡಾಯ್ವೋರ್ಸ್ ಬೇಡ ಅಂತೀಯಾ?" ಕೇಳಿದ.

“ಗುಗ್ಗು. ಡಾಯ್ವೋರ್ಸ್ ಮಾಡಿದ್ರೆ ಅವನ್ ಆಸ್ತಿ ಸಿಗುತ್ತಾ. ಅವ್ನು ಸತ್ರೆ ನಾವು ಇಡೀ ಜೀವನಾ ಕೂತ್ಕೊಂಡ್ ತಿನ್ ಬಹುದು. ಕೂತ್ಕೊಂಡ್ ಯಾಕೆ, ಮಲ್ಕೊಂಡ್ ತಿನ್ಬಹುದು” ನಕ್ಕಳು. ಅವನೂ ನಕ್ಕ.

*****************************************

ಅವನು ಸಿಂಗಾಪುರಿನಿಂದ ಮೂರು ದಿನಗಳ ನಂತರ ಮರಳಿ ಬಂದ. ಯಾವತ್ತಿನಂತೆ ಹೆಂಡತಿಗೆ ಉಡುಗೊರೆಗಳನ್ನು ತಂದಿದ್ದ. ಅವಳು ಇಲ್ಲದ ಪ್ರೀತಿಯನ್ನು ತೋರಿಸಲು ಯಾವತ್ತಿನಂತೆ ಪ್ರಯತ್ನಿಸಿದಳು. ಯಾಕೋ ಏನೋ, ಪ್ರತೀಸಲಕ್ಕಿಂತ ಹೆಂಡತಿಗೆ ಈ ಬಾರಿ ಹೆಚ್ಚು ಪ್ರೀತಿ ತೋರಿಸಿದ. ಊಟಕ್ಕೆ ಕುಂತಾಗ,

“ದಿವ್ಯಾ, ನಾನ್ ಹೋದ ಕೆಲ್ಸ ಸಕ್ಸಸ್. ಅವ್ರು ನಮ್ಗೇ ಆರ್ಡರ್ ಕೊಡ್ತಾರಂತೆ. ನಂಗೆ ತುಂಬಾ ಕುಶಿ ಆಗಿದೆ. ಎಲ್ರೂ ಸೇರಿ ಎಲ್ಲಾದ್ರು ಟ್ರಿಪ್ ಹೋಗಿ ಪಾರ್ಟಿ ಮಾಡಿ ಬರೋಣ?”

“ಎಲ್ರೂ ಅಂದ್ರೆ?”

“ನಾನು, ನೀನು, ದಿನೇಶಾ, ಸೂರಿ”

ಅವನು ದಿನೇಶ್ ಅಂದ ತಕ್ಷಣ ಅವಳ ಮನಸ್ಸಿಗೆ ಏನೋ ಒಂದುಬಗೆಯ ಸಂತಸವಾಯಿತು.

“ಸರಿ. ಯಾವಾಗ?” ಅಂದಳು.

“ಬರೋ ಶನಿವಾರ? ಅಶ್ಟರಲ್ಲಿ ಮಯ್ಸೂರು ಹೋಗಿ ಅಪ್ಪಾ ಅಮ್ಮಂಗೆ ನೋಡ್ಕೊಂಡ್ ಬರ್ತೀನಿ”

“ನಾನೂ ಬರ್ಬೇಕಾ?” ಬೇಸರದಿಂದ ಕೇಳಿದಳು.

“ನಿಂಗ್ ಇಶ್ಟಾ ಇಲ್ದಿದ್ರೆ ಬೇಡಾ ಬಿಡು” ಅಂದನು.

*******************************************

“ಟ್ರಿಪ್ಪಾ?” ಅವನು ಕೇಳಿದನು

“ಹೂಂ” ಅಂದಳು.

“ಯಾರ್ ಯಾರ್ ಹೋಗೋದು?”

“ನಾನು, ನೀನು ಮತ್ತೆ ಅವನ ಚಡ್ಡಿ ದೋಸ್ತ್ ಇದಾನಲ್ಲಾ, ಸೂರಿ, ಅವನು”

ತುಸು ಹೊತ್ತು ಯೋಚಿಸಿ, ಏನೋ ಹೊಳೆದಂತಾಗಿ “ಇದೇ ಸರಿಯಾದ್ ದಾರಿ ಅನ್ಸುತ್ತೆ” ಅಂದನು.

“ಏನು? ಯಾವ್ ದಾರಿ?”

“ಅವನನ್ನಾ ಸಾಯಿಸೋಕೆ”

“ಹೇಗೆ?”

“ನೀನು ಸ್ವಲ್ಪಾ ರಿಸ್ಕ್ ತೊಗೊಳ್ಳೋದಕ್ಕೆ ರೆಡಿಯಾಗ್ಬೇಕು. ಯಾರಿಗೂ ಡೌಟ್ ಬರೋದಿಲ್ಲಾ”.

“ಏನು ನಿನ್ ಪ್ಲಾನು?”

“ಟ್ರಿಪ್ ಹೇಗೂ ಅವನ್ ಕಾರಲ್ಲಿ ಹೋಗ್ತಿವಿ. ನಾನೇ ಡ್ರಾಯ್ವ್ ಮಾಡ್ತೀನಿ ಅಂತ ನೀನು ಕಾರು ಓಡಿಸಲು ಮುಂದಾಗು. ಮದ್ಯ ದಾರೀಲಿ ಎಲ್ಲಾದರೂ ಕಾರು ನಿಲ್ಲಿಸಿದಾಗ ನಾನು ಹೇಗಾದರೂ ಮಾಡಿ ನಿನ್ನ ಜೊತೆ ಮುಂದಿನ ಸೀಟಿನಲ್ಲಿ ಕೂತ್ಕೋತೀನಿ”

“ಹೂಂ. ಸರಿ. ಆಮೇಲೆ?”

“ಆಮೇಲೆ ಸಮಯ ನೋಡಿ ಎದುರಿಗೆ ಬರೋ ಯಾವದಾದ್ರು ಗಾಡಿಗೆ ಜೋರಾಗಿ ಗುದ್ದು”

ಅವಳು ಬಾಯಿ ತೆರೆದಳು. “ಲೋ ಇಡಿಯಟ್. ನಮ್ ಗತಿ?” ಎಂದಳು.

“ಸ್ವಲ್ಪ ಕೇಳು. ಅವನ ಕಾರಿನಲ್ಲಿ ಮುಂದುಗಡೆ ಸೀಟಿಗೆ ಏರ್ ಬ್ಯಾಗ್ ಇದೆ. ಅಲ್ದೆ ನಾವು ಸೀಟ್ ಬೆಲ್ಟ್ ಬೇರೆ ಹಾಕೊಂಡಿರತೀವಿ. ನಮಗೆ ಪೆಟ್ ಆದ್ರೂ ಕಮ್ಮಿ ಆಗುತ್ತೆ. ಅವರಿಗೆ ಮಾತ್ರ ಜೋರಾಗಿ ಆಗ್ಬೇಕು. ಆ ರೀತಿ ನೀನ್ ಕಾರು ಗುದ್ದಬೇಕು. ಹಿಂದುಗಡೆ ಕೂತಿರೋರು ಸೀಟ್ ಬೆಲ್ಟ್ ಹಾಕಿರೊಲ್ಲ.”

ಅವಳು ತುಸು ಹೊತ್ತು ಯೋಚಿಸಿದಳು. ಅವನು ಮುಂದುವರೆಸಿದ, “ಹೀಗ್ ಮಾಡಿದ್ರೆ ಯಾರಿಗೂ ಅನುಮಾನ ಬರೊಲ್ಲ. ಕಾರು ಕಂಟ್ರೋಲ್ ತಪ್ಪು ಅಂತ ಆಮೇಲೆ ಹೇಳ್ಬಹುದು.”

ಅವಳು ಇನ್ನೂ ಯೋಚಿಸುತ್ತಿದ್ದಳು. ಸ್ವಲ್ಪ ಹೊತ್ತಾದ ಮೇಲೆ, “ಅವಂಗೆ ಪೆಟ್ಟು ಕಮ್ಮಿಯಾಗಿ ಉಳ್ಕೊಂಡ್ ಬಿಟ್ರೆ?”

“ಅವ್ನು ಉಳ್ಕೊಳ್ಳೋಕೆ ಚಾನ್ಸೇ ಇರಬಾರ್ದು, ನೀನು ಹಂಗ್ ಗುದ್ದಬೇಕು. ಒಂದ್ ವೇಳೆ ಉಳ್ಕೊಂಡ್ರೆ ನಮ್ ಬ್ಯಾಡ್ ಲಕ್.”

“ನಂಗ್ ಯಾಕೋ ತುಂಬಾ ಬಯ ಆಗ್ತಾಯಿದೆ. ಅವನ್ ಜೊತೆ ಸೂರಿನೂ ಸಾಯಿಸ್ಬೇಕಾ?”

"ನೋಡು. ಇದೇ ಸರಿಯಾದ್ ದಾರಿ. ಅಷ್ಟೊಂದ್ ಆಸ್ತಿ ಬೇಕು ಅಂದ್ರೆ ಸುಮ್ನೆನಾ? ನಾವೂ ಸ್ವಲ್ಪ ರಿಸ್ಕ್ ತೊಗೋಬೇಕು. ಬೇರೆ ರೀತಿ ಸಾಯಿಸೋಕೆ ಪ್ರಯತ್ನ ಮಾಡಿದ್ರೆ ನಿನ್ ಮೇಲೆ ಡೌಟು ಬರೋದು ಗ್ಯಾರಂಟಿ. ಆಸ್ತಿ ಎಲ್ಲಾ ನಿನಗೆ ಬರುತ್ತಲ್ಲಾ... ಅಲ್ಲದೇ ನಮ್ಮಿಬ್ಬರ ಸಂಬಂದ ಹೇಗಾದ್ರು ಗೊತ್ತಾದ್ರೆ ನಾವು ಸಿಕ್ಕಾಕೊಳ್ಳೋದ್ರಲ್ಲಿ ಡೌಟೇ ಇಲ್ಲ. ಯೋಚನೆ ಮಾಡು". ಅವಳ ಮನಸ್ಸೊಲಿಸಲು ಎಲ್ಲಾ ಪ್ರಯತ್ನ ಮಾಡಿದ. ಅವಳು ಸುಮಾರು ಹೊತ್ತು ಯೋಚಿಸಿ, ಅವನ ದಾರಿ ಸರಿ ಎಂದುಕೊಂಡು ಒಪ್ಪಿದಳು. ಅವರು ಅಂದುಕೊಂಡ ಆ ದಿನ ಬಂದೇ ಬಿಟ್ಟಿತು.

****************************************

ಎಲ್ಲರೂ ಹುರುಪಿನಿಂದ ಊಟಿಗೆ ಹೋಗಲು ತಯಾರಾಗಿದ್ದರು. ಮಹೇಶ ಹಿಂದೆಂದಿಗಿಂತಲೂ ಕುಶಿಯಲ್ಲಿದ್ದ. ತನ್ನ ಕೆಲಸದಲ್ಲಿ ಆಗುತ್ತಿರುವ ಮುನ್ನಡೆಯಿಂದ ಬೀಗುತ್ತಿದ್ದ. ಅವನ ಬೆನ್ನ ಹಿಂದೆ ನಡೆಯುತ್ತಿರುವ ಅವನ ಸಾವಿನ ಸಂಚು ಅವನಿಗೆ ಗೊತ್ತಿರಲಿಲ್ಲ. ಸೂರಿ, ದಿನೇಶ ಆಗಲೇ ಅವನ ಮನೆಗೆ ಬಂದಿದ್ದರು. ಎಲ್ಲರೂ ಬೆಳಗಿನ ತಿಂಡಿ ಮುಗಿಸಿ ಮನೆಯಿಂದ ಹೊರಬಂದರು. ಅವನ ಕಾರು ಓಡಿಸುವವ ಕಾರನ್ನು ತಂದು ಮನೆಯ ಮುಂಬಾಗಿಲಿನಲ್ಲಿ ನಿಲ್ಲಿಸಿ ಕೆಳಗಿಳಿದ. ಮಹೇಶ ಕಾರು ತಾನೇ ಓಡಿಸಲು ಮುಂದಾದ. ತಕ್ಕಣ ಅವನನ್ನು ತಡೆದ ಅವನ ಹೆಂಡತಿ,

"ಮಹೀ, ಇವತ್ತು ನಾನ್ ಕಾರ್ ಓಡಿಸ್ಲಾ?" ಎಂದು ಕೇಳಿದಳು.

"ಇಲ್ಲಾ ಡಾರ್ಲಿಂಗ್. ನಾನ್ ಕಾರ್ ಓಡ್ಸಿ ತುಂಬಾ ದಿನಾ ಆಯ್ತು. ಯಾಕೋ ಇವತ್ತು ನಾನೇ ಓಡಿಸ್ಬೇಕು ಅನಿಸ್ತಾ ಇದೆ. ಬೇಕಿದ್ರೆ ಊಟಾ ಮಾಡಿದ್ ಮೇಲೆ ನೀನು ಓಡಿಸುವಂತೆ" ಅಂದನು.

ಅವಳು ತನ್ನ ಗೆಳೆಯ, ದಿನೇಶನ ಕಡೆ ನೋಡಿದಳು. ಅವನು "ಇರಲಿ" ಎನ್ನುವಂತೆ ಕಣ್ಣು ಮಿಟಿಕಿಸಿದನು. ಅವಳು ಸಿಟ್ಟು ತೋರಿಸುವವಳಂತೆ ಅವನ ಪಕ್ಕ ಕೂರದೆ, ಹಿಂದಿನ ಸೀಟಿನಲ್ಲಿ ಕೂತುಕೊಂಡಳು. ಮಹೇಶ ಅವಳನ್ನು ರಮಿಸಲು ಮುಂದಾದ.

"ಯಾಕೇ? ಸಿಟ್ಟ್ ಮಾಡ್ಕೊಂಡ್ಯಾ?" ಎಂದನು

"ಏನ ಇಲ್ಲಾ. ನಾನು ಇಲ್ಲೇ ಕಂಪರ್ಟಬಲ್ ಆಗಿದೀನಿ" ಅಂದಳು, ಮುಕ ತಿರುವಿ. ಮಹೇಶ ಮತ್ತೆ ಮಾತಾಡಲಿಲ್ಲ, ಕಾರು ಹತ್ತಿದ. ಸೂರಿ ಮಹೇಶನ ಪಕ್ಕ ಕುಂತ, ದಿನೇಶ ಕಾರಿನ ಹಿಂದುಗಡೆ, ತನ್ನ ಗೆಳತಿಯ ಜೊತೆ ಕುಂತನು. ಕಾರು ಮನೆಯಿಂದ ಹೊರಟು, ಊರಿನ ಬೀದಿಗಳನ್ನು ಸೇರಿತು. ದಿನೇಶ ಮತ್ತು ಅವನ ಗೆಳತಿ ಸುಮ್ಮನೆ ಕೂತಿದ್ದರೂ, ತಮ್ಮ ತಮ್ಮ ಮೊಬಾಯಿಲಿನ ಮೆಸೇಜ್ ಗಳ ಮೂಲಕವೇ ಮಾತನಾಡಿಕೊಳ್ಳುತ್ತಿದ್ದರು.

ಅವಳು: "ಈಗ್ ಏನ್ ಮಾಡೋದು"

ಅವನು: "ಪ್ಲಾನ್ ನಲ್ಲಿ ಏನು ಬದಲಾವಣೆ ಇಲ್ಲಾ. ಊಟಾ ಆದ್ಮೇಲೆ ಹೇಗೂ ನೀನೆ ಕಾರ್ ಓಡಸ್ತೀಯಲ್ಲಾ. ನಾನೂ ಹೇಗಾದ್ರು ಮಾಡಿ ಮುಂದೆ ಬಂದು ಕೂತ್ಕೊತೀನಿ"

ಅವಳು: "ಸರಿ"

ಅವನು: "ಯಾವದಾದ್ರು ಜಂಕ್ಶನ್ ನಲ್ಲಿ ಎದುರಿಗೆ ಬರೋ ಲಾರಿಗೇ ಗುದ್ದು"

ಅವಳು: "ಸರಿ. ಏನಾದ್ರು ಆದ್ರೆ ದೇವ್ರೇ ಗತಿ"

ಊರಿನ ಬೀದಿಗಳನ್ನು ದಾಟಿ ಸುಮಾರು ಒಂದು ಗಂಟೆ ಮೇಲೆ ಹಯ್ ವೇ ಕೂಡಿಕೊಂಡರು. ಕಾರು ವೇಗ ಹೆಚ್ಚಿಸಿಕೊಂಡಿತು. ಕಾರಿನ ವೇಗ ನೋಡಿ, ಅವನ ಪಕ್ಕ ಕೂತಿದ್ದ ಸೂರಿ ನಿದಾನವಾಗಿ ಓಡಿಸುವಂತೆ ಕೇಳಿದ. ಅವನನ್ನು ನೋಡಿ "ಯಾಕೋ ಹೆದರ್ತೀಯಾ?" ಎಂದು ಮುಗುಳ್ನಕ್ಕ ಮಹೇಶ. ತುಸು ಹೊತ್ತು ಕಳೆದ ಮೇಲೆ, ದಾರಿಯನ್ನು ಇಬ್ಬಾಗ ಮಾಡುವ ತಡೆ ಇಲ್ಲದ ಒಂದು ಕಡೆ ಕಾರು ಇದ್ದಕ್ಕಿದ್ದಂತೆ ಎದುರಿಗೆ ಬರುವ ಗಾಡಿಗಳತ್ತ ಹೊರಳಿ, ಕ್ಶಣಮಾತ್ರದಲ್ಲಿ ಲಾರಿಯೊಂದಕ್ಕೆ ಜೋರಾಗಿ ಗುದ್ದಿತು. ಹೊಡೆತಕ್ಕೆ ಕಾರಿನ ಮುಂಬಾಗ ನುಜ್ಜುಗುಜ್ಜಾಗಿ, ಹಿಂದೆ ಕೂತಿದ್ದ ದಿನೇಶ ಮತ್ತು ಮಹೇಶನ ಹೆಂಡತಿ ಕಾರಿನ ಮೇಲ್ಚಾವಣಿಗೆ ಹಾಗೂ ಎದುರಿನ ಸೀಟುಗಳಿಗೆ ಅಪ್ಪಳಿಸಿದರು. ಇಬ್ಬರ ತಲೆಗಳಿಗೂ ಜೋರು ಪೆಟ್ಟು ಬಿದ್ದಿತು. ಮುಂದೆ ಕೂತಿದ್ದ ಮಹೇಶ ಮತ್ತು ಸೂರಿಯ ಕಯ್ ಕಾಲುಗಳಿಗೆ ಅಲ್ಲಲ್ಲಿ ಪೆಟ್ಟಾಗಿತ್ತು. ಸೀಟ್ ಬೆಲ್ಟ್ ಹಾಕಿಕೊಂಡಿದ್ದ ಕಾರಣ ಅವರಗೆ ಬೇರೆಕಡೆ ಹೆಚ್ಚು ಪೆಟ್ಟಾಗಲಿಲ್ಲ. ಅದಲ್ಲದೆ ಗಾಳಿ ಚೀಲಗಳು (ಏರ್ ಬ್ಯಾಗ್ಸ್) ಸರಿಯಾದ ಸಮಯಕ್ಕೆ ತರೆದುಕೊಂಡಿದ್ದರಿಂದ ಅವರ ತಲೆಗಳೂ ಸುರಕ್ಶಿತವಾಗಿದ್ದವು. ಎಲ್ಲರಿಗೂ ಎಚ್ಚರ ತಪ್ಪಿತು. ಕೆಲವೇ ಕ್ಶಣಗಳಲ್ಲಿ ಜನರೆಲ್ಲಾ ಸೇರಿ ಅವರನ್ನು ಕಾರಿನಿಂದ ಹೊರತಗೆದು ಆಸ್ಪತ್ರೆಗೆ ಸಾಗಿಸಿದರು.

*****************************

ಆಸ್ಪತ್ರೆಯಲ್ಲಿ ಮಹೇಶನ ಪಕ್ಕ ಕೂತು ಪೊಲೀಸ್ ಎಸ್. ಆಯ್. ಒಬ್ಬರು ನಡೆದ ಗಟಣೆಯ ವಿವರ ಬರೆದುಕೊಳ್ಳುತ್ತಿದ್ದರು. ಮಹೇಶನು ಆಗಾಗ ದುಕ್ಕಿಸುತ್ತ, ಕಣ್ಣೊರಿಸಿಕೊಳ್ಳುತ್ತ, ನಡೆದುದೆಲ್ಲವನ್ನೂ ಹೇಳುತ್ತಿದ್ದನು. ಹೆಂಡತಿ ಮತ್ತು ಗೆಳೆಯನನ್ನು ಕಳೆದುಕೊಂಡ ಮಹೇಶನ ದುಕ್ಕ ಎಲ್ಲೆ ಮೀರಿದಂತೆ ತೋರುತ್ತಿತ್ತು. ಅಕಸ್ಮಾತ್ತಾಗಿ ಗಾಡಿ ತನ್ನ ನಿಯಂತ್ರಣ ಕಳೆದುಕೊಂಡು, ಎದುರಿಗೆ ಬರುತ್ತಿದ್ದ ಲಾರಿಗೆ ಅಪ್ಪಳಿಸಿತೆಂದು ಹೇಳಿದನು. ಎಸ್. ಆಯ್. ತಮಗೆ ಬೇಕಾದ ಎಲ್ಲ ವಿವರ ಕೇಳಿ ಪಡೆದು, ಹೊರ ನಡೆದರು. ತುಸು ಸಮಯದ ಮೇಲೆ ಆಸ್ಪತ್ರೆಯಲ್ಲಿದ್ದ ಅವನ ಕೋಣೆಗೆ ಗೆಳೆಯ ಸೂರಿ ಬಂದ. ಅವನ ಕಯ್ಯಿಗೆ ಪಟ್ಟಿ ಕಟ್ಟಿದ್ದರು. ಕೋಣೆಯಲ್ಲಿ ಅವರಿಬ್ಬರೇ ಇದ್ದದ್ದು.

"ಅಂತು ಎಲ್ಲಾ ನಿನ್ ಪ್ಲಾನ್ ಪ್ರಕಾರಾನೇ ಆಯ್ತುಲ್ಲಾ?" ಎಂದು ಕೇಳಿದ.

"ಹೌದು" ಎನ್ನುವಂತೆ ಕಿರುನಕ್ಕ ಮಹೇಶ.

"ನನಗಾದ್ರು ಹೇಳಬಾರದಿತ್ತಾ ನಿನ್ ಪ್ಲಾನ್ ಏನು ಅಂತ?"

“ಹೇಳಿದ್ರೆ ನೀನ್ ಬರ್ತಿದ್ಯಾ?”

ನಗುತ್ತ, “ಇಲ್ಲಾ ಬಿಡು” ಅಂದ.

ಸ್ವಲ್ಪ ಹೊತ್ತು ಇಬ್ಬರೂ ನಕ್ಕರು. ಏನೋ ಸಾದಿಸಿದ ಕಳೆ ಇಬ್ಬರ ಮುಕದಲ್ಲೂ ಇತ್ತು.

“ತ್ಯಾಂಕ್ಸಪ್ಪಾ” ಎಂದನು ಮಹೇಶ.

“ತ್ಯಾಂಕ್ಸಾ? ಯಾಕೆ?”

“ಅದೇ… ನಾನ್ ಸಿಂಗಾಪುರ್ ನಲ್ಲಿದ್ದಾಗ, ಇಲ್ಲಿ ನೀನು ಡಿಟೆಕ್ಟೀವ್ ಗಳಿಗೆ ಹೇಳಿ ಅವರಿಬ್ಬರ ಸಂಬಂದ ಇದೆ ಅಂತ ಕಾತ್ರಿ ಮಾಡಿಸಿಕೊಟ್ಟೆ ಅಲ್ಲಾ, ಅದಕ್ಕೆ?”

“ಪರವಾಗಿಲ್ಲ ಬಿಡು. ಆದ್ರೂ…”

“ಆದ್ರೂ?”

“ಡಾಯ್ವೋರ್ಸ್ ಕೊಟ್ಟಿದ್ರೆ ಆಗಿರೋದು”

“ಡಾಯ್ವೋರ್ಸ್ ಕೊಟ್ರೆ ಅವನ್ ಜೊತೆ ನನ್ ಕಣ್ಣ ಮುಂದೇನೆ ಓಡಾಡ್ಕೊಂಡ್ ಆರಾಮಾಗಿರತಿದ್ಳು. ನನಗಾದ ನಂಬಿಕೆ ದ್ರೋಹಕ್ಕೆ ಇದೇ ತಕ್ಕ ಶಿಕ್ಶೆ”

“ಎಶ್ಟ ದಿನದಿಂದ ಈ ಸಂಬಂದ ಇತ್ತು ಅಂತ ಏನಾದ್ರು ಗೊತ್ತಾಯ್ತಾ?”

“ಇಲ್ಲಾ. ಆದ್ರೆ ಅವತ್ತು ದಿನೇಶಂಗೆ ಕಾಲ್ ಮಾಡಿ ಮಾತಾಡೋವಾಗ ಅವಳ ಮೊಬಾಯಿಲಿನ ರಿಂಗ್ ಟೋನ್ ಕೇಳಿಸ್ದೆ ಇದ್ದಿದ್ರೆ ನನಗ್ ಗೊತ್ತೇ ಆಗ್ತಿರಲಿಲ್ವೇನೋ…”

***(ಚಿತ್ರ ಸೆಲೆ: wrecked+car+drawing )***

# ಪತ್ತೇದಾರಿ ಕತೆ – ಕೊಲೆಗಾರ ಯಾರು?



ಮನವರಿಮೆಯ (Psychology) ಹೊತ್ತಗೆಯೊಂದನ್ನು ಹಿಡಿದುಕೊಂಡು ತನ್ನ ಹೊತ್ತಗೆಯಂಗಡಿಯಲ್ಲಿ ಕುಳಿತಿದ್ದ ಪುಲಕೇಶಿ, ಗೀಳಿನ ಕಾಯಿಲೆಯ (Obsession Disorder) ಬಗ್ಗೆ ಓದುತ್ತಿದ್ದನು. ಈ ಕಾಯಿಲೆ ಇರುವವರು ಯಾವತ್ತೂ ಯಾವುದಾದರೊಂದು ಸಂಗತಿ ಬಗ್ಗೆಯೇ ಪದೇ ಪದೇ ಯೋಚಿಸುತ್ತಿರುತ್ತಾರೆ ಅತವಾ ಯಾವುದಾದರೊಂದು ಕೆಲಸವನ್ನು ಪದೇ ಪದೇ ಮಾಡುತ್ತಿರುತ್ತಾರೆ. ಅದರಿಂದ ಹೊರಬರಲು ಅವರಿಗೆ ಸಾದ್ಯವಾಗುವುದೇ ಇಲ್ಲ. ಪುಲಕೇಶಿಗೆ ಮನವರಿಮೆಯ ಬಗ್ಗೆ ತುಂಬಾ ಒಲವು. ಆಗಲೇ ಸಂಜೆಯಾಗುತ್ತಾ ಬಂದಿತ್ತು. ಯಾರೋ ಒಬ್ಬ ಲಗುಬಗೆಯಲ್ಲಿ ನಡೆಯುತ್ತ ಅವನ ಅಂಗಡಿಗೆ ಬಂದು, ನೇರ ಪುಲಕೇಶಿ ಕುಳಿತಿದ್ದ ಮೇಜಿನ ಹತ್ತಿರ ತನ್ನ ದಪ್ಪ ಮಯ್ಯನ್ನು ಹೊರಲಾರದೆ ಹೊತ್ತುಕೊಂಡಂತೆ ಹೋದನು. ಹೊತ್ತಗೆಯಲ್ಲಿ ನೆಟ್ಟಿದ್ದ ತನ್ನ ಕಣ್ಣುಗಳನ್ನು ಮೇಲಕ್ಕೆತ್ತಿ ಎದುರಿಗಿದ್ದ ಆಕಾರವನ್ನು ನೋಡಿದ ಪುಲಕೇಶಿ. ಇಪ್ಪತ್ತರ ವಯಸ್ಸು, ಮುಗ್ದ ಮುಕ. ಗಾಬರಿ ಮತ್ತು ಹೆದರಿಕೆ ಅವನ ಮುಕದಲ್ಲಿ ಎದ್ದು ಕಾಣುತ್ತಿತ್ತು. ಬೆವರು ಹಣೆಯಂಚಿನಿಂದ ಇಳಿದು, ಗಲ್ಲ ದಾಟಿ, ಗದ್ದದಿಂದ ತೊಟ್ಟಿಕ್ಕುತ್ತಿತ್ತು. ಪುಲಕೇಶಿಯವರ ಎದುರಿಗೆ ನಿಂತಿದ್ದರೂ ಒಂದೆರಡು ಸಾರಿ ಹಿಂದೆ ತಿರುಗಿ ತನ್ನನ್ನು ಯಾರೂ ನೋಡುತ್ತಿಲ್ಲವೆಂದು ಕಾತ್ರಿ ಮಾಡಿಕೊಂಡ. ಪುಲಕೇಶಿ ಅವನನ್ನೇ ದಿಟ್ಟಿಸಿದ.

"ಸಾರ್. ನಿಮ್ ಸಹಾಯ ಬೇಕಿತ್ತು. ನನ್ ಜೀವ ಅಪಾಯದಲ್ಲಿದೆ." ಎಂದು ಹೇಳಿ ಮತ್ತೆ ಹಿಂದೆ ತಿರುಗಿ ನೋಡಿದ ಏದುಸಿರು ಬಿಡುತ್ತಾ.

ಪುಲಕೇಶಿ ಕುರ‍್ಚಿಯಿಂದ ಎದ್ದು, ಕಯ್ಯಲ್ಲಿದ್ದ ಹೊತ್ತಗೆ ಮೇಜಿನ ಮೇಲಿಟ್ಟು, ಅಂಗಡಿಯ ಹೊರಗೆ ಹೋಗಿ ಅತ್ತಿತ್ತ ನೋಡಿ ಮರಳಿ ಬಂದು, "ಇಲ್ಲಿ ಮಾತಾಡುವುದು ಬೇಡ, ಮೇಲೆ ನನ್ ಮನೆಗೆ ಹೋಗೋಣ ಬನ್ನಿ" ಎಂದು ಕರೆದುಕೊಂಡು ಹೋದನು, ಅಂಗಡಿ ನೋಡಿಕೊಳ್ಳಲು ಅವನ ಬಂಟ ಹನುಮನನ್ನು ಬಿಟ್ಟು.

ಮನೆಯ ಒಳಗೆ ಬಂದು, ಬಾಗಿಲು ಹಾಕಿ ಮಾತಾಡಿದನು ಪುಲಕೇಶಿ, "ನಿಮ್ಮನ್ನ ಪಾಲೋ ಮಾಡ್ತಾಯಿರೋದು ಯಾರು ಅಂತ ನಿಮಗೆ ಗೊತ್ತಾ?"

"ಇಲ್ಲಾ ಸರ್"

"ಸರಿ. ಹೇಳಿ, ನನ್ನಿಂದ ಏನ್ ಸಹಾಯ ಆಗ್ಬೇಕು ಅಂತ"

“ಸರ್ ನನ್ ಹೆಸರು ಅನುಪಮ್ ಅಂತ. ನನ್ ತಂದೆ ಕೋಲಾರ ಮಹಾದೇವಯ್ಯನವರು. ನೀವು ಕೇಳಿರಬೇಕು ಅವ್ರ ಹೆಸರು”

“ಓ... ಕೇಳಿದೀನಿ. ತುಂಬಾ ಶ್ರೀಮಂತರು, ಒಳ್ಳೇ ಸಮಾಜ ಸೇವಕರು. ಎರಡು ವರ್ಶ್ಯಗಳ ಕೆಳಗೆ ತೀರಿ ಹೋದ್ರು ಅಲ್ವಾ?”

“ಹೌದು ಸರ್.” ಎಂದು ಮಂಕಾಗಿ ಸುಮ್ಮನಾದ.

“ಈಗ ನಿಮಗಾಗಿರೋ ತೊಂದ್ರೆ ಏನು ಹೇಳಿ” ಎಚ್ಚರಿಸುವ ರೀತಿಯಲ್ಲಿ ಕೇಳಿದ ಪುಲಕೇಶಿ.

“ಒಂದು ವಾರದಿಂದ ನನ್ನನ್ನಾ ಯಾರೋ ಯಾವಾಗಲೂ ಪಾಲೋ ಮಾಡ್ತಿದಾರೆ ಸರ್. ಮನೆ, ಕಾಲೇಜು, ಹೀಗೆ ನಾ ಎಲ್ಲೆಲ್ಲಿ ಹೋಗ್ತಿನೋ ಅಲ್ಲೆಲ್ಲಾ”

“ಬರೀ ಪಾಲೋ ಮಾಡ್ತಾರಾ ಅತವಾ ತೊಂದ್ರೆ ಏನಾದ್ರು?”

“ಇಲ್ಲಾ ಸರ್. ಇದುವರ್ಗು ತೊಂದರೆ ಮಾಡಿಲ್ಲಾ”

“ತೊಂದ್ರೆ ಮಾಡಬಹುದು ಅಂತ ನಿಮಗ್ಯಾಕೆ ಅನ್ಸುತ್ತೆ?”

“ಹೇಳ್ತೀನಿ ಸರ್” ಎನ್ನುತ್ತ ತನ್ನ ಕತೆ ಶುರುಮಾಡಿದನು, “ನನ್ ತಾಯಿ ತೀರಿ ಹೋದಮೇಲೆ ನನ್ ಅಪ್ಪ ಇನ್ನೊಂದು ಮದುವೆ ಆದ್ರು. ನನಗೆ ಆಗ ನಾಲ್ಕು ವರ್ಶ್ಯ. ಆ ಹೆಂಗಸು ತುಂಬಾ ಸ್ಟ್ರಿಕ್ಟು ಸರ್, ಎಲ್ಲಾ ಅವಳು ಹೇಳ್ದಂಗೆ ಆಗ್ಬೇಕು. ಒಂದೊಂದ್ ಸಾರಿ ಅಪ್ಪಂಗೇ ಬಯ್ತಿದ್ಲು ಅಂತೀನಿ... ಅವ್ಳಗೆ ನನ್ ಕಂಡ್ರೆ ಅಷ್ಟಕ್ಕಶ್ಟೇ. ಆದ್ರೂ ಅಪ್ಪಾ ನಂಗೆ ತುಂಬಾ ಪ್ರೀತಿ ಮಾಡ್ತಿದ್ರು. ಎಲ್ಲಾ ಹೆಂಗೋ ನಡಕೊಂಡು ಬಂತು ಸರ್. ನಮ್ ಅಪ್ಪ ತೀರಿಹೋದ ಮೇಲೆ ಮನೆಯವರ ಮೇಲೆಲ್ಲಾ ನಿದಾನವಾಗಿ ಹಿಡಿತ ತೊಗೊಂಡ್ಳು. ಅದೂವರೆಗೂ ನಮ್ ಜೊತೇಲೆ ಇದ್ದ ನಮ್ ಚಿಕ್ಕಪ್ಪ, ನಮ್ ಮನೆ ಬಿಟ್ಟು ಹೊರಟೋದ್ರು ಸರ್. ಹೇಳ್ಕೊಳ್ಳೋಕೆ ಕೋಟ್ಯಾದಿಶ್ವರರ ಮಗ, ಆದ್ರೆ ಈಗ ಒಂದ್ ಜೊತೆ ಬಟ್ಟೆ ತೊಗೋಬೇಕಾದ್ರೂ ಅವಳ ಹತ್ರಾನೇ ದುಡ್ ಕೇಳ್ಬೇಕು”

“ಇರಲಿ, ಜೀವನದಲ್ಲಿ ನಾವು ಅಂದ್ಕೊಳ್ದೆ ಇದ್ರೂ ಬಿಡುಗಡೆ ಪಡೆಯೋ ಸಮಯ ಸಂದರ್ಬ ಬರುತ್ತೆ. ಮುಂದೇನಾಯ್ತು ಹೇಳಿ”

ಪುಲಕೇಶಿಯ ಮಾತು ಅವನಿಗೆ ಅರ್ತವಾಗಲಿಲ್ಲ. ಗಲಿಬಿಲಿಗೊಂಡರೂ ಮಾತು ಮುಂದುವರೆಸಿದ, “ಈಗ ಒಂದ್ ವಾರದ ಹಿಂದೆ ಅಪ್ಪನ ಗೆಳೆಯ ಕ್ರಿಶ್ಣಮೂರ್ತಿಯವ್ರು ನನ್ ಕಾಲೇಜ್ ಹತ್ರ ಬಂದು ನನ್ನನ್ನಾ ಅವ್ರ ಮನೆಗೆ ಕರಕೊಂಡೋದ್ರು. ಅಲ್ಲಿ ಅವರು ಹೇಳಿದ್ದ್ ಕೇಳಿನೇ ನಂಗೆ ಹೆದರಿಕೆ ಶುರು ಆಯ್ತು ಸರ್”

“ಏನದು?”

“ಯಾರಿಗೂ ಗೊತ್ತಾಗ್ದಿರೋ ಹಾಗೆ ಅಪ್ಪಾ ನನ್ ಹೆಸರಲ್ಲಿ ಆಸ್ತಿ ಬರೆದಿಟ್ಟಿದಾರಂತೆ. ನೂರ್ ಎಕರೆ ಕಾಪಿ ತೋಟ, ಇದೇ ಊರಲ್ಲಿ ಎರಡು ಬಂಗ್ಲೆ, ಮಯ್ಸೂರಲ್ಲಿ ಅದೆಶ್ಟೋ ಜಾಗ ಅಂತೆ, ಹೀಗೆ ಇನ್ನೂ ಏನೇನೋ ಹೇಳಿದ್ರು. ಅಪ್ಪಾ ಅದನ್ನೆಲ್ಲಾ ಯಾರಿಗೂ ಹೇಳಿಲ್ವಂತೆ”

“ಈ ಕ್ರಿಶ್ಣಮೂರ್ತಿಯವರು ನಿನ್ಗೆ ಈಗ ಯಾಕೆ ಇದನ್ನೆಲ್ಲ ಹೇಳ್ತಿದಾರೆ, ನಿಮ್ಮ ತಂದೆ ಸತ್ತು ಎರಡು ವರ್ಶ್ಯ ಆದ್ಮೇಲೆ?”

“ಒಂದೆರಡು ವರ್ಶ್ಯ ಬಿಟ್ಟು ನನಗೆ ಇದನ್ನೆಲ್ಲಾ ಹೇಳ್ಬೇಕು ಅಂತ ಅಪ್ಪಾನೇ ಸಾಯೋವಾಗ ಬೇಡಿಕೊಂಡಿದ್ರಂತೆ. ನೀನು ಆದಶ್ಟೂ ಬೇಗ ಓದು ಮುಗಿಸಿ ಅದರ ಉಸ್ತುವಾರಿ ಎಲ್ಲಾ ತೊಗೋಬೇಕು ಅಂತ ಹೇಳಿದ್ರು”

“ಮುಂದೆ?”

“ಅವರ ಮನೆಗೆ ಹೋಗಿ ಬಂದಾಗಿಂದ ನನ್ನನಾ ಯಾರೋ ಪಾಲೋ ಮಾಡ್ತಾ ಇದಾರೆ. ನನಗೇನಾದ್ರು ಅಪಾಯ ಮಾಡಿದ್ರೆ ಅಂತ ಬಯ ಸಾರ್”

“ನಿಮ್ ಪ್ರಕಾರ ಇದನ್ನೆಲ್ಲಾ ನಿಮ್ ಚಿಕ್ಕಮ್ಮ, ಅಂದ್ರೆ ನಿಮ್ ತಂದೆಯವರ ಎರಡನೇ ಹೆಂಡ್ತಿ ಮಾಡಸ್ತಿರೋದು ಅಂತಾ ನಾ?”

“ಗೊತ್ತಿಲ್ಲ ಸರ್. ಅವ್ರೂ ಇರಬಹುದು, ಇಲ್ಲಾ ಅಪ್ಪಾ ಇಬ್ರನ್ನಾ ದತ್ತು ತೊಗೊಂಡಿದಾರಲ್ಲಾ ಅವ್ರು ಇದ್ರೂ ಇರಬಹುದು. ಅವರು ತುಂಬಾ ಕೆಟ್ಟವ್ರು ಸರ್"

“ನಿಮ್ ಅಪ್ಪಾ ಯಾವಾಗ ದತ್ತು ತೊಗೊಂಡಿದ್ದು? ಅವ್ರು ನಿಮ್ ಜೊತೆ ನಿಮ್ ಮನೇಲೇ ಇದಾರ?”

“ಅಮ್ಮಾ ಬದುಕಿದ್ದಾಗಲೇ ಅಂತೆ... ಅಂದ್ರೆ ನಾ ಇನ್ನೂ ಹುಟ್ಟಿರಲಿಲ್ಲ. ಅವಾಗ್ಲೇ ದತ್ತು ತೊಗೊಂಡಿದ್ದು. ಹೌದು ಅವರು ನಮ್ ಮನೇಲೇ ಇದಾರೆ"

“ನಿಮ್ ಚಿಕ್ಕಮ್ಮಂಗೆ ಮಕ್ಕಳಿಲ್ವಾ?”

“ಇಲ್ಲಾ ಸರ್"

“ನಿಮ್ ತಂದೆ ದತ್ತು ತೊಗೊಂಡಿರೋ ಹುಡುಗ್ರು ಕೆಟ್ಟವ್ರು ಅಂದ್ರಿ. ಯಾಕೆ?”

“ಬರೀ ಕುಡಿತಾರೆ ಸರ್"

“ಹಮ್... ಅವ್ರು ಕುಡಿಯೋದು ನಿಮ್ ಅಪ್ಪಾ ಸತ್ ಮೇಲೆ ಅನ್ಸುತ್ತೆ, ಅಲ್ವಾ?”

“ಹೌದು ಸರ್. ನಿಮಗ್ ಹೇಗ್ ಗೊತ್ತಾಯ್ತು?”

“ಇರಲಿ, ಈಗ ನಿಮ್ಮನ್ನಾ ಪಾಲೋ ಮಾಡ್ತಾಯಿರೋದು ಯಾರು ಅಂತ ಪತ್ತೆ ಹಚ್ಬೇಕಾ?”

“ಹೌದು ಸರ್. ನಿಮಗ್ ಕೊಡೋಕೆ ನನ್ ಹತ್ರ ಈಗ ದುಡ್ಡಿಲ್ಲ. ಈ ಉಂಗುರ ಇದೆ ಸಾರ್ ಅಪ್ಪಾ ಕೊಟ್ಟಿದ್ದು. ಇದನ್ನೇ ಇಟ್ಕೊಳ್ಳಿ. ಮುಂದೆ ದುಡ್ಡು ಕೊಟ್ಟು ಇದನ್ನಾ ವಾಪಸ್ ತೊಗೊಂಡ್ ಹೋಗ್ತೀನಿ"

“ಬೇಡಾ ಬೇಡಾ. ನಿಮ್ ತಂದೆ ಎಂತಾ ಸಮಾಜ ಸೇವೆ ಮಾಡಿದಾರೆ. ನಿಮ್ಮಿಂದ ಈ ಉಂಗುರ ತೊಗೊಳ್ಳೋದು ಸರಿ ಇರೊಲ್ಲ. ಆದ್ರೆ ಒಂದ್ ಮಾತು. ನಾನು ಇಂತಾ ಕೇಸೆಲ್ಲಾ ಹಿಡಿಯೋದಿಲ್ಲಾ. ಇದಕ್ಕೆ ಅಂತ ನನಗೆ ಗೊತ್ತಿರೋರು ಒಬ್ರು ಇದಾರೆ. ಪಾಲೋ ಮಾಡೋದು, ಮಾಡ್ತಿರೋರು ಯಾರು ಅಂತ ಪತ್ತೆ ಹಚ್ಚೋದು, ಇಂತದ್ದೆಲ್ಲಾ ನೀಟಾಗಿ ಮಾಡ್ತಾರೆ. ಅವರ ಅಡ್ರೆಸ್ ಕೊಡ್ತೀನಿ. ನೀವು ಅವರ ಜೊತೆ ಮಾತಾಡಿ. ನಾನೂ ಹೇಳಿರ್ತೀನಿ. ಉಂಗುರ ಕೊಡೋಕ್ ಹೋಗ್ಬೇಡಿ, ನಿದಾನವಾಗಿ ದುಡ್ ಕೊಟ್ರೆ ಆಯ್ತು"

ತುಂಬಾ ನಿರೀಕ್ಷೆ ಇಟ್ಟುಕೊಂಡು ಬಂದಿದ್ದ ಅವನಿಗೆ ನಿರಾಸೆಯಾಯಿತು. ಅವನ ಮಂಕಾದ ಮುಕ ನೋಡಿ ಪುಲಕೇಶಿ ಸಮಾದಾನ ಹೇಳಿದನು, “ತುಂಬಾ ತಲೆ ಕೆಡಿಸಿಕೊಳ್ಳಬೇಡಿ. ನೀವ್ ಹೋಗಿ ಅವರನ್ನಾ ಮೀಟ್ ಮಾಡಿ, ಎಲ್ಲಾ ಸರಿ ಹೋಗುತ್ತೆ. ನನ್ ನಂಬರ್ ತೊಗೊಳ್ಳಿ, ಏನಾದ್ರು ತೊಂದ್ರೆ ಆದ್ರೆ ಕಾಲ್ ಮಾಡಿ" ಎಂದು ಅವನನ್ನು ಸಮಾದಾನ ಪಡಿಸಿ ಕಳಿಸಿದನು. ಹೊರಗಡೆ ಮೋಡಕವಿದು ಮಳೆಗರೆಯಲು ಅಣಿಯಾಗುತ್ತಿತ್ತು.

ಮಾರನೇಯ ದಿನ ಬೆಳಗ್ಗೆ ಟಿವಿ ನೋಡುವಾಗ ಬಂದ ಸುದ್ದಿ ಕೇಳಿ ಗಾಬರಿಯಾದನು ಪುಲಕೇಶಿ. ನಿನ್ನೆ ತನ್ನ ಮನೆಗೆ ಬಂದಿದ್ದ ಹುಡುಗ, ಅನುಪಮ್, ರೇಸ್ ಕೋರ್ಸ್ ರಸ್ತೆಯಲ್ಲಿದ್ದ ಅವನ ತಂದೆಯ ಮನೆಯಲ್ಲಿ ಹಿಂದಿನ ರಾತ್ರಿ ಕೊಲೆಯಾಗಿದ್ದನು. ಪೊಲೀಸರು ಆಗಲೇ ತನಿಕೆ ಶುರುಮಾಡಿದ್ದರು. ಪಾಪ ಎನಿಸಿ ಪುಲಕೇಶಿ ಮನಸ್ಸಿಗೆ ತುಂಬಾ ನೋವಾಯಿತು. ತಡೆದುಕೊಳ್ಳಲಾಗಲಿಲ್ಲ, ತನ್ನ ಗೆಳೆಯ ಎಸ್. ಆಯ್ ಶಶಿದರ್ ಗೆ ಕರೆಮಾಡಿ, ಮಹದೇವಯ್ಯನವರ ಮನೆ ವಿಳಾಸ ಪಡೆದು ಅಲ್ಲಿಗೆ ಬಂದನು. ಅಲ್ಲಿದ್ದ ಇನ್ನೊಬ್ಬ ಎಸ್. ಆಯ್, ಪುಲಕೇಶಿಯನ್ನು ಗುರುತು ಹಿಡಿದು ಮಾತನಾಡಿಸಿದನು.

“ನಮಸ್ಕಾರ ಪುಲಕೇಶಿಯವರೇ, ನಿಮ್ ತಂದೆ ಇದ್ದಿದ್ರೆ ಈ ಕೇಸನ್ನಾ ಈಗಿಂದೀಗ್ಲೆ ಮುಗಸ್ಬಿಟ್ಟಿರೋರು. ಬರೀ ಹೆಣ ನೋಡಿ ಕೊಲೆ ಹಿಂಗಿಂಗೇ ಆಯ್ತು ಅಂತ ತಟ್ ಅಂತಾ ಹೇಳೋರು. ಅಂತಾವ್ರು ನಮ್ ಡಿಪಾರ್ಟ್ಮೆಂಟಲ್ಲಿ ಇದ್ದದ್ದೇ ನಮಗ್ ಹೆಮ್ಮೆ ನೋಡಿ"

ಪುಲಕೇಶಿಗೆ ಅಪ್ಪನ ಬಗ್ಗೆ ಹೆಮ್ಮೆಯಾಯ್ತು. "ಏನಾದ್ರು ಗೊತ್ತಾಯ್ತಾ ಸರ್?" ಕೇಸಿನ ಬಗ್ಗೆ ಕೇಳಿದನು ಪುಲಕೇಶಿ.

"ಇನ್ನೂ ಇಲ್ಲಾ. ಇನ್ನೇನು ಹೆಣ ಪೋಸ್ಟ್ ಮಾರ್ಟಮ್ಗೆ ಕಳಿಸ್ಬೇಕು"

"ಓಹ್! ನಾನೊಂದ್ಸಲಾ ನೋಡಬಹುದಾ?"

"ನೋಡಿ, ಅದಕ್ಕೇನು"

ಪುಲಕೇಶಿ ಮನೆಯ ಒಳಗೆ ಹೋದ. ವಿಶಾಲವಾದ ಮನೆ. ನಡುಮನೆಯ ಎಡಗಡೆ ಅಡಿಗೆ ಮನೆ, ಅದರ ಪಕ್ಕ ಒಂದು ಕೋಣೆ. ಬಲಬಾಗದಲ್ಲಿ ಮೇಲಿನ ಮಹಡಿಗೆ ಹೋಗಲು ಕಟ್ಟೆಗಳು. ಕಟ್ಟೆಗಳ ಹಿಂದೆ ಇನ್ನೂ ಎರಡು ಕೋಣೆಗಳು. ಬಗೆಬಗೆಯ ತಿಟ್ಟಗಳು, ಹೂಗುಚ್ಚಗಳಿಂದ ಮನೆಯನ್ನು ಅಚ್ಚುಕಟ್ಟಾಗಿ ಅಲಂಕರಿಸಲಾಗಿತ್ತು. ಅಡಿಗೆಮನೆಗೆ ಹೊಂದಿಕೊಂಡಿದ್ದ ಊಟ ಮಾಡುವ ಮೇಜಿನ ಬಳಿಯಲ್ಲಿ ಬಿದ್ದಿತ್ತು ಅವನ ಹೆಣ. ನೇರ ಹೆಣದ ಬಳಿಗೆ ಹೋದನು ಪುಲಕೇಶಿ. ಅಲ್ಲಿಯೇ ಸೋಪಾದ ಮೇಲೆ ಕುಳಿತಿದ್ದ ಒಬ್ಬ ಹೆಂಗಸು, ಪುಲಕೇಶಿಯನ್ನು ನೋಡಿ, ಮೇಲೆದ್ದು,

"ಯಾರ್ರೀ ನೀವು?" ಜೋರು ದನಿಯಲ್ಲಿ ಕೇಳಿದಳು. ಅಲ್ಲಿದ್ದ ಒಬ್ಬ ಪೇದೆಕಡೆಗೆ ತಿರುಗಿ, "ಯಾರ್ರೀ ಇವ್ರು? ಯಾರ್‍ಯಾರೋ ಬಂದು ಮನೆಯಲ್ಲಾ ಗಲೀಜು ಮಾಡ್ತಾರೆ. ಈಗಾಗ್ಲೆ ನೀವು ಶೂ ಹಾಕೊಂಡು ಮನೆಯಲ್ಲಾ ಓಡಾಡಿದ್ ಸಾಲ್ದಾ? ನೋಡಿ ಇಲ್ಲಿ, ಎಲ್ ಬೇಕೋ ಅಲ್ಲೆಲ್ಲಾ ಒಡಾಡಿ ಹೇಗೆ ನೆಲ ಕೊಳೆಯಾಗಿದೆ ಅಂತಾ" ಎಂದು ಅಲ್ಲಲ್ಲಿ ಬೂಟುಗಾಲಿಂದ ಆಗಿದ್ದ ಚೂರು ಪಾರು ಕೊಳೆ ತೋರಿಸಿದಳು.

ಪುಲಕೇಶಿ ತನ್ನ ಪರಿಚಯ ಹೇಳಿಕೊಂಡ. ತಾನೊಬ್ಬ ಪತ್ತೇದಾರ, ತನ್ನ ತಂದೆ ಪೋಲೀಸ್ ಇಲಾಕೆಯಲ್ಲಿದ್ದರು ಎಂದು ತುಸು ವಿವರ ನೀಡಿದ. ಎಸ್. ಆಯ್ ಅವರಿಗೆ ಸಹಾಯಕನಾಗಿ ಬಂದಿರುವುದಾಗಿ ಹೇಳಿ, ತನ್ನ ಬೂಟುಗಳನ್ನು ಹೊರಗಡೆ ಬಿಟ್ಟೆ ಬಂದಿರುವುದನ್ನು ಅವಳಿಗೆ ತೋರಿಸಿ ಸಮಾದಾನ ಪಡಿಸಿಲು ಪ್ರಯತ್ನಿಸಿದ. ಅವಳ ಸಿಟ್ಟು ಕಮ್ಮಿಯಾಗಲಿಲ್ಲ. ತಡೆದುಕೊಂಡು ಕುಂತಳು. ಪುಲಕೇಶಿ ಮತ್ತೆ ಹೆಣದ ಕಡೆಗೆ ಹೋಗಿ ಚುರುಕಾದನು.

ಹೆಣದ ಕಾಲಿನಲ್ಲಿ ಶೂ ಇರಲಿಲ್ಲ. ಸದ್ಯ ಶೂ ಇಲ್ಲ ಎಂದುಕೊಂಡ ಪುಲಕೇಶಿ. ಇಲ್ಲದಿದ್ದರೇ ಹೆಣಕ್ಕೂ ಬಯ್ಯುತ್ತಿದ್ದಳೇನೋ ಎಂದುಕೊಂಡು ಮನದಲ್ಲೇ ನಕ್ಕ. ಆದರೆ ಕಾಲುಚೀಲಗಳು ಇದ್ದವು. ಸ್ವಲ್ಪ ಕೊಳೆಯಾಗಿದ್ದವು. ಮುಟ್ಟಿ ನೋಡಿದ. ಹಸಿ ಇತ್ತು. ಹಿಂದಿನ ದಿನ ರಾತ್ರಿ ಮಳೆಯಲ್ಲಿ ನೆನದಿರಬೇಕು ಎಂದು ತೀರ್ಮಾನಿಸಿದ. ಊಟ ಮಾಡುವ ಮೇಜಿನ ಮೇಲೆ ಅನ್ನ ಕಲಿಸಿದ್ದ ತಟ್ಟೆ ಹಾಗೆಯೇ ಇತ್ತು. ಹೆಣದ ಬಲಗಯ್ಯ ಬೆರಳುಗಳಲ್ಲಿ ಅನ್ನದ ಅಗುಳುಗಳು ಮೆತ್ತಿಕೊಂಡಿದ್ದವು. ಹೆಣವನ್ನು ಸೂಕ್ಶ್ಮವಾಗಿ ತಪಾಸಣೆ ಮಾಡಿದ. ಎಲ್ಲಿಯೂ ರಕ್ತದ ಗುರುತಿರಲಿಲ್ಲ. ವಿಶದಿಂದ ಸತ್ತಿರಬಹುದೇ ಎಂದುಕೊಂಡ. ಮರುಕ್ಶಣ ಸಾದ್ಯವಿಲ್ಲ ಎನಿಸಿತು. ಹೆಣ ಇದ್ದ ಸ್ತಿತಿಯಿಂದ ಸಾವು ಹೇಗಾಗಿರಬಹುದು ಎಂದು ತಿಳಿಯಲು ಸಾದ್ಯವಾಗಲಿಲ್ಲ. ಬಗ್ಗಿ ನೆಲ ನೋಡಿದ. ಅಲ್ಲಲ್ಲಿ ಪೋಲೀಸರ ಬೂಟಿನ ದೂಳು ಬಿಟ್ಟರೆ ನೆಲ ಶುಚಿಯಾಗಿತ್ತು. ಅಲ್ಲಿಂದ ಎದ್ದು ನೇರ ಸೋಪಾದ ಕಡೆಗೆ ಬಂದ. ಅಲ್ಲಿ ಮಹದೇವಯ್ಯನವರ ಎರಡನೇ ಹೆಂಡತಿ, ಮತ್ತು ಅವರ ಇನ್ನಿಬ್ಬರು ದತ್ತು ಮಕ್ಕಳು ಕೂತಿದ್ದರು. ಅವರ ಹೆಂಡತಿಗೆ ಅಯ್ವತ್ತು ದಾಟಿತ್ತು. ಇಬ್ಬರೂ ಮಕ್ಕಳು ಮೂವತ್ತು ದಾಟಿದವರಂತೆ ಕಾಣುತ್ತಿದ್ದರು.

"ನಿಮ್ಮನ್ನ ಒಂದೆರಡು ಪ್ರಶ್ನೆ ಕೇಳಬಹುದಾ?" ಎಂದ.

"ಅವ್ರು ಕೇಳಿದ್ದಾಯ್ತು. ಇನ್ನು ನೀವೂ ಕೇಳ್ಬೆಕಾ?" ಎಂದಳು ಸಿಟ್ಟು ತೋರಿಸುತ್ತಾ.

"ನನ್ ಪ್ರಶ್ನೆ ತುಂಬಾ ಸಿಂಪಲ್ ಇರುತ್ತೆ. ಪೋಲೀಸರು ಕೇಳೋ ತರಾ ಇರೊಲ್ಲ"

"ಏನ್ ಬೇಗ ಕೇಳಿ. ನಂಗೂ ಬೇರೆ ಕೆಲ್ಸ ಇದೆ" ಎಂದಳು.

"ನೀವು ಯಾವಾಗ ಅನುಪಮ್ ಸತ್ತಿದ್ದು ನೋಡಿದ್ರಿ?"

"ಏನ್ರಿ... ಪೋಲೀಸರು ಕೇಳಿದ್ದ್ ಪ್ರಶ್ನೆನೇ ಕೇಳ್ತೀರಾ? ಅವರಿಗ್ ಹೇಳಿದೀನಿ. ಬೇಕಾದ್ರೆ ಅವ್ರಿಗೇ ಕೇಳಿ"

"ಸಾರಿ ಮೇಡಂ. ಹೋಗ್ಲಿ ಬಿಡಿ, ಬೇರೆ ಪ್ರಶ್ನೆ ಕೇಳ್ತೀನಿ... ನೀವು ಬೆಳಗ್ಗೆ ಎಶ್ಟೊತ್ತಿಗೆ ಏಳ್ತೀರಾ?"

“ನಾನ್ ದಿನಾಲೂ ಏಳಗಂಟೆಗೆ ಏಳೋದು. ಆದ್ರೆ ಇವತ್ತು ಕೆಲಸದವಳು ಬಂದು ಬೇಗ ಎಬ್ಬಿಸಿದ್ಳು, ಆರ್ ಗಂಟೆಗೆ. ಅವ್ಳು ಮತ್ತೆ ಅವಳ ಗಂಡ ಬಾಗ್ಲು ತಗದು ಒಳಗೆ ಬಂದಾಗ ಅನುಪಮ್ ಡಾಯನಿಂಗ್ ಟೇಬಲ್ ಹತ್ರ ಬಿದ್ದಿದ್ದು ನೋಡಿದಾರೆ. ನನಗ್ ಬಂದು ಎಬ್ಬಿಸಿದ್ರು. ನಾವು ಅವನನ್ನಾ ಅಳ್ಳಾಡಿಸಿ ನೋಡಿದ್ವಿ. ಅವ್ನು ಸತ್ತಿರಬಹುದು, ಯಾವ್ದಕ್ಕೂ ಡಾಕ್ಟರ್ ಕರ್ಸ್ಕೋಣ ಅಂತ ಗುಂಡಣ್ಣ ಹೇಳ್ದ. ಡಾಕ್ಟರ್ಗೆ ಫೋನ್ ಮಾಡಿ ಬರೋಕ್ ಹೇಳ್ದೆ”

“ಈ ಗುಂಡಣ್ಣ ಯಾರು?”

“ನಮ್ ಮನೆ ಕೆಲಸದವ್ನು. ಅವ್ನು ಅವ್ನ ಹೆಂಡ್ತಿ ನಮ್ ಮನೆ ಹೊರಗಡೆ ಇರೋ ಔಟ್ ಹೌಸ್ ನಲ್ಲಿ ಇರ್ತಾರೆ”

“ಸರಿ ಮೇಡಂ. ತ್ಯಾಂಕ್ ಯು” ಎಂದು ಅವಳ ಎದುರುಗಡೆ ಸೋಪಾದ ಮೇಲೆ ಕೂತಿದ್ದ ದತ್ತು ಮಕ್ಕಳ ಕಡೆ ಹೊರಳಿದನು.

“ಸರ್ ನಿಮ್ ಹೆಸರು?”

“ಕಿರಣ್”

“ಕಿರಣ್ ಅವ್ರೆ. ನಿನ್ನೆ ರಾತ್ರಿ ನೀವು ಎಲ್ಲಿದ್ರಿ?”

“ನಾನು ಮನೇಲಿ ಇರಲಿಲ್ಲ. ರಾತ್ರಿ ನನ್ ಪ್ರೆಂಡ್ ಜೊತೆ ಪಾರ್ಟಿ ಮುಗಸ್ಕೊಂಡು ಅವ್ನ ಮನೇಲೇ ಮಲಗಿದ್ದೆ. ಬೆಳಗ್ಗೆ ಇಲ್ಲಿ ಬಂದಿದ್ದು”

“ತ್ಯಾಂಕ್ ಯು... ಸಾರ್ ನಿಮ್ ಹೆಸರು?” ಎಂದು ಇನ್ನೊಬ್ಬ ದತ್ತುಮಗನಿಗೆ ಕೇಳಿದನು.

“ಕಾರ್ತಿಕ್ ಅಂತಾ... ನಾನು ಪ್ರೆಂಡ್ ಮದ್ವೆ ಅಂತಾ ಶಿಮೊಗ್ಗಾ ಹೋಗಿದ್ದೆ. ಈಗ ತಾನೇ ಬಂದೆ. ನೋಡಿ ನನ್ ಬ್ಯಾಗ್ ಇನ್ನೂ ಇಲ್ಲೇ ಇದೆ” ಎಂದ ತನ್ನ ಕಾಲಬಳಿ ಇದ್ದ ಚೀಲ ತೋರಿದ.

“ಸರಿ ಸರ್. ತ್ಯಾಂಕ್ ಯು” ಎಂದು ಅಲ್ಲಿಂದ ಎದ್ದ ಪುಲಕೇಶಿ.

ಮುಂಬಾಗಿಲ ಬಳಿ ನಿಂತಿದ್ದ ಕೆಲಸದ ಆಳಿನತ್ತ ಬಂದು, “ನೀವೇನಾ ಗುಂಡಣ್ಣ?” ಎಂದು ಕೇಳಿದ.

“ಹೌದು ಸರ್”

“ನೀವೇ ಅಂತೆ ಮೊದಲು ಹೆಣ ನೋಡಿದ್ದು?”

“ಹೌದು ಸಾರ್. ನಾನೇ... ದಿನಾ ಬರೋಹಾಗೆ ಇವತ್ತೂ ಬಂದು, ನನ್ ಹತ್ರ ಇರೋ ಕೀ ಯಿಂದ ಬಾಗ್ಲು ತಗದು ನೋಡಿದ್ರೆ ಅನುಪಮ್ ಸಾರು ಬಿದ್ದಿದ್ರು. ನಾನು ಅಲ್ಲಾಡ್ಸಿ ನೋಡ್ದೆ, ಅವ್ರು ಏಳ್ಲಿಲ್ಲ. ಆಮೇಲೆ ಹೋಗಿ ಮೇಡಂಗೆ ಹೇಳ್ದೆ”

“ಟೇಬಲ್ ಮೇಲೆ ತಟ್ಟೆ ಇದ್ಯಲ್ಲಾ... ಅದೇ ಅನ್ನಾ ಸಾರು. ಅದು ಯಾವಾಗ್ ಮಾಡಿದ್ದು?”

“ನಿನ್ನೆ ರಾತ್ರಿ ಸರ್. ನನ್ ಹೆಂಡ್ತಿನೇ ಮಾಡಿಟ್ಟಿದ್ದು”

“ನಿನ್ನೆ ರಾತ್ರಿ ಇಲ್ಲಿ ಮಳೆ ಎಷ್ಟೊತ್ತಿಗೆ ನಿಂತಿದ್ದು?”

“ಸುಮಾರು ಹೊನ್ನೊಂದು ಗಂಟೆ ಸರ್”

“ಸರಿ” ಎಂದು ಪುಲಕೇಶಿ ಅವನ ಹೆಗಲ ಮೇಲೆ ಕಯ್ಯಿಟ್ಟು, ಪಿಸುದನಿಯಲ್ಲಿ, “ನಿಮ್ ಮೇಡಂ ಏನಯ್ಯಾ ಹಂಗ್ ಬಯ್ತಾರೆ. ತುಂಬಾ ಸ್ಟ್ರಿಕ್ಟಾ?”

"ಹೌದು ಸರ್. ಅವ್ರಿಗೆ ಮನೆ ತುಂಬಾ ನೀಟಾಗ್ ಇರ್ಬೇಕು. ಎಲ್ಲಾದ್ರು ಒಂಚೂರು ಕಸ ಕಾನ್ಸಿದ್ರು ಸಾಕು ಇಡೀ ಮನೆ ಗುಡ್ಸೋಕ್ ಹೇಳ್ತಾರೆ. ಒಂದೊಂದ್ಸಾರಿ ಸಿಟ್ಟ ಬಂದು ತಾವೇ ಪೊರಕೆ ಹಿಡಕೊಂಡು ಗುಡ್ಸೋಕೆ ಶುರು ಮಾಡಬಿಡ್ತಾರೆ ಸಾರ್" ಎಂದು ನಕ್ಕ.

ಪುಲಕೇಶಿಯೂ ನಕ್ಕ. ಮುಂದುವರೆಸಿ, "ಅನುಪಮ್ ಸರ್ ಅವ್ರು ಶೂ ಯಾವ್ದು ತೋರಿಸ್ತೀರಾ?"

"ಹೂಂ ಸರ್" ಎಂದು ಮನೆಯ ಹೊರಗೆ ಇರುವ ಶೂ ಇಡುವ ಜಾಗಕ್ಕೆ ಕರೆದುಕೊಂಡು ಹೋದ ಗುಂಡಣ್ಣ, ಅನುಪಮ್ ನ ಶೂಗಳನ್ನು ತೋರಿಸಿದ. ಜೋರಾಗಿ ಮಳೆಯಾಗಿದ್ದರಿಂದ ಅಲ್ಲಿದ್ದ ಶೂಗಳಲ್ಲಿ ಸ್ವಲ್ಪ ನೀರು ತುಂಬಿತ್ತು. ಕಾಲಿ ಇದ್ದ ಶೂಗಳು ಮೂರು ಜೊತೆ. ಒಂದು ಅನುಪಮ್, ಇನ್ನೆರಡು ದತ್ತು ಮಕ್ಕಳದು.

"ಗುಂಡಣ್ಣ, ನನಗೆ ಇನ್ನೊಂದು ವಿಚಾರ ಗೊತ್ತಾಗ್ಲಿಲ್ಲ ನೋಡು. ಇಶ್ಟ ದೊಡ್ಡ ಮನೆಗೆ ಸೆಕ್ಯೂರಿಟಿ ಇಲ್ವಾ?"

"ಸಾರ್ ಈ ಕಾಲೋನಿಯಲ್ಲಿ ಎಲ್ಲಾ ದೊಡ್ಡವರ ಮನೆಗಳೇ ಇರೋದು. ಪೊಲೀಸರು ರಾತ್ರಿ ಬೀಟ್ ಹಾಕ್ತಾನೇ ಇರ್ತಾರೆ. ಹಾಗಾಗಿ ಯಾರೂ ಸೆಕ್ಯೂರಿಟಿ ಇಟ್ಕೊಂಡಿಲ್ಲ"

"ಓ... ಸರಿ" ಎಂದು ಅಲ್ಲಿಂದ ಹೊರಟು, ಮನೆಯ ಹೊರಗೆ ನಿಂತಿದ್ದ ಎಸ್. ಆಯ್ ಕಡೆಗೆ ಬಂದು ಅವರ ಜೊತೆ ಏನೋ ಮಾತಾಡಿದ. ನಂತರ ಇಬ್ಬರೂ ಸೇರಿ ಮನೆಯ ಒಳಗೆ ಹೋದರು. ಅಲ್ಲಿ ಕುಳಿತಿದ್ದ ಮೇಡಂ, ದತ್ತು ಮಕ್ಕಳು, ಮತ್ತು ಆಳುಗಳಿಗೆ ಎಸ್. ಆಯ್ ಹೇಳಿದರು, "ಎಲ್ರೂ ದಯವಿಟ್ಟು ನಮ್ ಪೇದೆಗೆ ನಿಮ್ ಪಿಂಗರ್ ಪ್ರಿಂಟ್ಸ ಕೊಡಿ" ಎಂದು ತಮ್ಮ ಹಿಂದೆ ನಿಂತಿದ್ದ ಪೇದೆಯಡೆಗೆ ಸನ್ನೆ ಮಾಡಿದರು. ಪೇದೆ ಪಿಂಗರ್ ಪ್ರಿಂಟ್ಸ ತೆಗೆದುಕೊಳ್ಳಲು ಅಣಿಯಾದ.

ಮೇಡಂ ಮಾತಾಡಿದರು, "ಅಲ್ರೀ, ಅನುಪಮ್ ಎಬ್ಬಿಸೋಕೆ ನಾನೇ ಅವನ ಮಯ್ ಹಿಡ್ದು ಅಲ್ಲಾಡಿಸಿದೀನಿ. ಅವನ ಮಯ್ ಮೇಲೆ ನನ್ ಪಿಂಗರ್ ಪ್ರಿಂಟ್ಸ ಸಿಕ್ಕಿ, ನೀವು ನಾನೇ ಕೊಲೆ ಮಾಡಿದ್ದು ಅಂದ್ರೆ?"

ಎಸ್. ಆಯ್ ಸಮಾದಾನ ಹೇಳಿದರು, "ಇಲ್ಲಾ ಮೇಡಂ. ಪಕ್ಕಾ ಎವಿಡೆನ್ಸ್ ಇಲ್ದೆ ನಾವು ಹಾಗೆ ಹೇಳೋಕ್ ಆಗೊಲ್ಲಾ. ಕೋರ್ಟ್ನಲ್ಲೂ ಅದು ನಿಲ್ಲೊಲ್ಲ"

"ಸರಿ" ಎಂದರು ಮೇಡಂ.

"ಹಾಗೇ ಎಲ್ರೂ ನಿಮ್ಮ್ ಒಂದೊಂದು ಕೂದಲು ಕೊಡಿ, ಪ್ಲೀಸ್"

"ಕೂದಲು ಯಾಕೆ?" ಮತ್ತೆ ಕೇಳಿದರು ಮೇಡಂ.

"ರೂಲ್ಸು ಮೇಡಂ. ನಮ್ ರೆಕಾರ್ಡ್ಗೆ ಅಶ್ಟೇ"

ಎಲ್ಲರೂ ತಮ್ಮ ತಮ್ಮ ಬೆರಳಚ್ಚು ಮತ್ತು ಕೂದಲು ಕೊಟ್ಟರು. ಪೇದೆ ಸರಿಯಾಗಿ ಜೋಡಿಸಿಕೊಂಡನು.

**********************************************************************************

ಮಾರನೆಯ ದಿನ ಪುಲಕೇಶಿ ಪೊಲೀಸ್ ಸ್ಟೇಶನ್ ಗೆ ಹೋಗಿ, ಕೇಸಿನ ಎಸ್. ಆಯ್ ಅವರನ್ನು ಕಂಡನು. ಎಸ್. ಆಯ್ ಕುಳಿತುಕೊಳ್ಳಲು ಹೇಳಿ ಕೇಸಿನ ಬೆಳವಣಿಗೆ ಹೇಳಿದರು.

"ಮೊದಲನೇ ದತ್ತು ಮಗ, ಕಿರಣ್, ಹಿಂದಿನ ರಾತ್ರಿ ಪ್ರೆಂಡ್ ಜೊತೆ ಇದ್ದೆ ಅಂತ ಹೇಳಿದ್ದಾ... ಆ ಪ್ರೆಂಡನ್ನು ಸ್ಟೇಶನ್ ಕರದು ಕೇಳಿದ್ವಿ"

"ಏನ್ ಹೇಳ್ದ?"

“ಅವ್ನು ತುಂಬಾ ಕುಡದಿದ್ನಂತೆ. ನನಗ್ ಏನೂ ನೆನೆಪಿಲ್ಲಾ ಸರ್ ಅಂದ. ನನಗ್ ಬೆಳಿಗ್ಗೆ ಎಚ್ಚರ ಆದಾಗ ನಾನು ನನ್ ಮನೇಲಿದ್ದೆ. ಕಿರಣ್ ಇರಲಿಲ್ಲ ಅಂದ. ಆದ್ರೆ ಕಿರಣ್ ಅವ್ನ ಮನೇಲಿ ಆಗಾಗ ಮಲಗೋದು ನಾರ್ಮಲ್ ಅಂತೆ. ಕುಡಿಯೋದು, ಇಬ್ರಲ್ ಒಬ್ರು ಎಚ್ಚರ ತಪ್ಪೋದು, ಅವ್ನ ಮನೇಲೇ ಮಲಗೋದು ನಡಿತಿರುತ್ತೆ ಅಂದ"

“ಹುಂ… ನೀವ್ ಏನ್ ಮಾಡಿದ್ರಿ?”

“ನಮ್ ಹುಡುಗನ್ನಾ ಫಾಲೋ ಮಾಡೋಕ್ ಬಿಟ್ಟಿದೀನಿ. ನೋಡೋಣ"

“ಇನ್ನೊಬ್ಬನ ಕತೆ ಏನು?”

“ಅವ್ನು ಹೇಳೋದು ನಿಜ ಇದ್ರೂ ಇರಬಹುದು. ಮದುವೆ ನಡೆದ ಮನೆಯಲ್ಲಿ ವಿಚಾರಿಸೋಕೆ ಶಿವಮೊಗ್ಗ ಪೊಲೀಸರಿಗೆ ಹೇಳಿದ್ದೆ. ಅವ್ನು ಅಲ್ಲೇ ಇದ್ನಂತೆ. ಆದ್ರೆ ಊಟ ಮುಗಿಸ್ಕೊಂಡು ತನ್ನ ಕಾರಲ್ಲಿ ಬೇಗ ಹೊರಟ್ನಂತೆ. ಇಲ್ಲಿಗೆ ಬರೋದಕ್ಕೆ ಹದಿನೆಂಟು ಗಂಟೆ ಯಾಕೆ ತೊಗೊಂಡ ಅನ್ನೋದು ಗೊತ್ತಾಗಲಿಲ್ಲ. ಅವನನ್ನೇ ಕೇಳ್ಬೇಕು"

“ಅವನ ಹಿಂದೆನೂ…"

“ಬಿಟ್ಟಿದೀನಿ"

“ಸರಿ" ಎಂದು ನಕ್ಕ ಪುಲಕೇಶಿ. "ಆ ಮನೆ ಕೆಲಸದವರ ಬಗ್ಗೆ ನಿಮಗ್ ಏನಾದ್ರು ಅನಿಸ್ತಾ?”

“ನಂಗೇನ್ ಅನ್ಸಿಲ್ಲಾ. ಆದ್ರೂ ಸುಮ್ಮನೆ ಬಿಡೋ ಹಾಗಿಲ್ಲ. ಅವರ ಮೊಬಾಯಿಲೂ ಟಾಪ್ ಮಾಡಿಸ್ತೀನಿ ಇರಿ"

“ಪೋಸ್ಟ ಮಾರ್ಟಮ್ ರಿಪೋರ್ಟ್ ಯಾವಾಗ್ ಬರುತ್ತೆ?”

“ಇನ್ನೇನ್ ಬರಬಹುದು. ಅದರ ಜೊತೆ ನೀವು ಕೇಳಿದ ಇನ್ನೊಂದು ರಿಪೋರ್ಟೂ ಬರುತ್ತೆ"

“ಇದು ಪ್ಲಾನ್ ಮಾಡಿ ಮಾಡಿರೋ ಕೊಲೆ ಅನ್ಸಲ್ಲಾ"

“ಯಾಕೆ?”

“ಕೊಲೆ ಮಾಡೋ ಹಾಗಿದ್ರೆ ಮನೆ ಹೊರಗೆ ಮಾಡ್ತಿರೋರು. ಮನೇಲೇ ಆದ್ರೆ ಸಿಕ್ಕಾಕೊಳ್ಳೋ ಚಾನ್ಸು ಜಾಸ್ತಿ"

“ಇದ್ರೂ ಇರಬಹುದು"

“ಅವನ ಕೊಲೆ ರಾತ್ರಿ ಮಳೆ ನಿಂತ ಮೇಲೆ, ಅಂದ್ರೆ ಸುಮಾರು ಹನ್ನೊಂದ ಗಂಟೆ ಆದ್ಮೇಲೆ ನಡದಿದೆ"

“ಹೇಗ್ ಹೇಳ್ತೀರಾ?”

ಅಶ್ವರಲ್ಲಿ ಪೇದೆಯೊಬ್ಬ ಬಂದು, “ಸರ್ ಪೋಸ್ಟ ಮಾರ್ಟಮ್ ರಿಪೋರ್ಟು ಮತ್ತು ಡಿ.ಎನ್.ಎ ರಿಪೋರ್ಟು ಇ-ಮೇಲಲ್ಲಿ ಬಂದಿದೆ. ಪ್ರಿಂಟ್ ತಗದಿದೀನಿ. ತೊಗೊಳ್ಳಿ" ಎಂದು ಕೊಟ್ಟನು.

ಪುಲಕೇಶಿ ಹೇಳಿದ ಹಾಗೆ ಹನ್ನೊಂದು ಹದಿನಯ್ದರಿಂದ ಹನ್ನೊಂದುವರೆ ನಡುವೆ ಅವನ ಕೊಲೆ ನಡೆದಿತ್ತು. ತಲೆಗೆ ಬಲವಾದ ಪೆಟ್ಟು ಬಿದ್ದು ಒಳಗಾಯವಾಗಿ ಸತ್ತಿದ್ದಾಗಿ ಇತ್ತು. ಪೋಸ್ಟ ಮಾರ್ಟೆಮ್ ರಿಪೊರ್ಟ್ನಲ್ಲಿ ಪುಲಕೇಶಿಗೆ ಅಷ್ಟೊಂದು ಒಲವಿರಲಿಲ್ಲ. ಅವನಿಗೆ ಬೇಕಾದದ್ದು ಡಿ.ಎನ್.ಎ ರಿಪೊರ್ಟು. ಅದನ್ನ ಎತ್ತಿ ನೋಡಿದ. ಅವನ ಊಹೆ ನಿಜವಾದದ್ದಕ್ಕೆ ತುಂಬಾ ಕುಶಿಯಾಯ್ತು. ಅದನ್ನು ಎಸ್. ಆಯ್ ಅವರಿಗೆ ಕೊಟ್ಟ. ಎಸ್. ಆಯ್ ಅದನ್ನು ಓದಿ ಬೆರಗಾದರು.

“ಪುಲಕೇಶಿ. ಅದ್ ಹೇಗ್ರಿ ನಿಮಗೆ ಈ ಡೌಟು ಬಂದಿದ್ದು? ಪರವಾಗಿಲ್ಲ, ನಿಮ್ ತಂದೆ ಚೆನ್ನಾಗೇ ಟ್ರೇನಿಂಗ್ ಕೊಟ್ಟಿದ್ದಾರೆ” ಎಂದರು ಎಸ್. ಆಯ್.

“ಮುಂದೆ ಏನು?” ಎಂದು ಅವನನ್ನೇ ಕೇಳಿದರು.

“ಕ್ರಿಶ್ಣಮೂರ್ತಿಯವರ ಬಗ್ಗೆ ಏನಾದ್ರು ಗೊತ್ತಾಯ್ತು ಸರ್?”

“ಪೇದೆ ಕಳಿಸಿದ್ದೆ. ಅವರು ಸಿಗಲಿಲ್ಲ. ಅವರ ಮಗ ಇದ್ರಂತೆ. ಅವ್ರು ನಿನ್ನೇನೆ ಅಮೇರಿಕದಲ್ಲಿ ಇರೋ ಅವರ ಮಗಳ ಹತ್ರ ಇದ್ದಕಿದ್ದಂತೆ ಹೋದ್ರಂತೆ. ಅವರ ಮಗಳ ಫೋನ್ ನಂಬರ್ ಇದೆ. ಮಾತಾಡ್ಬೇಕಾ?”

“ಇರಲಿ ಬಿಡಿ. ಬಹುಶ ಕೊಲೆ ನಡೆದಿದ್ದು ಗೊತ್ತಾಗಿ, ತಮಗೂ ಏನಾದ್ರು ಆಗ್ಬಹುದು ಅಂತ ಹೆದರಿ ಅಲ್ಲಿ ಹೋಗಿದಾರೆ ಅನ್ಸುತ್ತೆ. ಅವರ ಜೊತೆ ಆಮೇಲೆ ಮಾತಾಡಿ, ಆಸ್ತಿ ಎಲ್ಲಾ ಯಾರಿಗ್ ಸೇರುತ್ತೆ ಅಂತ ತಿಳ್ಕೊಬೇಕು”

ಕಾಪಿ ಬಂತು. ಇಬ್ಬರೂ ತುಸು ಹೊತ್ತು ಸುಮ್ಮನೆ ಕುಳಿತರು ಆಲೋಚಿಸಿದರು. ನಂತರ ಎಸ್. ಆಯ್ ಮಾತಾಡಿದರು, “ಏನಾದ್ರು ಕ್ಲೂ ಸಿಕ್ತಾ?”

“ನೆನ್ನೇನೆ ಸಿಕ್ಕಿದೆ ಸರ್. ಆದ್ರೆ ಮರ್ಡರ್ ವೆಪನ್ ಯಾವ್ದು ಅಂತ ನಮಗ್ ಇನ್ನೂ ಗೊತ್ತಾಗಿಲ್ಲ. ಹಾಗಾಗಿ ಕೊಲೆಗಾರ ಯಾರು ಅಂತ ಗೊತ್ತಾದ್ರು ನಮ್ ಹತ್ರ ಎವಿಡೆನ್ಸ್ ಇಲ್ಲ. ನೀವು ಹೂಂ ಅಂದ್ರೆ ಒಂದು ಡ್ರಾಮಾ ಮಾಡೋಣ. ಕೊಲೆಗಾರ ತಾನಾಗೇ ಒಪ್ಕೊಳ್ಳೋ ಹಾಗೆ ಮಾಡಬಹುದು. ಬೇಕಿದ್ರೆ ಸಾಕ್ಶಿಗೆ ಅಂತ ಕಮೀಶನರ್ ಸಾಹೇಬ್ರು, ಪೋಸ್ಟ ಮಾರ್ಟಂ ಮಾಡಿರೋ ಡಾಕ್ಟರ್ ಕರೆಸೋಣ. ಕ್ಯಾಮೆರಾ ಹೇಗಿದ್ರೂ ಇದ್ದೇ ಇರುತ್ತೆ”

“ಏನು ನಿಮ್ ಪ್ಲಾನು?”

ಕೊಲೆ ನಡೆದ ಮೂರನೇಯ ದಿನ ಪೊಲೀಸ್ ಸ್ಟೇಶನ್ನಿನ ಒಂದು ಕೋಣೆಯಲ್ಲಿ ಮಹದೇವಯ್ಯನವರ ಹೆಂಡತಿ, ಇಬ್ಬರು ದತ್ತು ಮಕ್ಕಳು, ಕೆಲಸಗಾರ ಗುಂಡಣ್ಣ, ಮತ್ತು ಅವನ ಹೆಂಡತಿ ಕೂತಿದ್ದರು. ಆ ಕೋಣೆಗೆ ಅಳವಡಿಸಿದ್ದ ಕನ್ನಡಿಯ ಗಾಜಿನ ಮೂಲಕ ಕಮೀಶನರ್ ಮತ್ತು ಡಾಕ್ಟರ್ ಇನ್ನೊಂದು ಕೋಣೆಯಲ್ಲಿ ಕುಳಿತು ಅಲ್ಲಿ ನಡೆಯುವುದನ್ನು ನೋಡುತ್ತಿದ್ದರು. ಆ ಕೋಣೆಯಲ್ಲಿ ಕುಳಿತವರಿಗೆ ಕೇಳುವಂತೆ ಪಕ್ಕದಲ್ಲಿದ್ದ ಲಾಕಪ್ಪಿನಲ್ಲಿ ಎಸ್. ಆಯ್ ಅವರು ಕಳ್ಳನೊಬ್ಬನಿಗೆ ಹೊಡೆಯುವ ನಾಟಕವಾಡುತ್ತಿದ್ದರು. ಆ 'ಕಳ್ಳ' ಜೋರಾಗಿ ಅಳುವ ನಾಟಕವಾಡುತ್ತಿದ್ದ. ಅದನ್ನು ಕೇಳಿ ಅಲ್ಲಿದ್ದ ಎಲ್ಲರಿಗೂ ಗಾಬರಿಯಾಗಿ, ಎದೆ ಬಡಿತ ಹೆಚ್ಚಾಗಿತ್ತು. ಅದರಲ್ಲೂ ಮಹದೇವಯ್ಯನವರ ಹೆಂಡತಿಗೆ ಹೆಚ್ಚಾಗಿಯೇ ಬಯವಾಗಿತ್ತು. ಎಶ್ಟಾದರೂ ಹೆಂಗಸು. ತುಸು ಸಮಯದಲ್ಲಿ ಎಸ್. ಆಯ್ ಅವರು ಪುಲಕೇಶಿ ಜೊತೆ ಎಲ್ಲರೂ ಇದ್ದ ಕೋಣೆಗೆ ಬಂದರು. ಎಸ್. ಆಯ್ ಕಯ್ಯಲ್ಲಿ ಒಂದು ಹಾಳೆ ಇತ್ತು.

ತಡಮಾಡದೆ, ಎಸ್. ಆಯ್ ಹೇಳಿದರು, “ನೋಡಿ, ನಮಗೆ ಕೊಲೆಗಾರ ಯಾರು ಅಂತ ಗೊತ್ತಾಗಿದೆ. ಹೆಣದ ಮೇಲೆ ನಮಗೆ ಒಂದು ಕೂದಲು ಸಿಕ್ತು. ಮೊನ್ನೆ ನಿಮ್ ಹತ್ರ ತೊಗೊಂಡಿದ್ದ ಕೂದಲಿನ ಜೊತೆ ಈ ಕೂದಲನ್ನೂ ಡಿ.ಎನ್.ಎ ಟೆಸ್ಟಿಗೆ ಕಳಿಸಿದ್ವಿ. ನಿಮ್ಮಲ್ಲಿ ಒಬ್ಬರ ಕೂದಲ ಜೊತೆ ಮ್ಯಾಚ್ ಆಗಿದೆ. ಹಾಗಾಗಿ ಕೊಲೆಗಾರ ಯಾರು ಅಂತ ಗೊತ್ತಾಗಿದೆ”

ಎಲ್ಲರಿಗೂ ಗಾಬರಿಯಾಗಿ ಮಾತು ಹೊರಡಲಿಲ್ಲ. ಎಸ್. ಆಯ್ ನೇರವಾಗಿ ಎರಡನೇ ದತ್ತು ಮಗ, ಕಾರ್ತಿಕ್ ಹತ್ರ ಬಂದು, “ಯಾಕೋ ಮಗನೇ ಕೊಲೆ ಮಾಡೋವಶ್ಟು ದರ‍್ಯನಾ?” ಎಂದು ಅವನ ಕೊರಳ ಪಟ್ಟಿ ಹಿಡಿದು ಬಯಲಿದ್ದ ಜಾಗಕ್ಕೆ ಎಳೆದರು.

ಅವನು, “ಸಾರ್ ನಾನ್ ಮಾಡಿಲ್ಲ ಸಾರ್.” ಎಂದು ಕಿರುಚಿದ.

ಬಿಡದೆ ಅವನನ್ನು ಬಯ್ಯುತ್ತ ಜೋರಾಗಿ ಎಳೆದಾಡಿದರು ಎಸ್. ಆಯ್. “ಲಾಕಪ್ಪಲ್ಲಿ ಹಾಕ್ರೋ ಇವಂಗೆ. ನಾಲ್ಕು ತದಕಿದ್ರೆ ಎಲ್ಲಾ ಬಾಯಿ ಬಿಡ್ತಾನೆ” ಎಂದ್ರು ಸಿಟ್ಟು ತೋರಿಸುತ್ತಾ.

ಆಗ ಮಹದೇವಯ್ಯನವರ ಹೆಂಡತಿ ಗಾಬರಿಯಲ್ಲಿ ಎದ್ದು ನಿಂತು, ಅಳುತ್ತಾ, “ಅವಂಗ್ ಏನೂ ಮಾಡ್ಬೇಡಿ. ಕೊಲೆ ಮಾಡಿದ್ದು ನಾನು” ಎಂದು ಎದ್ದು, ಕಾರ್ತಿಕ್ ನನ್ನು ಪೊಲೀಸರಿಂದ ರಕ್ಶಿಸಲು ಮುಂದಾದಳು.

ಎಸ್. ಆಯ್ ಮತ್ತು ಪುಲಕೇಶಿ ಒಬ್ಬರನ್ನೊಬ್ಬರು ನೋಡಿ ಮುಗುಳ್ನಕ್ಕರು. ಇದೇ ಸರಿಯಾದ ಸಮಯ ಎಂದು ಅರಿತ ಎಸ್. ಆಯ್, "ನೋಡಿ ಮೇಡಂ, ಸರಿಯಾಗಿ ಹೇಳಿ ಅವತ್ ರಾತ್ರಿ ಏನ್ ನಡೀತು ಅಂತ" ಎಂದು ದಬಾಯಿಸಿದ.

ಹೆದರಿದ್ದ ಮೇಡಂ ಅಳುತ್ತಾ, ನಿದಾನವಾಗಿ ಎಲ್ಲವನ್ನೂ ಬಾಯಿಬಿಟ್ಟರು, "ಅವ್ನು ಕ್ರಿಷ್ಣಮೂರ್ತಿಯವರ ಮನೆಗೆ ಹೋಗಿ ಬಂದಿದ್ದು ಗೊತ್ತಾಗಿ ಅವ್ನನ್ನಾ ಪಾಲೋ ಮಾಡು ಅಂತ ಒಬ್ಬ ಡಿಟೆಕ್ಟೀವ್ ಗೆ ಹೇಳಿದ್ದೆ. ಆ ದಿನ ಅನುಪಮ್, ಪುಲಕೇಶಿಯವರ ಮನೆಗೆ ಹೋಗಿ ಬಂದದ್ದು ಗೊತ್ತಾಯ್ತು. ನನ್ ಬೆನ್ನ ಹಿಂದೆ ಅವ್ನು ಏನೋ ಮಾಡ್ತಾ ಇದಾನೆ ಅಂತ ಅನುಮಾನ ಬಂದು ತುಂಬಾ ಸಿಟ್ಟು ಬಂದಿತ್ತು. ರಾತ್ರಿ ಅವ್ನು ತಡವಾಗಿ ಮನೆಗೆ ಬಂದ. ಅವನಿಗಾಗಿ ಕಾದು ಕಾದು ನನ್ ಸಿಟ್ಟು ನೆತ್ತಿಗೇರಿತ್ತು. ಅವ್ನು ಬಂದು ನೇರ ಊಟಕ್ ಕುಂತ. ಮನೇಲಿ ಬೇರೆ ಯಾರೂ ಇರಲಿಲ್ಲ. ನಾನು ಅಲ್ಲಿಗೇ ಹೋಗಿ ಅವನಿಗೆ ಕ್ರಿಷ್ಣಮೂರ್ತಿಯವರ ಮನೆಗೆ, ಪುಲಕೇಶಿಯವರ ಮನೆಗೆ ಹೋಗಿದ್ದು ಯಾಕೆ ಅಂತ ಕೇಳ್ದೆ. ಅವನಿಗೆ ಯಾವತ್ತೂ ಇರದ ದೈರ್ಯ ಬಂದಿತ್ತು. ನನಗೇ ತಿರುಗಿ ತಿರುಗಿ ಮಾತಾಡ್ದಾ. ಮನೆಯಿಂದ ಓಡಿಸ್ಬಿಡ್ತೀನಿ ಅಂತೆಲ್ಲಾ ಅಂದ. ನನಗೆ ಕೋಪ ಬಂದು, ಟೇಬಲ್ ಮೇಲೆ ಕಾಲಿ ಇದ್ದ ನೀರಿನ ಜಗ್ ಎತ್ತಿ ಜೋರಾಗಿ ಅವನ ತಲೆಗೆ ಹೊಡ್ದೆ. ಅವ್ನು ಮೂರ್ಛೆ ಹೋಗಿ ಬಿದ್ದ. ನನಗೆ ಹೆದರಿಕೆ ಆಗಿ ಎಬ್ಬಿಸೋಕೆ ಪ್ರಯತ್ನ ಪಟ್ಟೆ. ಸ್ವಲ್ಪ ಹೊತ್ತಲ್ಲೇ ಅವನ ಉಸಿರಾಟ ನಿಂತು. ನಾನು ಅಲ್ಲೇ ತುಂಬಾ ಹೊತ್ತು ಕೂತಿದ್ದೆ ಏನು ಮಾಡೋದು ಅಂತ ಯೋಚನೆ ಮಾಡ್ತಾ"

ಪುಲಕೇಶಿಯವರು ನಡುವೆ ಮಾತಾಡಿದರು, "ಆಗಲೇ ಅಲ್ವ, ಅನುಪಮ್ ನ ಒದ್ದೆ ಸಾಕ್ಸನಿಂದ ನೆಲದ ಮೇಲೆ ಆಗಿದ್ದ ಕೊಳೆ ನೀವು ಒರೆಸಿದ್ದು?"

ಅಳುತ್ತಾ, "ಹೌದು" ಎಂದರು ಮೇಡಂ. "ನನಗೆ ಮನೆ ಗಲೀಜಾಗಿದ್ರೆ ಸರಿ ಅನ್ಸೊಲ್ಲ"

"ಆಮೇಲೆ ಏನಾಯ್ತು?"

"ಆಮೇಲೆ ಏನಾದ್ರು ಆಗಲಿ ಅಂತ ಸುಮ್ಮನೆ ಮೇಲೆ ಹೋಗಿ ಮಲಗಿಬಿಟ್ಟೆ. ಅವ್ನು ಸತ್ತಿದ್ದೇನು ನನಗೆ ದುಕ್ಕ ಇರಲಿಲ್ಲ. ಪೊಲೀಸರಿಂದ ತಪಿಸಿಕೊಂಡ್ರೆ ಸಾಕಿತ್ತು"

"ಅನುಪಮ್ ಅವ್ರು ಕ್ರಿಷ್ಣಮೂರ್ತಿಯವರನ್ನಾ ಕಂಡಿದ್ದು ನಿಮಗ್ ಹೇಗ್ ಗೊತ್ತಾಯ್ತು?"

"ಗುಂಡಣ್ಣ ಹೇಳಿದ"

ಎಲ್ಲರೂ ಗುಂಡಣ್ಣನ ಕಡೆ ನೋಡಿದರು. ಅವನು ಗಾಬರಿಬಿದ್ದು, ನಡುಗುತ್ತ,

"ಸ್ ಸ್ ಸರ್ ಅವರ ಮನೆ ಕ್ ಕ್ ಕೆಲಸದವನು ನನಗೆ ಫೋನ್ ಮಾಡಿ ಹೇಳ್ದ ಸರ್. ನಾ ಮೇಡಂ ಅವರಿಗೆ ಹ್ ಹ್ ಹೇಳ್ದೆ ಅಷ್ಟೇ. ನನಗ್ ಬೇರೆ ಎ ಎ ಏನು ಗೊತ್ತಿಲ್ಲ ಸರ್" ಎಂದು ಬೇಡಿಕೊಳ್ಳುವ ರೀತಿಯಲ್ಲಿ ಹೇಳಿದನು.

ಮೇಡಂ ಕಡೆಗೆ ತಿರುಗಿ ಪುಲಕೇಶಿ ಕೇಳಿದರು, "ಈ ಇಬ್ಬರು ದತ್ತು ಮಕ್ಕಳಿಗೆ ನೀವೇ ನಿಜವಾದ ತಾಯಿ ಅಂತ ಅವರಿಗೆ ಗೊತ್ತಾ?"

ಈ ವಿಶಯ ಪುಲಕೇಶಿಗೆ ಹೇಗೆ ಗೊತ್ತಾಯ್ತು ಅಂತ ಒಂದು ಕ್ಶಣ ಬೆರಗಾಗಿ, ಮರುಕ್ಶಣ ಅದು ಹೊಳೆದು ಸುಮ್ಮನಾಗಿ ಮತ್ತೆ ಮಾತಾಡಿದರು ಮೇಡಂ, "ಇಲ್ಲ. ಅವರಿಗೆ ಗೊತ್ತಿಲ್ಲ. ನನ್ನ ಮತ್ತು ನನ್ ಗಂಡನ ಮದುವೆ ಮುಂಚೆನ ಸಂಬಂದ ಗೊತ್ತಾಗಿ ಎಲ್ಲಿ ನನ್ನಿಂದ ದೂರ ಆಗ್ತಾರೋ ಅಂತ ಯಾರಿಗೂ ಹೇಳಿರಲಿಲ್ಲ"

ಅಲ್ಲಿ ಕೂತಿದ್ದ ಕಿರಣ್ ಮತ್ತು ಕಾರ್ತಿಕ್ ಬೆರಗು ಗಣ್ಣಿನಿಂದ ನೋಡಿದರು. ತಮ್ಮ ಕಣ್ಣುಗಳನ್ನು ತಾವೇ ನಂಬದಾದರು. ತಮ್ಮ ತಾಯಿ ಯಾರು ಅಂತ ಗೊತ್ತಾಗಿಯೂ ಅವರ ಸ್ತಿತಿ ನೋಡಿ ಮರುಕ, ದುಕ್ಕ, ಬೆರಗು ಎಲ್ಲ ಬಾವಗಳೂ ಒಟ್ಟಿಗೆ ಮೂಡಿ ಏನು ಮಾಡಾಬೇಕೆಂದು ಗೊಂದಲವಾಗಿ ಸುಮ್ಮನಿದ್ದರು.

ವಾಡಿಕೆಯ ಮಾತುಗಳನ್ನು ಮುಗಿಸಿ, ಎಸ್. ಆಯ್ ಅವರು ಮೇಡಂ ಅವರನ್ನಾ ತಮ್ಮ ಕಸ್ಟಡಿಗೆ ತೆಗೆದುಕೊಂಡು ಲಾಕಪ್ಪಿನಲ್ಲಿ ಇರಿಸಿ, ಉಳಿದವರನ್ನು ಬಿಟ್ಟರು. ಗೊಂದಲದ ಬಾವದಲ್ಲಿಯೇ ಎಲ್ಲರೂ ಹೊರಟು ಹೋದರು. ಪುಲಕೇಶಿಯವರು ಎಸ್. ಆಯ್ ಅವರ ಕಡೆ ತಿರುಗಿ "ಕ್ರಿಷ್ಣಮೂರ್ತಿಯವರು ಏನು ಹೇಳಿದರು?" ಎಂದನು.

“ಮಹದೇವಯ್ಯನವರಿಗೆ ಮದುವೆಗಿಂತ ಮುಂಚೆ ಈ ಹೆಂಗಸಿನ ಜೊತೆ ಸಂಬಂದ ಇತ್ತಂತೆ. ಆದ್ರೆ ಮದುವೆ ಮಾಡ್ಕೊಳ್ಳೋಕೆ ಆಗಿಲ್ಲ, ಸಮಾಜದ ಕಟ್ಟುಪಾಡು ನೋಡಿ. ಅಲ್ದೆ ಅವರಿಗೆ ಒಳ್ಳೇ ಹೆಸರು, ಗವ್ರವ ಎಲ್ಲಾ ಇತ್ತು. ಅದಕ್ಕೆ ತಕ್ಶಣ ಇನ್ನೊಂದು ಹುಡುಗಿ ಜೊತೆ ಮದುವೆ ಮಾಡಿಕೊಂಡು ಈ ಹೆಂಗಸಿನ ಹಟದ ಪ್ರಕಾರ ಆ ಮಕ್ಕಳನ್ನ ದತ್ತು ತೊಗೊಂಡ್ರಂತೆ. ಆಮೇಲೆ ತಮ್ಮ ಹೆಂಡತಿ ಸತ್ ಮೇಲೆ, ಇವಳನ್ನಾ ಮದುವೆ ಆದ್ರಂತೆ. ಎರಡನೇ ಮದುವೆ ಅಲ್ವಾ... ಅದಕ್ಕೇ ಯಾರೂ ಅಶ್ಟು ತಲೆ ಕೆಡಿಸಿಕೊಂಡಿಲ್ಲ”

“ಹುಂ... ಈಗ ಆಸ್ತಿ?”


“ಅನುಪಮ್ ಹೆಸರಲ್ಲಿರೋದು ಈಗ ಮಹದೇವಯ್ಯನವರ ಹೆಸರಲ್ಲಿರೋ ಟ್ರಸ್ಟಗೆ ಹೋಗುತ್ತೆ. ಆದ್ರೆ ಮಹದೇವಯ್ಯನವರ ಹೆಸರಲ್ಲಿರೋ ಆಸ್ತಿ ಎಲ್ಲಾ ಈಗ ಇರೋ ದತ್ತು ಮಕ್ಕಳು, ಮತ್ತು ಈ ಹೆಂಗಸಿಗೇ ಹೋಗುತ್ತೆ”

“ಇರಲಿ ಬಿಡಿ, ಎಶ್ಟೇ ಆದ್ರು ಅವ್ರೂ ಮಹದೇವಯ್ಯನವರ ಹೆಂಡ್ತಿ, ಮಕ್ಕಳೇ ಅಲ್ವಾ?”

“ಅದೂ ಸರಿ”

***( ಚಿತ್ರ ಸೆಲೆ: [michaelwjgage.blogspot.in](http://michaelwjgage.blogspot.in) )***

# ಪತ್ತೇದಾರಿ ಕತೆ – ಪವಾಡ !



"ಏ ಸಾವಿತ್ರಿ. ಎದ್ದೇಳೆ. ಗಂಟೆ ಏಳಾಯ್ತು. ಇತ್ತೀಚೆಗೆ ಯಾಕೋ ತುಂಬಾ ಸೋಮಾರಿಯಾಗಿದೀಯಾ. ನಯ್ವೇದ್ಯೆ ಮಾಡಿ ಕೊಡು ಏಳು, ಪೂಜೆಗೆ ಹೊತ್ತಾಗುತ್ತೆ", ವೆಂಕಣ್ಣನವರು ಮಗಳನ್ನು ಜೋರು ಮಾಡಿ ಎಬ್ಬಿಸಲು ಪ್ರಯತ್ನಿಸುತ್ತಿದ್ದರು. ಅಷ್ಟರಲ್ಲಿ ಹೊರಗಿನಿಂದ ಒಬ್ಬ ಓಡಿ ಬಂದು, ಅವರ ಬಾಗಿಲಲ್ಲಿ ನಿಂತು, ಏದುಸಿರು ಬಿಡುತ್ತ,

"ಸ್ವಾಮ್ಯಾರೆ, ದೇವಸ್ತಾನದಲ್ಲಿ ನೆನ್ನೆ ರಾತ್ರಿ ಕೂಡ ದೀಪ ತನ್ನಿಂತಾನೇ ಹತ್ಕೊಳ್ತು" ಅಂದ, ವೆಂಕಣ್ಣನವರ ಮುಕದಲ್ಲಾಗುವ ಬದಲಾವಣೆ ಗಮನಿಸುತ್ತ.

"ಆಂ!" ಎಂದು ಬಾಯಿ ತೆರೆದು ನಿಂತರು ವೆಂಕಣ್ಣನವರು. ಅವರು ಒಂದೆರಡು ಕ್ಶಣ ಹಾಗೇ ನಿಂತದ್ದು ನೋಡಿ, ಮಡಿಯಲ್ಲಿದ್ದ ಅವರನ್ನು ಮುಟ್ಟಲು ಆಗದೆ, "ಸ್ವಾಮ್ಯಾರೆ" ಎಂದು ಕೂಗಿ ಎಚ್ಚರಿಸಿದ.

ತಕ್ಶಣ ವೆಂಕಣ್ಣನವರು ತಾವು ನಿತ್ಯವೂ ಪೂಜೆಮಾಡುತ್ತಿದ್ದ ರಾಮನ ಗುಡಿಗೆ ಗಡಿಬಿಡಿಯಲ್ಲಿ ಬಂದರು. ಅವರು ಬರುವ ವೇಳೆಗಾಗಲೇ ಅಲ್ಲಿ ಜನರ ಗುಂಪು ಸೇರಿತ್ತು. ಎಲ್ಲರೂ ಗರ್ಬಗುಡಿಯ ಮುಚ್ಚಿದ್ದ ಬಾಗಿಲಿಗೆ ಜೋಡಿಸಿದ್ದ ಕಂಬಿಗಳ ಸಂದಿನಿಂದ ಉರಿಯುತ್ತಿದ್ದ ದೀಪವನ್ನು ನೋಡಲು ನಾ ಮುಂದು ತಾ ಮುಂದು ನಡೆಸಿದ್ದರು.

"ಸ್ವಲ್ಪ ಸರಿರಿ, ಸರಿರಿ" ಎನ್ನುತ್ತ ಆ ಆಳು ವೆಂಕಣ್ಣನವರಿಗೆ ದಾರಿ ಮಾಡಿಕೊಡುತ್ತಿದ್ದನು. ವೆಂಕಣ್ಣನವರನ್ನು ನೋಡಿ ಅಲ್ಲಿದ್ದ ಎಲ್ಲರೂ ದಾರಿ ಮಾಡಿಕೊಡಲು ಹಿಂದೆ ಸರಿದರು. ವೆಂಕಣ್ಣನವರು ಬಾಗಿಲಿಗೆ ಹಾಕಿದ್ದ ಬೀಗ ತೆಗೆದು ಒಳಗಡೆ ಕಾಲಿಟ್ಟರು. ಅವರ ಕಾಲಡಿಗೆ ಸಿಕ್ಕಿದ್ದು ಜನರು ಅಶ್ಟೊತ್ತು ಹೊರಗಿನಿಂದ ಎಸೆದಿದ್ದ ಹತ್ತಾರು ನೋಟುಗಳು ಮತ್ತು ಚಿಲ್ಲರೆ. "ರಾಮ ರಾಮ" ಎನ್ನುತ್ತ ಅವನ್ನೆಲ್ಲ ಕಯ್ಯಿಂದ ಗುಡಿಸಿ ಆರತಿ ತಟ್ಟೆಗೆ

ಹಾಕಿದರು. ರಾಮನ ಪಾದದಡಿಗೆ ಉರಿಯುತ್ತಿದ್ದ ದೀಪವನ್ನು ನೋಡಿ ಅವರಿಗೆ ಬೆರಗಾಯಿತು. ಬೀಗದ ಕಯ್ ಇನ್ನೂ ತಮ್ಮ ಹತ್ತಿರವೇ ಇರುವುದನ್ನು ಸೊಂಟ ಮುಟ್ಟಿಕೊಂಡು ನೋಡಿದರು. ರಾತ್ರಿ ಮಲಗುವ ಮುಂಚೆಯೂ ನೋಡಿಕೊಂಡಿದ್ದರು. "ರಾಮಾ, ಏನಪ್ಪಾ ನಿನ್ ಲೀಲೆ" ಎಂದು ಮನಸ್ಸಿನಲ್ಲೇ ಅಂದುಕೊಂಡರು. ಒಂದೆರಡು ಕ್ಶಣ ಏನು ಮಾಡಬೇಕೆಂದು ಗೊತ್ತಾಗದೆ ಹಾಗೇ ನಿಂತಿದ್ದರು. ಮತ್ತೆ ಅರಿವಿಗೆ ಬಂದು ಹೊರಗಡೆ ನಿಂತಿದ್ದ ಜನಕ್ಕೆ, "ಪೂಜೆ ಮಾಡಿ ಮಂಗಳಾರತಿ ಕೊಡ್ತೀನಿ, ತಗೊಂಡ್ ಹೋಗಿ" ಎಂದರು.

ಆ ಆಳಿನ ಕಡೆ ತಿರುಗಿ , "ನನ್ ಮಗ ಸುಬ್ಬುಗೆ ಮಡೀಲಿ ನಯ್ವೇದ್ಯ ಮಾಡಿ ತರೋಕ್ ಹೇಳು" ಎಂದು ಪೂಜೆಗೆ ಅಣಿಯಾದರು.

ಹೊರಗಿದ್ದ ಜನರ ಗುಂಪಿನಲ್ಲಿ ಗುಸು ಗುಸು ಶುರುವಾಯಿತು. ಗುಡಿಯ ಹೊರಗಡೆ ಕಲಿಸುಗರ (teachers) ಗುಂಪೊಂದು ನೆರೆದು ಗುಡಿಯ ಒಳಗೆ ನಡೆದ ಪವಾಡದ ಬಗ್ಗೆ ಮಾತಾಡುತ್ತಿತ್ತು. "ಏನ್ ಶಂಕರ್ ಸಾರ್, ಈ ಪವಾಡ ಬಯಲು ಮಾಡಿ ನೋಡೋಣ" ಎಂದು ಒಬ್ಬರು ಅರಿವಿನ ಕಲಿಸುಗರಾದ ಶಂಕರ್ ಅವರನ್ನು ಚೇಡಿಸಿದರು. ಶಂಕರ್ ಅವರು ಆ ರಾತ್ರಿ ನಡೆದಿದ್ದನ್ನು ನೋಡಿ ಗಲಿಬಿಲಿಗೊಂಡಂತೆ ಕಾಣುತ್ತಿದ್ದರು. ಯಾವ ಉತ್ತರವೂ ಅವರಿಗೆ ಹೊಳೆಯಲಿಲ್ಲ. ರಹಸ್ಯ ತಿಳಿಯುವ ಎಲ್ಲ ರೀತಿಗಳನ್ನೂ ಯೋಚಿಸಿ ಸೋತಿದ್ದರು. ಕೊನೆಗೆ ಶಂಕರ್ ಅವರೇ ಮಾತಾಡಿದರು. "ಏನಾದ್ರೂ ಆಗ್ಲಿ, ಇದನ್ನ ಬಯಲು ಮಾಡೇ ಮಾಡ್ತೀನಿ" ಎಂದು ಶಪತ ತೊಟ್ಟವರಂತೆ ಮಾತನಾಡಿ ಅಲ್ಲಿಂದ ತಮ್ಮ ಮನೆಕಡೆಗೆ ಹೊರಟರು. ಮಿಕ್ಕವರೂ ಚದುರಿದರು. ಮುಂದಿನ ಅಮವಾಸ್ಯೆಯೂ ದೀಪ ತನ್ನಿಂತಾನೇ ಹೊತ್ತಿ ಉರಿಯಿತು.

**********************************************************************************************

ಅದೊಂದು ರವಿವಾರದ ಸಂಜೆ. ಗಿರಾಕಿಗಳಿಲ್ಲದೆ ಪುಲಕೇಶಿಯ ಅಂಗಡಿ ಹೆಚ್ಚಾಗಿ ಕಾಲಿ ಹೊಡೆಯುತ್ತಿತ್ತು. ಆಗಾಗ ಒಂದಿಬ್ಬರು ಬಂದರೂ ಹೊತ್ತಗೆಗಳನ್ನು ತಡಕಾಡಿ ಒಂದೆರಡು ಪುಟ ಓದಿ, ಕೊಳ್ಳದೆ ಹಾಗೇ ಹೋಗುತ್ತಿದ್ದರು. ತನ್ನ ಅಂಗಡಿಯ ಲಾಬದ ಬಗ್ಗೆ ಅವನೆಂದೂ ತಲೆಕೆಡಿಸಿಕೊಂಡಿರಲಿಲ್ಲ. ಹೊತ್ತಗೆಗಳು ಮಾರಾಟವಾಗದಿದ್ದರೂ ತಿಂಗಳು ತಿಂಗಳು ಅವನ ಅಂಗಡಿಗೆ ಹೊಸ ಹೊಸ ಹೊತ್ತಗೆಗಳು ಬರುತ್ತಲೇ ಇರುತ್ತಿದ್ದವು. ಅವನ ಓದುವ ಗೀಳಿನಿಂದಾಗಿ ಅಂಗಡಿ ಅಶ್ಟೇ ಅಲ್ಲದೆ, ಅಂಗಡಿಯ ಮಾಳಿಗೆ ಮೇಲಿದ್ದ ಮನೆಯ ತುಂಬಾ ಹೊತ್ತಗೆಗಳು ತುಂಬಿದ್ದವು. ಪುಲಕೇಶಿ ತನ್ನ ಹೊತ್ತಗೆ ಅಂಗಡಿಯಲ್ಲಿ ಕುಳಿತು, ಯಾವುದೋ ಮನವರಿಮೆಯ (psychology) ಗಡುಕಡತ (magazine) ಹಿಡಿದು, 'ಎಂದಿನ ಅರಿವು' (common sense) ಮತ್ತು 'ಸಂತೆ ಅರಿವು' (street smart) ಗಳ ನಡುವಿನ ಬೇರ್ಮೆಯನ್ನು ಓದುತ್ತಿದ್ದನು. ಅಶ್ಟರಲ್ಲಿ, ಅವನ ಗೆಳೆಯ ಮಂಜು ಬಂದರು.

"ಏನ್ ಪುಲಕೇಶಿ, ಹೇಗಿದೀಯಾ?"

"ಓ ಮಂಜು, ಬಾರಪ್ಪಾ. ನಾನ್ ಚೆನ್ನಾಗಿದೀನಿ"

"ಇವರು ಶಂಕರ್ ಅಂತಾ. ನನ್ ಗೆಳೆಯ", ಎಂದು ತಮ್ಮ ಜೊತೆ ಬಂದಿದ್ದ ಒಬ್ಬನನ್ನು ಪರಿಚಯಿಸಿದರು ಮಂಜು.

"ನಮಸ್ಕಾರ. ಕೂತ್ಕೊಳ್ಳಿ", ಎಂದು ತನ್ನ ಮೇಜಿನ ಎದುರಿಗಿದ್ದ ಕುರ್ಚಿ ಎಡೆಗೆ ಕಯ್ ಮಾಡಿದನು ಪುಲಕೇಶಿ. ಪುಲಕೇಶಿಯನ್ನು ದಿಟ್ಟಿಸಿ ನೋಡಿದರು ಶಂಕರ್. ತೀರ ತೆಳ್ಳವಲ್ಲದ, ದಿನವೂ ಕಸರತ್ತು ಮಾಡುವಂತೆ ತೋರುವ ಮಯ್ಕಟ್ಟು. ಸುಮಾರು ಆರೂವರೆ ಅಡಿ ಇರಬಹುದು. ಪುಲಕೇಶಿ ಕುಳಿತಿದ್ದರಿಂದ ಸರಿಯಾದ ಎತ್ತರ ಗೊತ್ತಾಗಲಿಲ್ಲ. ಉದ್ದನೆಯ ಮುಕದ ಮೇಲೆ ತೆಳ್ಳಗೆ ಉದ್ದನೆಯ ಮೂಗು. ಮೆದುವಾದ, ಉದ್ದನೆಯ ಹಾರಾಡುವ ಕೂದಲು. ಬೋಳಿಸಿದ ಮೀಸೆ. ತನ್ನಂಬುಗೆ ತುಂಬಿದ ದಿಟ್ಟ ಕಣ್ಣುಗಳು. ನೋಡುಗರನ್ನು ಕಣ್ಣುಗಳಲ್ಲೇ ಅಳೆಯುವ ನೋಟ. ನಲವತ್ತರ ಒಳಗಿನ ವಯ್ಯಸ್ಸು. ಈತನಿಂದ ಅಸಾದ್ಯವಾದದ್ದು ಯಾವುದೂ ಇಲ್ಲ ಎನಿಸಿತು ಶಂಕರ್ ಅವರಿಗೆ. ಇಬ್ಬರೂ ಕುಳಿತರು. ವಾಡಿಕೆಯ ಮಾತುಗಳು ಮುಗಿದ ಮೇಲೆ, ಮಂಜು ತಾವು ಬಂದ ಕಾರಣ ಹೇಳಿದರು,

"ನಿನಗೊಂದು ಕೇಸ್ ತಂದಿದೀನಿ ಕಣಪ್ಪಾ", ಮೆದುವಾಗಿ ನಕ್ಕರು.

"ಕೇಸಾ?"

"ಹೂಂ. ಇವರಿದಾರಲ್ಲಾ, ಶಂಕರ್. ಇವರದೇ ಕೇಸು. ನಿನಗೆ ಇಶ್ಟಾ ಆಗೋ ಕ್ರಿಮಿನಲ್ ಕೇಸ್ ಅಲ್ಲಪ್ಪಾ. ಸ್ವಲ್ಪ ಡಿಪರೆಂಟು"

"ಬುದ್ದಿ ಉಪಯೋಗಿಸೋ ಯಾವ್ ಕೇಸಾದ್ರೂ ನಾನ್ ರೆಡಿ. ಸತ್ಯ ತಿಳ್ಕೊಳ್ಳೋದೇ ನನ್ ಕಸಬು"

“ಹಾಗಿದ್ರೆ ಪರವಾಗಿಲ್ಲ”

“ಸರಿ ಹಾಗಿದ್ರೆ ಇಲ್ ಬೇಡಾ. ಮೇಲೆ ಮನೆಯಲ್ಲಿ ಕುಂತು ಮಾತಾಡೋಣ ಬನ್ನಿ” ಎಂದು ಅವರನ್ನು ಕರೆದುಕೊಂಡು ಮನೆಗೆ ಹೋದರು.

ನಡುಮನೆಯಲ್ಲಿ, ಪುಲಕೇಶಿ ಮಾಡಿದ ಕಾಪಿ ಹೀರುತ್ತಾ, ಶಂಕರ್ ನಡೆದ ಕತೆ ಹೇಳಲು ಶುರುಮಾಡಿದರು.

“ಸರ್ ನಾನು ಹುಲಿದುರ್ಗದಿಂದ ಬಂದಿದೀನಿ. ಚಿತ್ರದುರ್ಗದ ಹತ್ತಿರ ಒಂದು ಸಣ್ಣ ಹಳ್ಳಿ ಸಾರ್. ಅಲ್ಲಿ ಸಾಯನ್ಸ್ ಮೇಶ್ಟ್ರಾಗಿ ಕೆಲಸ ಮಾಡ್ತಾಯಿದೀನಿ. ಆಗಾಗ ಸುತ್ತ ಮುತ್ತ ಹಳ್ಳಿನಲ್ಲಿ ಪವಾಡ ಬಯಲು ಕಾರ್ಯಕ್ರಮ ನಡಸಿ ಕೊಡ್ತೀನಿ. ಪೇಪರ್ ನಲ್ಲೂ ನನ್ ಹೆಸರು ಬಂದಿತ್ತು ಸಾರ್. ಆದ್ರೆ ನಮ್ ಊರಲ್ಲೇ ನಡೀತಾ ಇರೋ ಪವಾಡ ಬಯಲು ಮಾಡೊಕ್ಕೆ ಆಗ್ತಿಲ್ಲಾ”

“ಓಹ್! ಅಂತಾ ಪವಾಡ ಏನು?” ಬೆರಗಾಗಿ ಕೇಳಿದನು ಪುಲಕೇಶಿ.

“ಹೌದು ಸಾರ್. ಹೇಳ್ತೀನಿ ಕೇಳಿ. ನಮ್ ಊರಲ್ಲಿ ತುಂಬಾ ಹಳೆಯ, ಚಿಕ್ಕ ರಾಮನ ಗುಡಿ ಇದೆ. ದುರ್ಗದ ಬರಮಣ್ಣ ನಾಯಕ್ರು ಆಳೋವಾಗ ಕಟ್ಸಿದ್ದು ಅಂತಾರೆ. ಈಗ ನಾಲ್ಕು ತಿಂಗಳಿಂದ ಪ್ರತೀ ಅಮವಾಸ್ಯೆ ರಾತ್ರಿ ಗುಡಿ ಒಳಗಿರೋ ದೀಪಾ ತನ್ನಿಂತಾನೇ ಹೊತ್ತಕೊಳ್ಳುತ್ತೆ ಸಾರ್. ಹೇಗೆ ಅಂತಾನೇ ಗೊತ್ತಾಗ್ತಿಲ್ಲಾ”

ಪುಲಕೇಶಿ ತುಸು ಹೊತ್ತು ಸುಮ್ಮನಿದ್ದ. ನಂತರ ಶಂಕರ್ ಕಡೆ ಕಣ್ಣು ಹೊರಳಿಸಿ, “ಏನ್ರೀ ಶಂಕರ್. ಸಾಯನ್ಸ್ ಮೇಶ್ರು ಅಂತೀರಾ. ಬೆಂಕಿ ತನ್ನಿಂತಾನೇ ಹೇಗೆ ಹತ್ಕೊಳ್ಳುತ್ತೆ ಗೊತ್ತಿಲ್ವಾ?”

“ಅಶ್ಟ್ ಗೊತ್ತು ಸಾರ್” ಮೆದುವಾಗಿ ನಕ್ಕರು ಶಂಕರ್. “ಸರಳ ದಾರಿ ಅಂದ್ರೆ ಪೊಟಾಶಿಯಮ್ ಪರಮ್ಯಾಂಗ್ನೇಟ್ ಜೊತೆ ಗ್ಲಿಸಿರೀನ್ ಸೇರಿಸಿದ್ರೆ ಆಯ್ತು”

“ಮತ್ತೇ? ಅಶ್ಟೇ ಕಣ್ರಿ” ಎಲ್ಲ ಮುಗಿದಂತೆ ಮಾತಾಡಿದನು ಪುಲಕೇಶಿ, “ದೀಪದ ಬತ್ತಿಗೆ ಪೊಟಾಶಿಯಮ್ ಪರಮ್ಯಾಂಗ್ನೇಟ್ ಪುಡಿ ಹಚ್ಚಿ, ಎಣ್ಣೆ ಜೊತೆ ಸ್ವಲ್ಪ ಗ್ಲಿಸರೀನ್ ಸೇರಿಸಿದ್ರೆ ಆಯ್ತು”

“ಅಶ್ಟು ಸುಲಬ ಆಗಿದ್ರೆ ನನಗ್ ಗೊತ್ತಾಗ್ತಿತ್ತು ಸಾರ್. ಆದ್ರೆ ನಾವು ಗುಡಿ ಬೀಗ ಹಾಕೋವಾಗ ಪಣತೆನಲ್ಲಿ ಎಣ್ಣೇನೇ ಇರೋದಿಲ್ಲಾ”

“ಓಹ್! ಇಂಟರಿಸ್ಟಿಂಗ್”, ಬೆರಗಾಗಿ ಪುಲಕೇಶಿಯ ಕಣ್ಣು ಅರಳಿದವು. ಸೋಪಾದ ಮೇಲಿಂದ ಎದ್ದು ನಿಂತು, ಕಿಟಕಿಯ ಕಡೆಗೆ ನಡೆದು, ಸಿಗರೇಟು ಹೊತ್ತಿಸಿದನು. ಒಂದು ಬಾರಿ ಹೊಗೆ ಎಳೆದು, ಹೊರ ಬಿಟ್ಟು, “ಗುಡಿ ಒಳಗಡೆ ಎಲ್ಲಾ ಚೆಕ್ ಮಾಡಿದಿರಾ ಅನ್ಕೋತೀನಿ” ಅಂದನು.

“ಮಾಡಿದೀವಿ ಸರ್. ಗುಡಿ ಪೂಜೆ ಮಾಡೊ ವೆಂಕಣ್ಣನವ್ರು ತುಂಬಾ ಒಳ್ಳೆಯವರು. ಹಾಗಾಗಿ ಗುಡಿ ಒಳಗಡೆ ಹೋಗಿ ಬರೋದಕ್ಕೆ ಏನೂ ತೊಂದ್ರೆ ಇಲ್ಲ”

ಗೋಡೆ ಗೆ ತೂಗು ಹಾಕಿದ್ದ ಕ್ಯಾಲೆಂಡರ್ ನತ್ತ ಹೋಗಿಬಂದನು ಪುಲಕೇಶಿ.

“ಅಂದ್ರೆ ನಿನ್ನೆ ರಾತ್ರಿ ದೀಪ ಹೊತ್ತಿತ್ತು ಅನ್ನಿ”

“ಹೌದು ಸಾರ್, ಇದು ಅಯ್ದನೇ ಅಮವಾಸ್ಯೆ”

“ದೀಪ ಹತ್ತೋದು ನೀವೇ ಕಣ್ಣಾರೆ ನೋಡಿದಿರಾ?”

“ಹೌದು ಸರ್”

“ಅಂದ್ರೆ, ಕಾಲಿ ಪಣತೆನಲ್ಲಿ ಎಣ್ಣೆ ಹುಟ್ಟೋದು ನೋಡಿದಿರಾ?”

“ಇಲ್ಲಾ ಸರ್. ಕತ್ಲಲ್ಲಿ ಅದು ಕಾಣೋದಿಲ್ಲಾ. ನಾವೆಲ್ಲಾ ಗರ್ಭಗುಡಿಯ ಹೊರಗಡೆ ಇದ್ವಿ ಸರ್. ದೀಪ ಹೊತ್ಕೊಂಡ ಮೇಲೆನೇ ಒಳಗಡೆ ಬೆಳಕು ಕಾಣ್ಸೋದು”

ಸ್ವಲ್ಪ ಹೊತ್ತು ಸುಮ್ಮನಿದ್ದು, ಪುಲಕೇಶಿ, “ಯಾರು ಮೊದಲು ಈ ಪವಾಡ ನೋಡಿದ್ದು?” ಎಂದನು.

“ನಮ್ ಅರ್ಚಕರ ಮಗ ಸರ್. ಗೋಪಿ ಅಂತ. ಅವ್ನು ಮತ್ತೆ ಅವನ ಗೆಳೆಯರು ಈ ಪವಾಡ ನೋಡಿ, ಊರಲ್ಲಿರೋ ಎಲ್ರಿಗೂ ತಿಳ್ಸಿದ್ದು”

ಮಾತೆಲ್ಲ ಮುಗಿದಂತೆ ಇಬ್ಬರೂ ಸುಮ್ಮನೆ ಕೂತರು. ಪುಲಕೇಶಿಯವರ ಗೆಳೆಯ ಮಂಜು, ಮೂಗನಂತೆ ಇಬ್ಬರ ಮಾತೂ ಕೇಳುತ್ತ ಕುಂತಿದ್ದರು. ಕೇಳಿದ್ದೆಲ್ಲವನ್ನೂ ಅರಗಿಸಿಕೊಳ್ಳುವಂತೆ ಪುಲಕೇಶಿ ಕಣ್ಣು ಮುಚ್ಚಿ ಏನೋ ಯೋಚಿಸುತ್ತ, ಕಿಟಕಿಯ ಬದಿಗೆ ನಿಂತು ಹೊಗೆ ಎಳೆಯುತ್ತಿದ್ದನು. ಒಂದೆರಡು ನಿಮಿಶವಾದ ಮೇಲೆ ಇವರು ಕೂತಿದ್ದ ಕಡೆ ಬಂದು, “ಸಿಂಪಲ್ ಅನ್ಸುತ್ತೆ. ನಾಳೆ ನಿಮ್ ಊರಿಗೆ ಬರ್ತೀನಿ, ನೀವಿನ್ ಹೊರಡಿ” ಎಂದನು.

ಅಂದುಕೊಂಡಂತೆ ಪುಲಕೇಶಿ ಮಾರನೇ ದಿನ ತಮ್ಮ ಕಾರಿನಲ್ಲಿ ಹುಲಿದುರ್ಗಕ್ಕೆ ಹೊರಟ. ಊರಿಗೆ ಹೋಗುವ ಹೊತ್ತಿಗೆ ಮದ್ಯಾನ ದಾಟಿತ್ತು. ತುಂಬಾ ಹಳೆಯದಾದ, ಪುಟ್ಟ ಹಳ್ಳಿ. ಅಲ್ಲಿನ ಮನೆಗಳಲ್ಲಿ ಅರ್ದಕ್ಕಿಂತ ಹೆಚ್ಚಿನವು ಹಳೆಯವೇ. ಅವುಗಳನ್ನೇ ಅಲ್ಲಲ್ಲಿ ರಿಪೇರಿ ಮಾಡಿಸಿಕೊಂಡಿದ್ದು ಎದ್ದು ಕಾಣುತ್ತಿತ್ತು. ಶಂಕರ್ ಅವರು ಪುಲಕೇಶಿಯನ್ನು ಬರಮಾಡಿಕೊಳ್ಳಲು ಅವನು ಕಾರು ನಿಲ್ಲಿಸಿಕೊಂಡಿದ್ದ ಜಾಗಕ್ಕೇ ಬಂದು, ತಮ್ಮ ಮನೆಗೆ ಕರೆದುಕೊಂಡು ಹೋದರು. ಅವರ ಮನೆ ಹೊಸದಾಗಿ ಕಟ್ಟಿಸಿದಂತಿತ್ತು. ತಿಂಡಿ, ಚಹಾ ಮುಗಿದಮೇಲೆ, ಗುಡಿಯ ಕಡೆಗೆ ಹೊರಟರು.

ಅವರಿಗೆ ಎದುರಾಗಿ ಹುಡಿಗಿಯರ ಗುಂಪೊಂದು ಬಂದಿತು. ಕಾಲೇಜು ಮುಗಿಸಿಕೊಂಡು ಬಂದಿರಬೇಕೆಂದುಕೊಂಡನು ಪುಲಕೇಶಿ. ಆ ಗುಂಪಲ್ಲಿ ಒಬ್ಬ ಹುಡುಗಿ ಎದ್ದು ಕಾಣುತ್ತಿದ್ದಳು. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಕಾಣದ ಮೇಕಪ್ ಮತ್ತು ಅವಳು ಹಾಕಿದ್ದ ಸೆಂಟಿನ ವಾಸನೆ ಪುಲಕೇಶಿಯ ಗಮನ ಸೆಳೆಯಿತು. ಯಾರಿವಳು? ಎನ್ನುವಂತೆ ಅವಳನ್ನು ತಿರುಗಿ ನೋಡಿದ ಪುಲಕೇಶಿ. ಪಕ್ಕದಲ್ಲಿದ್ದ ಶಂಕರ್ ನೆರವಿಗೆ ಬಂದರು, “ಸರ್. ಅವಳನ್ನಾ ಹಾಗ್ ನೋಡ್ಬೇಡಿ. ಬಜಾರಿ ಅವ್ಳು. ಜಗಳಕ್ಕೇ ಬರ್ತಾಳೆ, ಗಂಡಬೀರಿ” ಎಂದರು.

“ಯಾರ್ ಅವ್ಳು?”

“ಗುಡಿ ಅರ್ಚಕರು ಇದಾರಲ್ಲಾ ಸರ್, ವೆಂಕಣ್ಣನವರು... ಅವರ ಮಗಳು”. ಬೆರಗಿನಿಂದ ಪುಲಕೇಶಿಯ ಹುಬ್ಬು ಮೇಲೇರಿತು.

ಗುಡಿಯ ಆವರಣ ದೊಡ್ಡದಾಗಿತ್ತು. ಗುಡಿಯು ತೀರ ಚಿಕ್ಕದಲ್ಲದ, ತೀರ ದೊಡ್ಡದಲ್ಲದ ಅಳತೆಯಲ್ಲಿತ್ತು. ಇದ್ದದ್ದು ಗರ್ಬಗುಡಿಯೊಂದೇ. ಬಾಗಿಲಿಗೆ ಸುಮಾರು ಆರು ಅಡಿ ಒಳಗಡೆ ದೇವರ ಮೂರ್ತಿಗಳು ಇದ್ದದ್ದು. ಕತ್ತಲಲ್ಲಿ ಆ ಮೂರ್ತಿಗಳು ಕಾಣಿಸುವಂತಿರಲಿಲ್ಲ. ವೆಂಕಣ್ಣನವರ ಹತ್ತಿರ ಕೇಳಿ ಗುಡಿಯ ಬೀಗದ ಕಯ್ ತಂದಿದ್ದರು ಶಂಕರ್. ಗುಡಿಯ ಒಳಬಾಗ ತೋರಿಸುತ್ತಾ, ಅದರ ಹಿನ್ನಲೆ ಬಗ್ಗೆ ಪುಲಕೇಶಿಗೆ ತಿಳಿಸಿದರು, “ಸುಮಾರು ನಾನ್ನೂರು ವರ್ಶ ಹಳೇದು ಸಾರ್. ಎಲ್ಲಾ ಕಲ್ಲಿಂದಲೇ ಕಟ್ಟಿದ್ದು. ಪೂಜೆ ಮಾಡೋಕೆ ಅಂತ ಮೂರು ಅರ್ಚಕರ ಮನೆ ಇದೆ ಸಾರ್. ಅದರಲ್ಲಿ ವೆಂಕಣ್ಣನವರದೂ ಒಂದು. ಇನ್ನಿಬ್ರು ನಾರಾಯಣ ಅರ್ಚಕರು, ಮತ್ತೆ ಶ್ರೀನಿವಾಸರಾಯರು ಅಂತ. ಮೂರು ಮನೆಯವ್ರು ವರ್ಶದಲ್ಲಿ ನಾಲ್ಕು ತಿಂಗಳಿಗೆ ಒಬ್ಬೊಬ್ಬರಂತೆ ಪೂಜೆ ಮಾಡ್ತಾರೆ”

ಗುಡಿಯ ಒಳಗೆ ರಾಮ, ಸೀತಾ, ಲಕ್ಶ್ಮಣನ ಮೂರ್ತಿಗಳಿದ್ದವು. ರಾಮನ ಕಾಲಿನ ಬಲಗಡೆ ಕಯ್ಮುಗಿದು ಕುಳಿತ ಪುಟ್ಟ ಹನುಮಂತನ ಮೂರ್ತಿ ಇತ್ತು. ಜೋಡಿಸಿದ್ದ ರಾಮನ ಕಾಲುಗಳ ಮುಂದೆಯೇ ಇತ್ತು ತಾಮ್ರದ ಪಣತೆ. ಅದರ ಎದುರಿಗೆ ಕುಳಿತು ದಿಟ್ಟಿಸಿದನು ಪುಲಕೇಶಿ. ದುಂಡಗೆ ಬಾರವಾಗಿತ್ತು. ಪಣತೆಯ ಕೆಳಗಡೆ ಸವೆದಿದ್ದ ಕಲ್ಲನ್ನು ನೋಡಿ ಅದನ್ನು ವರ್ಶಗಳಿಂದಲೂ ಅಲ್ಲಿಯೇ ಇಡುತ್ತಾರೆ ಎಂಬುದನ್ನು ಅರಿತ. “ಇದೇ ಅಲ್ವಾ ಪಣತೆ?” ಎಂದು ಕೇಳಿದ.

“ಹೌದು ಸರ್”

ಮೇಲೆದ್ದು, ಮೂರ್ತಿಗಳ ಸುತ್ತು ಹಾಕುತ್ತ, ಗೋಡೆಯನ್ನು ತಟ್ಟಿ ತಟ್ಟಿ ನೋಡಿದ. ಗಟ್ಟಿಯಾಗಿತ್ತು. ಒಂದು ಕಿಟಕಿಯೂ ಇರಲಿಲ್ಲ. ಮಾಳಿಗೆ ನೋಡಿದ. ಎಲ್ಲೂ ನುಸುಳಿಕೊಂಡು ಬರಬಹುದಾದ ದಾರಿ ಕಾಣಲಿಲ್ಲ. ತುಸು ಹಿಂಜರಿಕೆಯಾದರೂ, ಮೂರ್ತಿಗಳನ್ನು ಅಲುಗಾಡಿಸಿ ನೋಡಿದ. ಅವೂ ಗಟ್ಟಿಯಾಗಿದ್ದವು. ರಾತ್ರಿ ಹೊತ್ತು ಬೆಳಗಲು ಗುಡಿಯ ಒಳಗಡೆ ಒಂದು ಲಾಂದ್ರವೂ ಇರಲಿಲ್ಲ. ಅವನಿಗೆ ಏನೂ ಹೊಳೆಯಲಿಲ್ಲ. ಮತ್ತೆ

ಪಣತೆಯತ್ತ ನೋಡಿದ. ಅದು ಅವನನ್ನು ಅಣಕಿಸಿದಂತಾಯಿತು. ಯೋಚನೆಯಲ್ಲಿ ಮುಳುಗಿದ್ದ ಅವನನ್ನು ಶಂಕರ್ ಅವರೂ ಮಾತಾಡಿಸಲಿಲ್ಲ. ತುಸು ಹೊತ್ತಿನ ನಂತರ ಇಬ್ಬರೂ ಹೊರಗಡೆ ಬಂದರು. ಬೀಗ ಹಾಕಿ ಇನ್ನೇನು ಹೊರಡಬೇಕು ಎನ್ನುವ ಹೊತ್ತಿಗೆ ಸುಮಾರು ಇಪ್ಪತ್ತರ ಹುಡುಗನೊಬ್ಬ ಅಲ್ಲಿ ಬಂದ. ಶಂಕರ್ ಅವರನ್ನು ನೋಡಿ, "ನಮಸ್ಕಾರ ಸರ್" ಅಂದ.

"ನಮಸ್ಕಾರ ಗೋಪಿ. ಕಾಲೇಜಿಂದ ಬಂದ್ಯಾ?" ಎಂದರು ಶಂಕರ್.

"ಹೌದು ಸರ್. ಇವರ್‍ಯಾರು?" ಎಂದು ಕೇಳಿದ.

"ಇವರು ಪುಲಕೇಶಿ ಅಂತ. ನಮ್ ಊರಲ್ಲಿ ನಡೀತಾ ಇರೋ ಪವಾಡ ಬಯಲು ಮಾಡೋಕೆ ಬಂದಿದಾರೆ"

"ಓಹ್! ನಮಸ್ಕಾರ ಸರ್"

ಪುಲಕೇಶಿ, "ನಮಸ್ಕಾರ" ಎಂದು, ಯಾರು ಈ ಹುಡುಗ ಎನ್ನುವ ರೀತಿಯಲ್ಲಿ ಶಂಕರ್ ಕಡೆ ನೋಡಿದರು. ಆಗ ಶಂಕರ್,

"ಇವನು ಅರ್ಚಕರು ನಾರಾಯಣರವರ ಮಗ ಸರ್, ಗೋಪಿ ಅಂತ" ಎಂದರು.

"ಓಹ್! ಇವನೇ ಅಲ್ವಾ ಈ ಪವಾಡ ಮೊದ್ಲು ನೋಡಿದ್ದು?"

"ಹೌದು, ನಾನೇ ಸರ್." ಮಾತು ಶುರುಮಾಡಿದ ಗೋಪಿ. "ದಿನಾ ಬೆಳಗ್ಗೆ ಎದ್ದು ಅದೇ ಗುಡಿ ಮುಂದೆ ವಾಕಿಂಗ್ ಹೋಗ್ತೀನಿ. ಮೊದಲನೇ ಸಾರಿ ನೋಡ್ದಾಗ ರಾತ್ರಿ ಹಚ್ಚಿದ್ದು ಇನ್ನೂ ಆರಿಲ್ವೆನೋ ಎಂದು ಸುಮ್ನಾಗಿದ್ದೆ. ಆದ್ರೆ, ನನ್ ಗೆಳೆಯ ಒಬ್ಬ, ರಾತ್ರಿ ದೀಪ ಆರಿತ್ತು ಅಂತ ನಿಕ್ಕಿಯಾಗ್ ಹೇಳ್ದ. ನನಗೂ ಅನುಮಾನ ಬಂತು. ಆದ್ರೆ ಮಾರನೇ ದಿನಾ ಅಂತಾದ್ದೇನೂ ಆಗ್ಲಿಲ್ಲ. ನಾವೆಲ್ಲಾ ಅದನ್ನ ಮರ್ತೇ ಬಿಟ್ವಿದ್ವಿ. ಆದ್ರೆ ಮುಂದಿನ್ ಅಮವಾಸ್ಯೆಗೆ ಮತ್ತೆ ಹೀಗೇ ಆಯ್ತು. ಆಗ್ಲೂ ನಾನೇ ಮೊದ್ಲು ನೋಡಿದ್ದು. ಬಹುಶ ಇದು ಪ್ರತಿ ಅಮವಾಸ್ಯೆಗೆ ಆಗುತ್ತೇಂತ ನಾವು ಅನ್ಕೊಂಡ್ವಿ. ಅದೇ ಸರಿಯಾಯ್ತು"

"ಸರಿ" ಎಂದು ಗುಡಿಯಿಂದ ಹೊರಬಂದನು ಪುಲಕೇಶಿ. ಆ ಕ್ಷಣಕ್ಕೆ ಅವನಿಗೆ ಏನೂ ಹೊಳೆಯಲಿಲ್ಲ. ಒಂದೆರಡು ದಿನ ಸಮಯ ಬೇಕೆಂದು ಶಂಕರ್ ಅವರಿಗೆ ಹೇಳಿ ಕಾರು ಹತ್ತಿದನು.

ಪುಲಕೇಶಿಯ ಮುಂದಿದ್ದದ್ದು ಎರಡು ಕೇಳ್ವಿಗಳು. ಒಂದು - ಪವಾಡ ಹೇಗೆ ನಡೆಯಿತು?. ಎರಡು- ಇದರ ಹಿಂದೆ ಯಾರಿರಬಹುದು? ಕಿಟಕಿಯ ಬದಿ ನಿಂತು ಸಿಗರೇಟು ಹಚ್ಚಿದನು. ಗಾಳಿಗೆ ಹಾರಿ ಕಣ್ಣ ಮುಂದೆ ಬರುತ್ತಿದ ಕೂದಲನ್ನು ಮೇಲೆ ಸರಿಸಿದ. ತಾನು ನೋಡಿದ್ದೆಲ್ಲವನ್ನೂ ಮೆಲಕು ಹಾಕುತ್ತ, ಆ ಒಂದು ಸುಳಿವಿಗಾಗಿ ತಡಕಾಡುತ್ತಿದ್ದನು. ಏನಾದರೂ ಪತ್ತೆ ಮಾಡುವಾಗ, ಆಗುಹ ನಡೆದ ಜಾಗ ಅತವಾ ನಡೆದ ರೀತಿಯಲ್ಲಿ ಯಾವುದೋ ಒಂದು "ವಿಶಯ" ಎದ್ದು ಕಾಣುತ್ತದೆ. ಒಂದು - ಆ "ವಿಶಯ" ಇಲ್ಲದಿದ್ದರೆ ಆ ಆಗುಹವೇ ನಡೆಯುತ್ತಿರಲಿಲ್ಲ. ಎರಡು - ಆ "ವಿಶಯ" ಆ ಜಾಗಕ್ಕೆ ಇಲ್ಲವೇ ಆ ಸನ್ನಿವೇಶಕ್ಕೆ ಹೊಂದಿಕೊಳ್ಳುವದಿಲ್ಲ. ಆ ವಿಶಯ ತಿಳಿದರೆ, ಸುಳಿವು ದೊರೆತಂತೆಯೇ. ಆದರೆ ಇಲ್ಲಿ ಎಲ್ಲವೂ ಅಚ್ಚುಕಟ್ಟಾಗಿತ್ತು. ತಟ್ಟನೆ ಅವನಿಗೆ ಹುಲಿದುರ್ಗ ಎನ್ನುವ ಹೆಸರು ಎಲ್ಲೋ ಓದಿದ್ದ ನೆನಪಾಯಿತು. ಅದರ ಹಿಂದೆಯೇ ಆ ಗುಡಿಯನ್ನು ಬರಮಪ್ಪ ನಾಯಕರಿದ್ದಾಗ ಕಟ್ಟಿಸಿದ್ದು ಎಂದು ನೆನಪಾಗಿ, ಮನೆಯಿಂದ ಕೆಳಗಿಳಿದು ಹೊತ್ತಗೆ ಅಂಗಡಿಗೆ ಹೋದನು. ಅಲ್ಲಿ ದುರ್ಗದ ಹಿನ್ನೆಲೆ ಬಗ್ಗೆ ವಿವರವಾಗಿ ಬರೆಯಲಾಗಿದ್ದ ಹೊತ್ತಗೆಯೊಂದನ್ನು ತೆಗೆದು ಹುಲಿದುರ್ಗಕ್ಕಾಗಿ ತಡಕಾಡಿದ. ಸಿಕ್ಕಿತು. ಅಲ್ಲಿದ್ದುದನ್ನು ಓದಿ ಅವನಿಗೆ ನಗು ತಡೆಯಲಾಗಲಿಲ್ಲ. ಶತ್ರು ದಾಳಿಯಿಂದ ತಪ್ಪಿಸಿಕೊಳ್ಳಲು ಆ ಊರಿನ ತುಂಬಾ ಸುರಂಗ ದಾರಿಗಳನ್ನು ಮಾಡಿದ್ದರು. ಆ ಊರಿನಲ್ಲಿ ಕಾಲು ಬಾಗದಶ್ಟು ಮನೆಗಳಿಗೆ ಸುರಂಗ ದಾರಿಗಳಿದ್ದವು. ಕೆಲವೊಂದು ಮನೆಯಿಂದ ಮನೆಗೆ ಕೂಡಿದರೆ, ಇನ್ನು ಕೆಲವು ಊರ ಆಚೆ ಬಾಯಿ ತೆರೆಯುತ್ತಿದ್ದವು. ಆ ಊರಿನಲ್ಲಿದ್ದ ಒಂದು ಸುರಂಗ ದಾರಿ ನೇರ ದುರ್ಗಕ್ಕೆ ಹೋಗಿ ಕೂಡುತ್ತದೆ ಎಂದು ಬರೆಯಲಾಗಿತ್ತು. ಆದರೆ ಈಗ ಅವೆಲ್ಲ ಮುಚ್ಚಿಹೋಗಿದ್ದವು. ಪುಲಕೇಶಿಗೆ ಸುಳಿವೊಂದು ಸಿಕ್ಕಂತಾಗಿ ಅವನ ಮನಸ್ಸು ಗೆಲುವಾಯಿತು. ಪವಾಡ ಹೇಗೆ ನಡೆದಿರಬಹುದೆಂದು ಮುಕ್ಕಾಲು ಬಾಗ ಅವನಿಗೆ ಗೊತ್ತಾಗಿತ್ತು. ಈಗ ಇದ್ದದ್ದು ಅದನ್ನು ಯಾರು ಮಾಡಿರಬಹುದೆಂದು. ಇನ್ನೊಮ್ಮೆ ಹುಲಿದುರ್ಗಕ್ಕೆ ಹೋಗಲು ತೀರ್ಮಾನಿಸಿದ. ಆದರೆ ಆ "ವಿಶಯ" ಇನ್ನೂ ಅವನಿಗೆ ಹೊಳೆದಿರಲಿಲ್ಲ.

ಮರುದಿನ ಶಂಕರ್ ಮತ್ತು ಪುಲಕೇಶಿ ಎರಡನೇಯ ಬಾರಿಗೆ ಗುಡಿ ಹೊಕ್ಕರು. ಹುರುಪಿನಿಂದ ಪುಲಕೇಶಿ ಗುಡಿಯ ನೆಲವನ್ನು ಎಚ್ಚರಿಕೆಯಿಂದ ನೋಡತೊಡಗಿದ. ಒಂದು ಅಂಗುಲವೂ ಬಿಡದೆ ತಟ್ಟಿ ತಟ್ಟಿ ನೋಡಿದ. ಎಲ್ಲಿಯೂ ಕೆಳಗಿನಿಂದ ಗುಡಿಯ ಒಳಗಡೆ ಬರಬಹುದಾದ ದಾರಿ ಸಿಗಲಿಲ್ಲ. ಗುಡಿಯ ನೆಲದಲ್ಲಿ ಒಂದು ಬಿರುಕು ಕೂಡ ಕಾಣಿಸಲಿಲ್ಲ. ಬೇಸರವಾಗಿ ಮೇಲೆದ್ದ. ಶಂಕರ್ ಮೂಕರಾಗಿ ಪುಲಕೇಶಿಯನ್ನೇ ನೋಡುತ್ತಿದ್ದರು. ಮೂರ್ತಿಗಳನ್ನು ಸುತ್ತಿ, ರಾಮನ ಎದುರಿಗೆ ಪಣತೆ ಇದ್ದ ಜಾಗಕ್ಕೆ ಬಂದ. ಅದನ್ನು ಮತ್ತೆ ಮತ್ತೆ ದಿಟ್ಟಿಸಿನೋಡಿದ. ಪಣತೆಯ ಕೆಳಗೆ ಸವೆದಿದ್ದ ಕಲ್ಲಿನ ಕಡೆಗೆ ಅವನ ನೋಟ ಹರಿಯಿತು. ರಾಮನ ಕಾಲುಗಳ ಮುಂದೆಯೇ ಇತ್ತು ಆ ಪಣತೆ. ಎರಡೂ ಕಾಲುಗಳ ನಡುವೆ ಸಣ್ಣ ತೂತೊಂದು ಕಾಣಿಸಿತು. ದಿಟ್ಟಿಸಿ ನೋಡಿದರೆ ಮಾತ್ರ ಕಾಣುವಂತಿತ್ತು. ಎರಡು ಮಿಲಿ ಮೀಟರ್ ಅಗಲವಿರಬಹುದು, ಅಷ್ಟೇ. ಏನೋ ಹುಡುಕುವವರಂತೆ ಅತ್ತಿತ್ತ ನೋಡಿದನು, ಗುಡಿಯ ಹೊರಗೆ ಬಂದು ಮತ್ತೆ ಅತ್ತಿತ್ತ ನೋಡಿದ. ಕಸ ಗುಡಿಸುವ ತೆಂಗಿನ ಮರದ ಪೊರಕೆಯೊಂದೆ ಕಾಣಿಸಿತು. ಅದರಿಂದ ಒಂದೆರಡು ಕಡ್ಡಿ ಹೀರಿ, ಮತ್ತೆ ಒಳ ಬಂದು ಆ ತೂತಿನಲ್ಲಿ ಕಡ್ಡಿ ಇಳಿಸಿದ. ಸರಳವಾಗಿ ಇಳಿಯಿತು. ಮೇಲೆದ್ದು ಶಂಕರ್ ಕಡೆಗೆ ನೋಡಿ ಮುಗುಳ್ನಕ್ಕನು, ತಿಳಿಯಿತಾ? ಎನ್ನುವ ರೀತಿಯಲ್ಲಿ. ಅಲ್ಲಿ ತೂತೊಂದಿದೆ ಅನ್ನುವುದನ್ನು ಬಿಟ್ಟರೆ ಶಂಕರ್ ಅವರಿಗೆ ಏನೂ ಹೊಳೆಯಲಿಲ್ಲ. ಗೊಂದಲದಿಂದ ಕೂಡಿದ ಅವರ ಮುಕ ನೋಡಿ ಪುಲಕೇಶಿ ಅಂದ, “ಶಂಕರ್ ಅವ್ರೇ... ಅರಿವು ಅನ್ನೋದು ತುಂಬಾ ಬಲವಾದದ್ದು ನೋಡಿ. ಈ ಊರಿನ ತುಂಬಾ ಸುರಂಗಗಳಿವೆ ಅನ್ನೋದು ನನಗೆ ಗೊತ್ತಾಯಿತು. ಅದರಿಂದಲೇ ಈಗ ಈ ಪವಾಡ ಹೇಗೆ ನಡೀತಾಯಿದೆ ಅನ್ನೋದು ತಿಳೀತು”

“ಅಂದ್ರೆ?”

“ಗುಡಿಯ ಕೆಳಗಿನ ಸುರಂಗದಿಂದ, ಸರಿಯಾಗಿ ಪಣತೆ ಪಕ್ಕ, ಅಂದರೆ ರಾಮನ ಕಾಲುಗಳ ಮುಂದೆ ಬರುವಂತೆ ತೂತು ಮಾಡಿದಾರೆ. ಪಣತೆ ಯಾವಾಗಲೂ ಅದೇ ಜಾಗದಲ್ಲಿ ಇರುತ್ತೆ ಅಂತ ಅವರಿಗೆ ಗೊತ್ತು. ಕೆಳಗಡೆಯಿಂದ ಸಣ್ಣ ಪೈಪ್ ಒಂದನ್ನು ಪಣತೆ ಎತ್ತರಕ್ಕೆ ಏರಿಸಿ, ಎಣ್ಣೆ ಪಂಪ್ ಮಾಡಿ ಹಾಕ್ತಿದಾರೆ. ಕಬ್ಬಿಣದ ಪೈಪ್ ಆಗಿರಬೇಕು, ಸುಮಾರು ಅಯ್ದರಿಂದ, ಏಳು ಅಡಿ, ಉದ್ದ”

“ಮತ್ತೆ ಬೆಂಕಿ?”

“ನಾವ್ ಮೊದಲೇ ಮಾತಾಡ್ದ ಹಾಗೆ ಗ್ಲಿಸರೀನ್ ಬಳಸಿರಬಹುದು”

“ಆದ್ರೆ ಈ ಸುರಂಗದ ವಿಶಯ ನನಗೆ ಗೊತ್ತೇ ಇರಲಿಲ್ಲ ಸರ್.”

“ನೀವು ಈ ಊರಿಗೆ ಬಂದು ಎಶ್ಟು ವರ‍್ಶ ಆಯ್ತು?”

“ನಮ್ಮಪ್ಪನ ಕಾಲದಿಂದ್ಲೂ, ಅಂದ್ರೆ ಸುಮಾರು ಅರವತ್ತು ವರ‍್ಶದಿಂದ ಸರ್”

“ಈ ಸುರಂಗಗಳೆಲ್ಲ ಮುಚ್ಚಿ ಹೋಗಿನೇ ಇನ್ನೂರು ವರ‍್ಶ ಆಗಿರಬಹುದು. ಯಾರಿಗೂ ಆ ಬಗ್ಗೆ ಗೊತ್ತಿರಲಿಕ್ಕಿಲ್ಲ”

ಇಬ್ಬರೂ ಗುಡಿಯಿಂದ ಹೊರ ಬಂದರು. ಇನ್ನು ಪುಲಕೇಶಿಯ ಮುಂದಿದ್ದದ್ದು ಇದನ್ನು ಯಾರು ಮಾಡುತ್ತಿದ್ದಾರೆ ಎಂದು ಕಂಡು ಹಿಡಿಯುವುದು. ಶಂಕರ ಅವರೂ ಅದನ್ನೇ ಕೇಳಿದರು. ಪುಲಕೇಶಿ ಅದಕ್ಕೆ ಅಣಿಯಾಗಿಯೇ ಬಂದಿದ್ದ. “ಆ ತೂತಿನಿಂದ ಏನು ತಿಳಿದುಕೊಳ್ಳಬಹುದು ಅಂದ್ರೆ, ಗುಡಿಯ ಒಳಗೆ ಯಾವಾಗಲೂ ಹೋಗಿ ಬರುವ ಯಾರೋ ಒಬ್ಬರು ಮಾಡಿದ್ದಾರೆ ಅಂತ. ಅಂದರೆ ಆ ಅರ‍್ಚಕರಲ್ಲಿಯೇ ಯಾರೋ ಒಬ್ರು ಮಾಡಿದ್ದಾರೆ”

“ಹಾಂ!” ಎಂದು ಬೆರಗಾದನು ಶಂಕರ್.

“ಹೌದು. ಅದೇ ಸತ್ಯ. ನಾವು ಈಗ ಆ ಮೂರೂ ಅರ‍್ಚಕರ ಮನೆಗೆ ಹೋಗ್ಬೇಕಲ್ಲಾ?”

“ಅಂದ್ರೆ? ಅವರ ಮನೆಗೆ ಹೋಗಿ ಅವರ ಮನೇಲಿ ಸುರಂಗ ಏನಾದ್ರು ಇದೆ ಅಂತ ನೋಡ್ತೀರಾ?”

ತುಸು ಹೊತ್ತು ಯೋಚಿಸಿದ ಪುಲಕೇಶಿ, “ಹಾಗ್ ಮಾಡೋಕ್ ಆಗೊಲ್ಲ. ನೇರವಾಗಿ ಅವರಿಗ್ ಕೇಳಿದ್ರೆ ಹುಶಾರಾಗಿ ಬಿಡ್ತಾರೆ. ನಮ್ಮನ್ನ ಮನೆ ಒಳಗೇ ಬಿಟ್ಕೊಳೊಲ್ಲ. ಬೇರೆ ದಾರಿ ಹುಡುಕ್ ಬೇಕು. ಆ ಮೂವರ ಮನೆಗೆ ಒಂದ್ ಸಾರಿ ಹೋಗಿ ಬರಬಹುದಾ?”

“ಅದಕ್ಕೇನು. ಬನ್ನಿ ಹೋಗೋಣ”. ಗಂಟೆ ಎರಡಾಗಿತ್ತು.

ಗುಡಿಯ ಮುಂದೆಯೇ ಹಾಯ್ದು ಮೊದಲು ವೆಂಕಣ್ಣನವರ ಮನೆಗೆ ಬಂದರು. ತುಂಬಾ ಹಳೆಯದಾದ ಮನೆ. ಇವರ ಮನೆಯಲ್ಲೇ ಸುರಂಗ ಇರಬಹುದು ಎಂದುಕೊಂಡ ಪುಲಕೇಶಿ. ಮನೆಯಲ್ಲಿದ್ದದ್ದು ವೆಂಕಣ್ಣನವರು ಮಾತ್ರ. ಶಂಕರ್ ಅವರು ಪುಲಕೇಶಿಯವರ ಪರಿಚಯ ಮಾಡಿಕೊಟ್ಟು, ಗುಡಿಯ ಪವಾಡ ಬಯಲು ಮಾಡಲು ಬಂದಿರುವುದಾಗಿ ಹೇಳಿದರು. ಪುಲಕೇಶಿಗೆ ವೆಂಕಣ್ಣನವರ ಮುಕದಲ್ಲಿ ಯಾವುದೇ ಬದಲಾವಣೆ ಕಾಣಲಿಲ್ಲ. ವೆಂಕಣ್ಣನವರಿಗೆ ಎಪ್ಪತ್ತು ದಾಟಿತ್ತು. ಮಾತಾಡುವಾಗ ಉಸಿರು ಹಿಡಿದು ಹಿಡಿದು ಆಡುತ್ತಿದ್ದರು. ವಾಡಿಕೆಯ ಮಾತು ಮುಗಿದ ಮೇಲೆ ಪುಲಕೇಶಿ ಮಾತು ಹೊರಳಿಸಿದನು, “ಎಶ್ಟ ದಿನದಿಂದ ನೀವು ಗುಡಿ ಪೂಜೆ ಮಾಡ್ತಿದೀರಾ?”

“ನಮ್ ತಂದೆಯವರ ಕಾಲದಿಂದ್ಲೂ ನಾನೇ ಮಾಡ್ತೀನಿ”

“ನಿಮ್ಮನ್ ಬಿಟ್ರೆ ಇನ್ಯಾರು ಮಾಡೋದಿಲ್ವಾ?”

“ನನ್ ಮಗ ಸುಬ್ಬು ಒಂದೊಂದ್ಸಾರಿ ಮಾಡ್ತಾನೆ. ನಂಗೆ ಹುಶಾರು ಇಲ್ದೆ ಇದ್ದಾಗ, ಇಲ್ಲಾ ನಾನು ಊರಲ್ಲಿ ಇರದೇ ಇದ್ದಾಗ”

“ಕೊನೇ ಸರಿ ನಿಮಗೆ ಯಾವಾಗ ಹುಶಾರು ತಪ್ಪಿತ್ತು?”

“ಹ… ಹ…”, ನಗುತ್ತಾ ಹೇಳಿದರು ವೆಂಕಣ್ಣ, “ವಯಸ್ಸಾಯ್ತು ನೋಡಿ, ಆಗಾಗ ಇದ್ದದ್ದೇ. ಎರಡು ವಾರದ ಹಿಂದೆಯಶ್ಟೇ ನೆಗಡಿ ಬಂದು ಮಲಗಿದ್ದೆ”

“ಈ ದೀಪ ಹತ್ಕೊಳ್ಳೊ ಬಗ್ಗೆ ನಿಮಗೇನ್ ಅನ್ಸುತ್ತೆ?”

“ನಂಗೆ ಒಂದೂ ಅರ್ತ ಆಗ್ತಿಲ್ಲ. ನಿಜವೋ, ಸುಳ್ಳೋ, ಆ ರಾಮನಿಗೇ ಗೊತ್ತು”

“ಈ ಮಾತು ನಿಜ ಹೇಳಿದ್ರಿ”, ವ್ಯಂಗ್ಯವಾಗಿ ನಕ್ಕನು ಪುಲಕೇಶಿ. “ಆ ರಾಮನಿಗೆ ಕಂಡಿತಾ ಗೊತ್ತಿರುತ್ತೆ”. ಒಂದೆರಡು ಕ್ಶಣ ಸುಮ್ಮನಿದ್ದು ಮುಂದುವರೆಸಿದನು, “ಒಂದು ಮಾತು… ಒಂದು ವೇಳೆ ಈ ಪವಾಡ ಮನುಶ್ಯರೇ ಮಾಡಿದ್ದು ಅಂತ ಸಾಬೀತಾದ್ರೆ ನಿಮಗ್ ಏನ್ ಅನ್ಸುತ್ತೆ?”

ವೆಂಕಣ್ಣನವರು ತುಸು ಯೋಚಿಸಿ ಹೇಳಿದರು, “ಬೇಜಾರಾಗುತ್ತೆ. ಯಾರಾದ್ರು ಯಾಕ್ ಹೀಗ್ ಮಾಡ್ಬೇಕು?”

“ನಿಮ್ಮ ಮಗ ಸುಬ್ಬು ಎಲ್ಲಿ?” ಎಂದು ಕೇಳಿದನು ಪುಲಕೇಶಿ.

“ಅವನು ಹೆಂಡ್ತಿ ಜೊತೆ ಬೇರೆ ಮನೇಲಿದಾನೆ” ಎಂದರು ವೆಂಕಣ್ಣ, ಮುಕ ಸಣ್ಣಗೆ ಮಾಡಿ.

ವೆಂಕಣ್ಣನವರ ಮನೆಯಿಂದ ಹೊರಬಿದ್ದ ತಕ್ಶಣ, ಶಂಕರ್ ಅವರು ಸುಬ್ಬು ಬೇರೆ ಮನೆಯಲ್ಲಿದ್ದ ಕಾರಣ ತಿಳಿಸಿದರು. ಸುಬ್ಬುವಿನ ಹೆಂಡತಿ ಮತ್ತು ವೆಂಕಣ್ಣನವರ ಮಗಳು ಸಾವಿತ್ರಿ ನಡುವೆ ವಿಪರೀತ ಜಗಳವಂತೆ. ತಾಳಲಾರದೆ ಅವರದೇ ಇನ್ನೊಂದು ಸ್ವಂತ ಮನೆಯಿದ್ದುದರಿಂದ ಹೆಂಡತಿ ಕರೆದುಕೊಂಡು ಒಂದು ವರ್ಶದ ಹಿಂದೆ ಅಲ್ಲಿಗೇ ಹೋಗಿ ಬಿಟ್ಟನಂತೆ. ಮುಂದಿನ ಮನೆಗೆ ಹೋಗುವ ದಾರಿಯಲ್ಲಿ ಶಂಕರ್ ಅವರು, ಪವಾಡದ ದೆಸೆಯಿಂದ ಗುಡಿಯ ಆರತಿ ತಟ್ಟೆ ತುಂಬಿ ತುಳುಕುತ್ತಿದ್ದ ವಿಶಯ ಹೇಳಲು ಮರೆಯಲಿಲ್ಲ.

ಮುಂದಿನದು ಶ್ರೀನಿವಾಸರಾಯರ ಮನೆ. ಅವರಿಗೆ ಸುಮಾರು ಅರವತ್ತು ವರ್ಶ. ಅವರ ಮನೆಯಲ್ಲಿದ್ದದ್ದು ಅವರು, ಮಗ-ಸೊಸೆ, ಇಬ್ಬರು ಮೊಮ್ಮಕ್ಕಳು. ಅವರ ಮನೆಯೂ ಹಳೆಯದಾಗಿ, ಪುಲಕೇಶಿಗೆ ಗೊಂದಲ ಇನ್ನಶ್ಟು ಹೆಚ್ಚಾಯಿತು. ಅವರ ಮಗ ಅವರಿಗಿದ್ದ ಅಯ್ದು ಎಕರೆ ತೋಟ ನೋಡಿಕೊಳ್ಳುತ್ತಿದ್ದ. ಎಲ್ಲರ ಮುಕ, ಕಣ್ಣುಗಳನ್ನು ಓದುತ್ತ, ಪುಲಕೇಶಿ ನೇರವಾಗಿ ಶ್ರೀನಿವಾಸರಾಯರಿಗೆ ಕೇಳಿದ, “ಈ ಪವಾಡದ ಬಗ್ಗೆ ನಿಮಗೇನನಿಸುತ್ತದೆ?”

“ನಾನೂ ಆದಶ್ಟೂ ತಲೆ ಕೆಡಿಸಿಕೊಂಡಿದ್ದೀನಿ. ಆದ್ರೆ ಹ್ಯಾಗೆ ಅಂತ ಹೊಳೀತಿಲ್ಲ” ಅಂದರು. ಅಶ್ಟರಲ್ಲಿ ಅವರ ಮಗ ಬಾಯಿ ಹಾಕಿದನು, “ಯಾರೋ ಬೇಕು ಅಂತಾನೇ ಮಾಡ್ತಿದಾರೆ ಸರ್. ಏನೋ ಟ್ರಸ್ಟು ಅಂತೆಲ್ಲಾ ಓಡಾಡ್ತಿದಾರೆ. ಎಲ್ಲಾ ದುಡ್ಡಿನಾಸೆ. ಅವರೇ ಮಾಡಿಸಿರ್ಬೇಕು”

ಇದ್ರೂ ಇರಬಹುದು ಎನಿಸಿತು ಪುಲಕೇಶಿಗೆ. ಇಡೀ ಊರೇ ಸೇರಿ ಇದನ್ನ ಮಾಡ್ತಿದಾರ? ಎನ್ನುವ ಯೋಚನೆ ಅವನ ತಲೆಯಲ್ಲಿ ಸುಳಿದು ಹೋಯಿತು.

"ಆದ್ರೆ ಗುಡಿಗೆ ಬೀಗದ ಕಯ್ ಇರೋದು ನಿಮ್ ಹತ್ರ ಮಾತ್ರ ಅಲ್ವಾ?" ಕೆಣಕಿದನು ಪುಲಕೇಶಿ.

"ಏನ್ ಸಾರ್ ನಮ್ಮೇಲೆ ಅನುಮಾನ ಪಡ್ತೀರಾ? ಆ ಎರಡ್ ಕಾಸಿನ್ ಬೀಗಕ್ಕೆ ನಕಲಿ ಬೀಗದ ಕಯ್ ಮಾಡ್ಸೋದು ಎಷ್ಟೊತ್ತು ಹೇಳಿ?"

ಅವನ ಕೇಳ್ವಿಗೆ ಪುಲಕೇಶಿ ಬಳಿ ಉತ್ತರವಿರಲಿಲ್ಲ. ಇನ್ನಷ್ಟು ಪ್ರಶ್ನೆ ಕೇಳಿ ಅಲ್ಲಿಂದ ಇಬ್ಬರೂ ಹೊರಬಂದರು. ಮುಂದಿನದು ನಾರಾಯಣ ಅವರ ಮನೆ. ಅವರಿಗೆ ಸುಮಾರು ನಲವತ್ತು ವರ್ಸ. ಮನೆಯಲ್ಲಿ ಹೆಂಡತಿ, ಮತ್ತು ಕಾಲೇಜು ಓದುತ್ತಿರುವ ಒಬ್ಬ ಮಗ. ಅವರ ಮನೆಯೂ ಹಳೆಯದಾಗಿದ್ದರಿಂದ ಪುಲಕೇಶಿ ಮನದಲ್ಲಿಯೇ ನಕ್ಕ. ಎಲ್ಲರ ಮನೆಯನ್ನು ಒಮ್ಮೆ ಹುಡುಕಿ ಬಿಡಬೇಕು ಎನಿಸಿತು. ಒಳ್ಳೆಯ ದಾರಿಯಲ್ಲ ಎಂದು ಸುಮ್ಮನಾದ. ನಾರಾಯಣ ಅವರು ಗುಡಿಯ ಪೂಜೆ ಜೊತೆಗೆ ಪೌರೋಹಿತ್ಯ ಮಾಡುತ್ತಿದ್ದರು. ಅದರಲ್ಲೇ ಅವರ ಜೀವನ ಸಾಗುತ್ತಿತ್ತು. ಅವರಿಗೂ ಅದೇ ಪ್ರಶ್ನೆಗಳನ್ನು ಕೇಳಿ, ಯಾವ ಸುಳಿವೂ ದೊರೆಯದೆ ಹೊರಬಂದನು. ಇಬ್ಬರು ಯಾವ ಮಾತೂ ಆಡದೆ ಮತ್ತೆ ಗುಡಿಯ ಬಯಲಿಗೆ ಬಂದರು. ಅಷ್ಟೊತ್ತು ನೋಡಿದ್ದೆಲ್ಲವನ್ನೂ ಪುಲಕೇಶಿ ಮೆಲುಕು ಹಾಕುತ್ತ, ಶಂಕರ್ ಅವರಿಗೆ ಕೇಳಿದ, "ಈ ಮೂರು ಮನೆಗಳಲ್ಲಿ ಯಾರಿಗೆ ದುಡ್ಡಿನ ಅವಶ್ಯಕತೆ ಇದೆ?"

ತುಸು ಹೊತ್ತು ಯೋಚಿಸಿ, "ಎಲ್ರಿಗೂ ಇದೆ ಸರ್. ವೆಂಕಣ್ಣನವರಿಗೆ ಮಗಳ ಓದು, ಮದುವೆ. ಶ್ರೀನಿವಾಸರಾಯರ ತೋಟದ ದುಡಿಮೆ ಅಷ್ಟಕ್ಕಶ್ಟೆ ಇದೆ. ಅವರ ಮೊಮ್ಮಕ್ಕಳನ್ನಾ ಸಿಟೀಲಿ ಓದಿಸ್ಬೇಕು ಅಂತ ಅವರ ಮಗ ಓಡಾಡ್ತಾಯಿದಾನೆ. ಇನ್ನು ನಾರಾಯಣರು. ಪುರೋಹಿತ್ಯದಿಂದ ಎಶ್ಟು ದುಡ್ಡ್ ಸಿಗುತ್ತೆ ಸರ್ ಈ ಹಳ್ಳೀಲಿ?"

"ರೀ ಶಂಕರ್. ನೀವು ಗಂಟು ಬಿಡಸೋ ಬದಲು ಇನ್ನಷ್ಟು ಗಟ್ಟಿಯಾಗಿ ದಾರ ಎಳೀತಿದಿರಾ" ಎಂದು ನಕ್ಕು ಯೋಚನೆಯಲ್ಲಿ ಮುಳುಗಿದನು.

ಅವನಿಗೆ ಒಂದು ವಿಶಯ ಹೊಳೆಯಿತು. ಈ ಮೂರು ಮನೆಗಳು ಗುಡಿಗೆ ಹತ್ತಿರವಾಗಿ, ಅದರ ಸುತ್ತವೇ ಇದ್ದವು. ವೆಂಕಣ್ಣನವರದು ಗುಡಿಯ ಎಡಕ್ಕೆ, ಶ್ರೀನಿವಾಸರಾಯರದು ಬಲಕ್ಕೆ, ಮತ್ತು ನಾರಾಯಣ ಅವರದು ಗುಡಿಯ ಹಿಂದೆ. ಸುರಂಗ ಬಳಸಿ ಈ ಪವಾಡ ನಡೆಯುತ್ತಿದೆ ಎನ್ನುವ ಅವನ ನಂಬಿಕೆಗೆ ಈ ವಿಚಾರ ಇಂಬು ಕೊಟ್ಟಿತು. ಸ್ವಲ್ಪ ಹೊತ್ತಿನ ನಂತರ, ತನ್ನ ವಿಚಾರಗಳನ್ನು ಬಿಚ್ಚಿಟ್ಟನು, "ನೋಡಿ, ಈಗ ಯಾರು ಮಾಡಿರಬಹುದು, ಯಾರು ಮಾಡಿರಲಿಕ್ಕಿಲ್ಲ ಅಂತ ಯೋಚಿಸೋಣ. ನನ್ನ ಪ್ರಕಾರ, ಆ ಟ್ರಸ್ಟಿನ ಜನ ಇದನ್ನ ಮಾಡಿರೋಕೆ ಚಾನ್ಸ್ ಇಲ್ಲಾ. ಇಂತಾ ಗುಟ್ಟನ್ನಾ ಅಶ್ಟು ಜನ ಸೇರಿ ಕಾಪಾಡ್ಕೊಳ್ಳೋಕೆ ಸಾದ್ಯ ಇಲ್ಲ. ಅಲ್ದೇ, ಅಲ್ಲಿದ್ದವರಿಗೆ ಗುಡಿಯ ಒಳಗೆ ಸಲೀಸಾಗಿ ಹೋಗಿ ಬರೊಕ್ಕೆ ಆಗೊಲ್ಲ. ಹಾಗಾಗಿ ಅದನ್ನ ಬಿಟ್ ಬಿಡೋಣ. ಈ ಮೂರ್ ಮನೇಲೇ ಯಾರೋ ಮಾಡ್ತಿದಾರೆ ಅಂತ ನನಗೆ ಅನಿಸ್ತಾಯಿದೆ. ಅವರಲ್ಲಿ ಯಾರ್ ಮನೇಲೂ ಸುರಂಗ ಇರಬಹುದು. ಈಗ ಹೇಳಿ, ವೆಂಕಣ್ಣನವರ ಮನೇಲಿ ಯಾರ ಮೇಲೆ ಅನುಮಾನ ಪಡಬಹುದು?"

"ವೆಂಕಣ್ಣನವರ ಮಗ ಇಂತದ್ದೆಲ್ಲ ಮಾಡ್ತಾನೆ ಅಂತ ನಂಗ್ ಅನ್ಸಲ್ಲಾ ಸಾರ್. ಅವನು ತುಂಬಾ ಮುಗ್ದ. ತಾನಾಯ್ತು ತನ್ ಕೆಲ್ಸಾ ಆಯ್ತು. ಅಲ್ದೆ ಅವನು ಈಗಿರೋ ಮನೆ ತುಂಬಾ ದೂರ ಸರ್"

"ವೆಂಕಣ್ಣನವರೇ ಮಾಡಿರಬಹುದು ಅಂತ ನಿಮಗ್ ಅನ್ಸಲ್ವಾ?"

"ಅಯ್ಯೋ... ಇಲ್ಲಾ ಸರ್"

"ಅವರನ್ನಾ ನೋಡಿದ್ರೆ ನಂಗೂ ಆ ಅನುಮಾನ ಬರ್ಲ್ಲಿಲ್ಲ. ಹಮ್... ಅವರ ಮಗಳು? ಅದೇ ಆ ಸೆಂಟಿನ ಹುಡಗಿ?"

"ಅವ್ಳಾ... ಇದ್ರೂ ಇರಬಹುದು ಸಾರ್. ತುಂಬಾ ಚೂಟಿ ಅವ್ಳು"

ಸ್ಟ್ರೀಟ್ ಸ್ಮಾರ್ಟ್ ಎಂದುಕೊಂಡ ಪುಲಕೇಶಿ ಮನದಲ್ಲೇ.

ಶಂಕರ್ ತಮ್ಮ ಮಾತನ್ನು ತಡೆದು, "ಇಲ್ಲಾ ಸರ್. ಆ ಹುಡ್ಗಿ ಮಾಡಿರೋಕೆ ಸಾದ್ಯಾನೇ ಇಲ್ಲ"

“ಹೇಗೆ?”

“ಈ ದೀಪಾ ಹತ್ತೋಕೆ ಶುರು ಆದ ಎರಡನೇ ಅಮವಾಸ್ಯೆಗೆ ವೆಂಕಣ್ಣನವ್ರು ಮತ್ತೆ ಅವ್ರ ಮಗಳು ಯಾರೊ ನೆಂಟ್ರು ತೀರ್ ಹೋಗಿದಾರೆ ಅಂತ ಬೇರೆ ಊರಿಗ್ ಹೋಗಿದ್ರು. ಅವ್ರು ಊರಲ್ಲಿ ಇಲ್ದೆ ಇರೋವಾಗ್ಲೂ ದೀಪ ಹತ್ಕೊಂಡಿದೆಯಲ್ಲಾ ಸರ್"

ಒಂದೆರಡು ಕ್ಷಣ ಪುಲಕೇಶಿ ಮಂಕಾದನು. ಮತ್ತೆ ಎಚ್ಚರಗೊಂಡು,

“ಆ ಶ್ರೀನಿವಾಸರಾಯರು?”

“ಅವರ ಮೇಲೆ ಅನುಮಾನ ಇಲ್ಲಾ ಬಿಡಿ. ಅವರೂ ಹಿರಿಯರು. ಅವ್ರು ಹಾಗೆಲ್ಲಾ ಮಾಡ್ಬಹುದು ಅಂತ ಅನ್ಸೊಲ್ಲ. ಆದ್ರೆ ಅವರ ಮಗ ಮಾಡಿದ್ರೂ ಮಾಡಿರಬಹುದು. ಅದೇ... ಗೋಪಿ"

“ಹಮ್... ಇನ್ನು ನಾರಾಯಣರು?”

“ಇಲ್ಲಾ ಸರ್. ಮೊನ್ನೆ ಅಮವಾಸ್ಯೆಗೆ ಅವ್ರು, ಅವರ ಮಗ ಇಬ್ರೂ, ದೀಪಾ ಹತ್ತೋವಾಗ ಗುಡಿಲೇ ಇದ್ರು. ನಂಗ್ ನೆನೆಪಿದೆ"

“ಮೊದಲಿಂದ಼್ಲೂ ಇದ್ರಾ, ಇಲ್ಲಾ ದೀಪಾ ಹತ್ತೋ ಹೊತ್ತಿಗೆ ಸರಿಯಾಗಿ ಬಂದ್ರ?”

“ಸರಿಯಾಗಿ ನೆನಪಿಲ್ಲ ಸರ್. ಆದ್ರೆ ದೀಪಾ ಹತ್ಕೊಳ್ಳೋವಾಗ ಮಾತ್ರ ಅಲ್ಲಿದ್ರು"

“ಶ್ರೀನಿವಾಸರಾಯರ ಮಗ? ಅವ್ರೂ ಇದ್ರಾ?”

ತುಸು ಹೊತ್ತು ಯೋಚಿಸಿ, “ಇರಲಿಲ್ಲ ಅನ್ಸುತ್ತೆ ಸರ್"

ಪುಲಕೇಶಿ ಈ ಎಲ್ಲವನ್ನೂ ತನ್ನ ತಲೆಯಲ್ಲಿ ಇಂಗಿಸಿಕೊಳ್ಳುತ್ತಾ ಕಣ್ಣು ಮುಚ್ಚಿ ನಿಂತ. ಆಮೇಲೆ ಕಣ್ಣು ತೆಗೆದು ತುಟಿಯಂಚಿನಲ್ಲಿ ನಕ್ಕ. ಆ ನಗುವಿನ ಹುರುಳು ಏನೆಂದು ಶಂಕರ್ ಅವರಿಗೆ ತಿಳಿಯಲಿಲ್ಲ. “ಏನಾಯ್ತ್ ಸಾರ್?” ಕೇಳಿದರು.

“ಯಾಕೋ ಈ ಗಂಟು ಬಿಡಸೋಕೆ ನಾನು ಕಲಿತಿದ್ದು ಸಾಕಾಗಿಲ್ಲ ಅನ್ಸುತ್ತೆ. ಕಾಲೇಜಿಗ್ ಹೋಗಿ ಮತ್ತೆ ಕಲಿತು ಬರ್ತೀನಿ"

“ಕಾಲೇಜಿಗಾ?”

ಸುಮಾರು ದಿನಗಳು ಕಳೆದ ನಂತರ ಶಂಕರ್ ಅವರು ಪುಲಕೇಶಿಗೆ ಕರೆ ಮಾಡಿದರು, “ಏನ್ ಸರ್. ಇನ್ನೆರಡು ದಿನಾ ಬಿಟ್ರೆ ಮತ್ತೆ ಅಮವಾಸ್ಯೆ ಬಂತು. ನೀವ್ ಆವತ್ತು ಬಂದವ್ರು ಮತ್ತೆ ಈ ಕಡೆ ಬರ್ಲೇ ಇಲ್ಲಾ? ಏನಾದ್ರೂ ಗೊತ್ತಾಯ್ತಾ ಸರ್?”

“ಇನ್ನೂ ಏನೂ ಗೊತ್ತಾಗಿಲ್ಲ ರೀ. ನಂಗ್ ಟೈಮ್ ಬೇಕು" ಸಿಡುಕಿನಲ್ಲಿ ಹೇಳಿದ ಪುಲಕೇಶಿ.

“ಅಮವಾಸ್ಯೆ ದಿನಾ ಬರ್ತೀರಾ ಸರ್? ದೀಪ ಹತ್ಕೊಳ್ಳೋದನ್ನಾ ನೋಡೋಕೆ?”

“ಇಲ್ಲಾ ರೀ. ನಂಗೆ ಅವತ್ತು ಬೇರೆ ಕೆಲ್ಸ ಇದೆ" ಎಂದು ಕರೆ ಮುಗಿಸಿದ.

ಅಂದು ಅಮವಾಸ್ಯೆ. ದೀಪ ತನ್ನಿಂತಾನೇ ಹತ್ತಿಕೊಳ್ಳುವ ಸುದ್ದಿ ಊರಿಂದ ಊರಿಗೆ ಹರಡಿ ಹುಲಿದುರ್ಗದ ಗುಡಿಯ ಬಯಲು ಕಿಕ್ಕಿರಿದು ತುಂಬಿತ್ತು. ರಾತ್ರಿ ಎಷ್ಟು ಹೊತ್ತಿಗೆ ಬೇಕಾದರೂ ದೀಪ ಹತ್ತಿಕೊಳ್ಳುತ್ತಿದ್ದರಿಂದ ಊರಿನ ಬಹುತೇಕರು ಬೇಗ ಊಟ ಮುಗಿಸಿ ಗುಡಿಕಡೆ ಹೊರಟಿದ್ದರು. ವೆಂಕಣ್ಣನವರೂ ಹೊರಟರು.

“ಸಾವಿತ್ರಿ, ಬರ್ತಿ ಏನೇ?”

“ಇಲ್ಲಾ ಅಪ್ಪಾ. ನೀವ್ ಹೋಗಿ ನಾನು ಮಲ್ಕೋತೀನಿ. ಹೊರಗಡೆ ಬೀಗ ಹಾಕ್ಕೊಂಡ್ ಹೋಗಿ” ಎಂದಳು ಸೆಂಟಿನ ಹುಡುಗಿ.

ಆಯಿತೆಂದು ವೆಂಕಣ್ಣನವರು ಗುಡಿಕಡೆ ಹೊರಟರು. ಗಂಟೆ ರಾತ್ರಿ ಹತ್ತಾಗಿತ್ತು. ಗುಡಿಯ ಹತ್ತಿರ ಕಾರೊಂದು ಬಂದು ನಿಂತಿತು. ಅದರಿಂದ ಮೂವತ್ತರ ಹುಡುಗನೊಬ್ಬ ಇಳಿದು ಗುಡಿಯ ಬಯಲಲ್ಲಿ ಜನಗಳ ನಡುವೆ ಬಂದು ನಿಂತ. ಅಶ್ಟರಲ್ಲಿ ಶಂಕರ್ ಅವರ ಮೊಬಾಯಿಲಿಗೆ ಕರೆ ಬಂದಿತು, ಪುಲಕೇಶಿಯದು. ಗದ್ದಲಲ್ಲಿದ್ದ ಶಂಕರ್, ಗುಡಿಯ ಬಯಲಿನಿಂದ ದೂರ ಬಂದು ಮಾತಾಡಿದರು,

“ಹೇಳಿ ಸರ್”

“ರೀ ಶಂಕರ್. ಗುಡಿಯ ಹೊರಗಿರೋ ಕಾರಲ್ಲಿ ನಾನ್ ಕೂತಿದೀನಿ. ಯಾರ್‍ಗೂ ಗೊತ್ತಾಗದ ಹಾಗೆ ಇಲ್ಲಿ ಬನ್ನಿ”

“ಸರಿ” ಎಂದು ಕರೆ ಮುಗಿಸಿ, ಮನೆಕಡೆ ಹೋಗುವವರಂತೆ ನಟಿಸುತ್ತಾ, ಹಾದಿ ಬದಲಿಸಿ, ಸುತ್ತು ಹಾಕಿ ಕಾರಿನ ಕಡೆ ಬಂದರು ಶಂಕರ್.

ಕಾರಿನ ಬಾಗಿಲು ತಗೆದು, ಶಂಕರ್ ಅವರನ್ನು ಒಳಗಡೆ ಬಿಟ್ಟುಕೊಂಡ ಪುಲಕೇಶಿ. “ಶಂಕರ್. ನನ್ನ ಬಗ್ಗೆ ಯಾರಾದ್ರೂ ಇವತ್ತು ನಿಮಗೆ ಕೇಳಿದ್ರಾ?”

ಸ್ವಲ್ಪ ಯೋಚಿಸಿ, “ಹೌದು ಸರ್”

“ಯಾರು?”

“ಅದೇ ಆ ಟ್ರಸ್ಟಿನವ್ರು”

“ಅವರನ್ನಾ ಬಿಟ್ಟು?”

“ಹಮ್... ಗೋಪಿ ಸರ್. ಅದೇ ನಾರಾಯಣರ ಮಗ”

ಮನದಲ್ಲೇ ನಕ್ಕ ಪುಲಕೇಶಿ. “ಏನಂತ ಕೇಳ್ದ?”

“ಪುಲಕೇಶಿಯವ್ರು ಬರ್‍ತಾರ ಸರ್? ಅಂತ ಕೇಳ್ದ. ಇವತ್ತಶ್ಟೇ ಅಲ್ಲ. ಮೊನ್ನೆನೂ ಕೇಳಿದ್ದ”

“ಹ ಹ ಹಾ...” ಎಂದು ಮನಸಾರೆ ನಕ್ಕ ಪುಲಕೇಶಿ.

“ಯಾಕೆ ಸರ್? ಅವನೇ ಅಂತ ನಿಮ್ ಅನುಮಾನನಾ? ಆದ್ರೆ ಅವ್ನು ಇವತ್ತು ಇಲ್ಲೇ ಗುಡೀಲೇ ಇದಾನೆ. ಅವ್ನು ಇಲ್ಲೇ ಇದ್ರೆ ದೀಪ ಅದ್ ಹೇಗೆ ಹತ್ಕೊಳ್ಳುತ್ತೆ?”

“ಇದರ ಹಿಂದೆ ಇರೋದು ಅವ್ನೇ. ಅವ್ನು ಇಲ್ಲೇ ಇದ್ರೂ ದೀಪ ಹತ್ಕೊಳ್ಳುತ್ತೆ. ಹ್ಯಾಗೆ ಅಂತ ತೋರಿಸ್ತೀನಿ”. ಶಂಕರ್ ಅವರು ಬೆರಗು ಗಣ್ಣಿನಿಂದ ಪುಲಕೇಶಿ ಮುಕವನ್ನೇ ದಿಟ್ಟಿಸಿದರು.

ಗಂಟೆ ಒಂದಾಯಿತು. ಇವರಿಬ್ಬರೂ ಇನ್ನೂ ಕಾರಲ್ಲೇ ಇದ್ದರು. ಒಮ್ಮಿದ್ದೊಮ್ಮೆಲೇ ಗುಡಿಯ ಬಯಲಿನಿಂದ “ಹೋ...” ಎನ್ನುವ ಜನರ ಕೂಗು ಕೇಳಿಸಿತು. ದೀಪ ಹತ್ತಿಕೊಂಡಿತು ಎಂದು ಗೊತ್ತಾದ ಪುಲಕೇಶಿ, ಕಾರಿನಿಂದ ಇಳಿದು ನೇರ ವೆಂಕಣ್ಣನವರ ಮನೆ ಕಡೆಗೆ ಓಡಿದ. ಶಂಕರ್ ಅವರು ಅಶ್ಟೇ ವೇಗದಲ್ಲಿ ಹಿಂಬಾಲಿಸಿದರು. ಎಲ್ಲರೂ ಗುಡಿಯ ಒಳಗಿನ ಬಯಲಲ್ಲಿದ್ದುದರಿಂದ ಯಾರೂ ಅವರನ್ನು ನೋಡಲಿಲ್ಲ. ಅವರ ಮನೆ ಬೀಗ ಹಾಕಿತ್ತು. ಬಾಗಿಲಿಗೆ ಜೋರಾಗಿ ಒದ್ದ ಪುಲಕೇಶಿ. ಅವನು ಒದ್ದ ಏಟಿಗೆ ಚಿಲಕವೇ ಮುರಿದು ಬಿತ್ತು. ಮನೆಯ ಒಳಗೆ ನುಗ್ಗಿ ಏನೋ ಹುಡುಕಿದ. ಒಂದು ಕೋಣೆಯ ಬಾಗಿಲು ಒಳಗಡೆಯಿಂದ ಹಾಕಿಕೊಂಡಿತ್ತು. ಅದನ್ನೂ ಜೋರಾಗಿ ಒದ್ದ. ತೆರೆಯಿತು. ಕೋಣೆಯ ಒಳಗಡೆ ಕವಾಟೊಂದು ಕಾಣಿಸಿತು. ಅದರ ಬಾಗಿಲು ಅರ್ದ ತೆರೆದಿತ್ತು. ಪೂರ್ತಿಯಾಗಿ ತೆರೆದ ಪುಲಕೇಶಿ. ಅದು ಸುರಂಗ ದಾರಿಗೆ ಎಡೆಮಾಡಿಕೊಟ್ಟಿತು. ಮಂದವಾಗಿ ನಕ್ಕ. ಆದರೆ ಆ ದಾರಿಯಲ್ಲಿ ಇಳಿಯದೆ, ಅದನ್ನು ಮುಚ್ಚಿ, ಅದಕ್ಕಿದ್ದ ಚಿಲಕ ಹಾಕಿ, ಅದು ತೆರೆಯದಂತೆ ಬದ್ರಪಡಿಸಿದ.

“ಯಾಕ್ ಸರ್ ಮುಚ್ಚಿದ್ರಿ? ಅಲ್ಲೇ ಇಳಿದು ಹೋಗ್ಬಹುದಲ್ಲಾ?” ಗೊಂದಲಗೊಂಡು ಕೇಳಿದರು ಶಂಕರ್.

“ನನ್ಗೆ ಡ್ರಾಮಾ ಅಂದ್ರೆ ತುಂಬಾ ಇಶ್ಟ” ನಕ್ಕನು ಪುಲಕೇಶಿ.

ಅಲ್ಲಿಂದ ತಕ್ಶಣ ಹೊರಬಂದು, ಬಾಗಿಲುಗಳನ್ನು ಮುಚ್ಚಿ, ಮುರಿದಿದ್ದ ಚಿಲಕ ಹಾಗೇ ಸಿಕ್ಕಿಸಿ, ನಾರಾಯಣರ ಮನೆಕಡೆಗೆ ಓಡಿದ. ಶಂಕರ್ ಹಿಂಬಾಲಿಸಿದರು. ಬಾಗಿಲು ತಟ್ಟಿದಾಗ, ಅವರ ಹೆಂಡತಿ ತೆರೆದರು, ಕಣ್ಣು ಉಜ್ಜುತ್ತಾ. ತೊಂದರೆ ಮಾಡಿದ್ದಕ್ಕೆ ಕ್ಶಮೆ ಕೇಳುತ್ತಾ, “ಗೋಪಿ ಮಲಗುವ ಕೋಣೆ ತೋರಿಸಿ ತಾಯಿ” ಎಂದ ಪುಲಕೇಶಿ.

“ಬನ್ನಿ” ಎನ್ನುತ ಅವನ ಕೋಣೆಗೆ ಕರೆದುಕೊಂಡು ಹೋದರು ನಾರಾಯಣರ ಹೆಂಡತಿ.

ಅಲ್ಲಿಯೂ ಅದೇ ತರಹದ ಕವಾಟು ಇತ್ತು. ಈ ಬಾರಿ ಏನೂ ಮಾಡದೆ, ಅದರ ಎದುರಿಗೆ ಪುಲಕೇಶಿ ಸುಮ್ಮನೆ ನಿಂತ. ಅವನ ಹಿಂದೆ ಶಂಕರ್ ಮತ್ತು ನಾರಾಯಣರ ಹೆಂಡತಿ ಇದ್ದರು. ಒಂದಯ್ದು ನಿಮಿಶದಲ್ಲಿ, ಆ ಕವಾಟಿನ ಹಿಂದೆ ಯಾರೋ ಬರುವ ಸಪ್ಪಳವಾಯಿತು. ಪುಲಕೇಶಿ ಎಲ್ಲರಿಗೂ ಸುಮ್ಮನಿರುವಂತೆ, ಮತ್ತು ಅಡಗಿಕೊಳ್ಳುವಂತೆ ಸನ್ನೆ ಮಾಡಿದ. ಕವಾಟಿನಿಂದ ವೆಂಕಣ್ಣನವರ ಮಗಳು ಸಾವಿತ್ರಿ ಹೊರಬಂದಳು. ಅದನ್ನು ನೋಡಿ ಶಂಕರ್ ಮತ್ತು ನಾರಾಯಣರ ಹೆಂಡತಿಗೆ ಬೆರಗಾದರೆ, ಪುಲಕೇಶಿ ಜೋರಾಗಿ ನಕ್ಕು ಅವಳ ಮುಂದೆ ಬಂದ.

ಅಲ್ಲಿದ್ದವರನ್ನು ನೋಡಿ ಸಾವಿತ್ರಿಗೆ ಬೆರಗು, ನಾಚಿಕೆ ಒಟ್ಟಿಗೆ ಆಯಿತು. ಏನು ಮಾಡಬೇಕು ತೋಚದೆ ಅವಮಾನದಿಂದ ತಲೆ ತಗ್ಗಿಸಿ, ಕೆಳಗೆ ಕೂತು ಅಳತೊಡಗಿದಳು. ವೆಂಕಣ್ಣನವರನ್ನು ಅಲ್ಲಿಗೇ ಕರೆತರಲು ಶಂಕರ್ ಅವರಿಗೆ ಪುಲಕೇಶಿ ಕೇಳಿಕೊಂಡ. ಶಂಕರ್ ಅವರು ಹೋಗಿ, ಒಂದು ಹದಿನಯ್ದು ನಿಮಿಶದಲ್ಲಿ ವೆಂಕಣ್ಣನವರು, ನಾರಾಯಣ ಮತ್ತು ಗೋಪಿ ಮೂವರನ್ನೂ ಕರೆದುಕೊಂಡು ಬಂದರು. ಬಂದವರಿಗೂ ಬೆರಗಾಯಿತು. ಪುಲಕೇಶಿ ಗೋಪಿಯತ್ತ ತಿರುಗಿ ಕೇಳಿದ,

“ಗೋಪಿ, ಏನ್ ಕತೆ ಅಂತ ನೀನೇ ಹೇಳ್ತೀಯಾ ಇಲ್ಲಾ ಪೊಲೀಸರಿಗೆ ಕರಿಸ್ಲಾ?” ಗೋಪಿ ಮತ್ತು ಸಾವಿತ್ರಿಯ ಗೆಳೆತನದ ಬಗ್ಗೆ ಅವನಿಗೆ ಗೊತ್ತಾಗಿತ್ತು.

ಪೊಲೀಸ್ ಅಂದ ತಕ್ಶಣ ಅಲ್ಲಿದ್ದ ಎಲ್ಲರಿಗೂ ದಿಗಿಲಾಯಿತು. “ಬಾಯಿ ಬಿಡೋ ಮುಂಡೆದೆ” ಎಂದು ಏರು ದನಿಯಲ್ಲಿ ಬಯ್ದರು ನಾರಾಯಣ. ಬೇರೆ ದಾರಿಯಿಲ್ಲದೆ ಗೋಪಿ ನಡೆದುದೆಲ್ಲ ಹೇಳಿದ. ಗೋಪಿ ಮತ್ತು ಸಾವಿತ್ರಿ ಇಬ್ಬರೂ ಕಾಲೇಜಿನಲ್ಲಿ ಒಡನಾಡಿಗಳಾಗಿದ್ದರು. ತಮ್ಮ ತಮ್ಮ ಮನೆಯಲ್ಲಿದ್ದ ಮುಚ್ಚಿಹೋದ ಸುರಂಗಳನ್ನು ತೆರೆಯುವ ಕುತೂಹಲ ಮೂಡಿತು. ಅದಕ್ಕೆಂದೇ ತನ್ನ ಅತ್ತಿಗೆಯ ಜೊತೆ ಜಗಳಾಡಿ ಅವರು ಮಲಗುತ್ತಿದ್ದ ಕೋಣೆಯನ್ನು ತನ್ನ ಹಿಡುವಳಿಯಲ್ಲಿ ತೆಗೆದುಕೊಂಡಿದ್ದಳು ಸಾವಿತ್ರಿ. ಆ ಕೋಣೆಯಲ್ಲೇ ಸುರಂಗ ಸೇರುವ ದಾರಿ ಇದ್ದದ್ದು. ಅವರ ಕೋಣೆಯಲ್ಲಿದ್ದ ಸುರಂಗಗಳು ಅವರಿಬ್ಬರ ಮನೆಗಳನ್ನೇ ಕೂಡುತ್ತಿದ್ದವು. ಅವರಿಬ್ಬರ ಮನೆಗಳು ಹತ್ತಿರವೇ ಇದ್ದುದರಿಂದ, ಸುರಂಗವೇನೂ ಅಶ್ಟು ಉದ್ದವಿರಲಿಲ್ಲ. ಇಬ್ಬರೂ ಆರು ತಿಂಗಳುಗಳ ಕಾಲ ಸುರಂಗದಲ್ಲಿ ಕೂಡಿದ್ದ ಕಲ್ಲು ಮಣ್ಣು ತೆಗೆದು ದಾರಿ ಮಾಡಿಕೊಂಡರು. ತಾವು ತೆರೆದ ಸುರಂಗಗಳು ತಮ್ಮ ಮನೆಗಳನ್ನೇ ಕೂಡುತ್ತವೆ ಎಂದು ಗೊತ್ತಾಗಿ ಇಬ್ಬರಿಗೂ ಕುಶಿಯಾಯಿತು.

ಹೇಗಾದರೂ ಮಾಡಿ ಆ ಸುರಂಗದ ಬಳಕೆ ಪಡೆಯಲು ಇಬ್ಬರೂ ಯೋಚಿಸಿದರು. ಈ ಪವಾಡದ ಹೊಳಹು ಮೂಡಿ, ಗುಡಿಯ ಕೆಳಗಿನ ತನಕ ಇನ್ನೊಂದು ಸುರಂಗ ಅಗೆಯುವ ಮನಸ್ಸು ಮಾಡಿದರು. ಅದೂ ಆರು ತಿಂಗಳು ತೆಗೆದುಕೊಂಡಿತು. ನಂತರ ಸಲಕರಣೆಗಳನ್ನು ಬಳಸಿ, ರಾಮನ ಮೂರ್ತಿಯ ಅಡಿಯ ತನಕ ತೂತು ಕೊರೆದು ಈ ಪವಾಡಕ್ಕೆ ಅಣಿಯಾಗಿದ್ದರು. ಕೆಲವೊಮ್ಮೆ ಗೋಪಿ ಈ ಪವಾಡ ಮಾಡಿದರೆ, ಇನ್ನೊಮ್ಮೆ ಸಾವಿತ್ರಿ ಮಾಡುತ್ತಿದ್ದಳು.


ಅಮವಾಸ್ಯೆಯ ದಿನದ ಸಂಜೆ, ಗೋಪಿ, ಹೇಗಾದರೂ ಮಾಡಿ ಪಣತೆಯ ಬತ್ತಿಗೆ ಪೊಟಾಶಿಯಮ್ ಪರಮ್ಯಾಂಗ್ನೇಟ್ ಪುಡಿ ಹಚ್ಚಿ ಬರುತ್ತಿದ್ದನು. ಆಮೇಲೆ ಕೆಳಗಿನಿಂದ ಮೊದಲು ಗ್ಲಿಸರೀನ್, ಆಮೇಲೆ ಎಣ್ಣೆಯನ್ನು ಒತ್ತಿ ನೂಕುತ್ತಿದ್ದರು. ಹಗಲು ಹೊತ್ತಿನಲ್ಲೇ ಯಾರೂ ಮನೆಯಲ್ಲಿ ಇಲ್ಲದ ಸಮಯ ನೋಡಿ ಇವರು ಸುರಂಗ ಅಗೆಯುತ್ತಿದ್ದದ್ದು. ಸುರಂಗಕ್ಕೆ ಸೇರುವ ಕವಾಟಿನ ಬಾಗಿಲುಗಳು ಎಶ್ಟೋ ವರ್ಶಗಳಿಂದ ಮುಚ್ಚಿಯೇ ಇದ್ದುದರಿಂದ, ಮನೆಯವರು ಅದರ ಬಗ್ಗೆ ತಲೆಕೆಡಿಸಿಕೊಂಡಿರಲಿಲ್ಲ.

ಇದನ್ನೆಲ್ಲ ಕೇಳಿ ವೆಂಕಣ್ಣನವರು ಮತ್ತು ನಾರಾಯಣರಿಗೆ ಬೇಸರದ ಜೊತೆಗೆ ದುಕ್ಕವಾಯಿತು. "ಮುಂದೇನು?" ಎನ್ನುವಂತೆ ಪುಲಕೇಶಿ ವೆಂಕಣ್ಣನವರ ಕಡೆ ನೋಡಿದ. ಅವರು ಹತ್ತಿರ ಬಂದು, ಅವನ ಕಯ್ಗಳನ್ನು ಹಿಡಿದು "ಯಾರಿಗೂ ಹೇಳಬೇಡಿ" ಎಂದು ಬೇಡಿಕೊಂಡರು. ನಾರಾಯಣ ಅವರೂ ಅದನ್ನೇ ಹೇಳಿದರು. ಪುಲಕೇಶಿ ಶಂಕರ್ ಅವರ ಕಡೆ ನೋಡಿದನು. ಅವರು,

"ಹೋಗಲಿ ಬಿಡಿ, ಏನೋ ಹುಡುಗ ಬುದ್ದಿ. ಸುಮ್ನೆ ದೊಡ್ಡದು ಮಾಡಿದ್ರೆ ಅವರ ಮನೆ ಮರ್‍ಯಾದೆ ಹೋಗುತ್ತೆ" ಅಂದರು. ಪುಲಕೇಶಿ ತಲೆದೂಗಿದನು.

***(ಚಿತ್ರ ಸೆಲೆ: fineartamerica.com )***

# ಸರ್ಕಾರಿ ಆಸ್ಪತ್ರೆ



ಸರ್ಕಾರಿ ಆಸ್ಪತ್ರೆ. ಕಗ್ಗತ್ತಲ ಜೊತೆ ಮಳೆಯೂ ಸೇರಿ, ಪಾತಕದ ಜಗತ್ತಿಗೆ ವೇದಿಕೆ ಸಿದ್ದ ಮಾಡಿ ಕೊಟ್ಟಿದ್ದವು. ವಾರ್ಡಿನ ಒಳಗಿನ ಸಾಮಾನುಗಳೆಲ್ಲ ಜೋರು ಗಾಳಿಗೆ ಹಾರಲು ಶುರುವಾದಾಗ, ರಾತ್ರಿ ಪಾಳಿಯ ನರ್ಸು, ಸಾವಿತ್ರಿ, ಕಿಡಕಿಗಳನ್ನೆಲ್ಲ ಮುಚ್ಚಿದಳು. ಮೋಡಗಳ ಗುಡು ಗುಡು ಬಿಟ್ಟರೆ ಬೇರಾವ ದನಿಯೂ ಇಲ್ಲ. ಆಗಾಗ ರಾತ್ರಿ ಪಾಳಿಯ ನರ್ಸ್ ಗಳು ಮತ್ತು ಡಾಕ್ಟರ್ ಗಳು ಅಡ್ಡಾಡುವುದು ಬಿಟ್ಟರೆ ಬೇರಾವ ಜನರ ಸುಳಿವೂ ಇರಲಿಲ್ಲ. ಹದಿಮೂರನೇ ಮಂಚದ ಮೇಲೆ ಮಲಗಿದ್ದ ಪೇಶಂಟು ಕಣ್ಣು ತೆರೆದೂ ತೆರೆಯದಂತೆ ಎದುರಿನ ಗೋಡೆಯ ಮೇಲಿದ್ದ ಗಡಿಯಾರ ನೋಡಿದಳು. ರಾತ್ರಿ ಹನ್ನೊಂದು. ಇನ್ನೊಂದು ಗಂಟೆ ತನ್ನ ಬಿಡುಗಡೆಗೆ ಎಂದುಕೊಂಡಳು. ಜಯ್ಲಿನಿಂದ ಬಿಡುಗಡೆ, ಒಂಟಿತನದಿಂದ ಬಿಡುಗಡೆ, ನಾಲ್ಕು ಗೋಡೆಗಳ ನಡುವೆಯೇ ಇನ್ನೂ ಹತ್ತು ವರ್ಶ ಕೊಳೆಯುವುದರಿಂದ ಬಿಡುಗಡೆ. ತನ್ನ ಮತ್ತು ಹೊರ ಜಗತ್ತಿನ ನಡುವೆ ಇರುವುದು ಈ ಆಸ್ಪತ್ರೆ, ಈ ರಾತ್ರಿಯೊಂದೇ ಅಂದುಕೊಂಡಳು. ಮೂರು ತಿಂಗಳುಗಳ ಕಾಲ ಈ ದಿನಕ್ಕಾಗಿ ಕಾದಿದ್ದಳು. ಆದಶ್ಟು ಬೇಗ ಈ ಬಂದನದಿಂದ ತಪ್ಪಿಸಿಕೊಳ್ಳಲು ಮನಸ್ಸು ಹಾತೊರೆಯುತ್ತಿತ್ತು.

“ಏನ್ರಿ ಸಾವಿತ್ರಿ. ಹದಿಮೂರನೇ ಮಂಚದ ಮೇಲೆ ಯಾವ್ದೋ ಪೇಶಂಟಿದೆ?” ರಾತ್ರಿ ಪಾಳಿಯ ಇನ್ನೊಬ್ಬ ನರ್ಸು, ಸಾವಿತ್ರಿ ಕುಳಿತಿದ್ದ ಟೇಬಲ್ಲಿನ ಹತ್ತಿರ ಬಂದು ಕೇಳಿದಳು.

“ಅಯ್ಯೋ ಯಾಕ್ ಕೇಳ್ತೀರಾ?” ಮಾತು ಶುರುಮಾಡಿದಳು ಸಾವಿತ್ರಿ, ಮೂವತ್ತರ ಮುಗ್ದ ಹೆಂಗಸು. “ಮೂರು ತಿಂಗಳಿಂದ ಮೂರು ಜನ ಅದೇ ಬೆಡ್ ಮೇಲೆ ಸತ್ತಿದಾರೆ. ನಿನ್ನೆ ಅಶ್ಟೇ ಡೆಂಗ್ಯು ಬಂದು ಒಬ್ಬ ಹೆಂಗಸು ಸತ್ತಳು. ಈ ಬೆಡ್ ಮೇಲೆ ಯಾರನ್ನೂ ಹಾಕಬೇಡಿ ಅಂತ ಸುದಾ ಮೇಡಮ್ ಗೆ ಎಶ್ಟು ಹೇಳಿದ್ವಿ. ಇಂತ ಮೂಡನಂಬಿಕೆ ಇರಬಾರ್ದು, ನೀವೆಲ್ಲಾ ಓದಿರೋರಾ? ಅಂತ ನಮ್ಮನ್ನೇ ದಬಾಯಿಸಿ ಬಿಟ್ರು ಕಣ್ರಿ. ಏನ್ ಮಾಡೋದ್ ಹೇಳಿ” ಅಂದಳು.

“ಈಗ ಇರೋ ಪೇಶಂಟ್ ಗೆ ಏನಾಗಿದೆ?”

“ಸೂಯಿಸಾಯ್ಡ್ ಕೇಸ್ ಅಂತೆ” ಮುಂದುವರೆಸಿದಳು ಸಾವಿತ್ರಿ. ಗುಟ್ಟು ಹೇಳುವಂತೆ ದನಿ ತಗ್ಗಿಸಿ, “ಗಂಡನ್ನಾ ಕೊಂದು, ಶಿಕ್ಷೆಯಾಗಿ, ಈಗ ಜಯ್ಲಲ್ಲಿರೊಳು. ಕಯ್ ಕುಯ್ದಕೊಂಡು ಇಲ್ಲಿ ಬಂದಿದ್ದಾಳೆ. ಮತ್ತೆ ಸೂಯಿಸಾಯ್ಡ್ ಮಾಡ್ಕೊಳ್ಳೊ ಪ್ರಯತ್ನ ಮಾಡಿದ್ರೆ ಏನ್ ಗತಿ?”

“ಓಹ್! ಹೌದಾ? ಗಂಡನ್ನೇ ಕೊಲ್ಲೊ ಅಂತಾದ್ದು ಅವ್ನೇನ್ ಮಾಡಿದ್ದಾ?”

“ಇವಳನ್ನಾ ರೇಪ್ ಮಾಡಿ, ಆ ವಿಶಯ ಎಲ್ರೂಗೂ ಹೇಳ್ತೀನಿ ಅಂತ ಬ್ಲಾಕಮೇಲ್ ಮಾಡಿ ಮದುವೆ ಆಗಿದ್ನಂತೆ. ಮದುವೆ ಆಗಿ ಮಾರನೇ ದಿನಾನೇ ಇವ್ಳಗೆ ತಲೆ ಕೆಟ್ಟು, ಅವ್ನನ್ನಾ ಚಾಕು ನಲ್ಲಿ ಚುಚ್ಚಿ ಸಾಯಿಸಿದ್ಳಂತೆ”

“ಹೌದೇನ್ರಿ. ಗಟ್ಟಿ ಹೆಣ್ಣು ಬಿಡಿ”, ತೆರೆದ ಬಾಯಿ ತೆರೆದೇ ಇತ್ತು.

“ಅಶ್ಟೇ ಅಲ್ಲಾ. ಅವನ್ ಕಣ್ಣು, ಕಿವಿ ಎಲ್ಲಾ ಚಾಕು ನಿಂದ ಕೊಯ್ದಿದ್ಳಂತೆ”

“ಅಂದ್ರೆ ಹುಚ್ಚಿನಾ? ನಿಮಗ್ ಹೇಗ್ ಗೊತ್ತಾಯ್ತು?”

“ನಿನ್ನೆ ಬೆಳಗ್ಗೆ ಆ ಲೇಡಿ ಪೊಲೀಸ್ ಬಂದಿದ್ಳಲ್ಲಾ, ಅವ್ಳೇ ಹೇಳಿದ್ದು”

ಇವರ ಮಾತಿನ ನಡುವೆ ಮತ್ತೆ ಅರೆಗಣ್ಣಲ್ಲಿ ಗಡಿಯಾರ ನೋಡಿಕೊಂಡಳು ಆ ಪೇಶಂಟು. ಹನ್ನೊಂದು ಇಪ್ಪತ್ತು. ಅವಳ ಎದೆಬಡಿತ ಹೆಚ್ಚಾಗುತ್ತಿತ್ತು. ಬಿಡುಗಡೆಯ ಕನಸು ಒಂದುಕಡೆಯಾದರೆ, ತಪ್ಪಿಸಿಕೊಳ್ಳಲು ಹೋಗಿ ಸಿಕ್ಕಿಹಾಕಿಕೊಂಡರೆ ಹೇಗೆ ಎಂಬ ಬಯ ಇನ್ನೊಂದು ಕಡೆ. ಅಶ್ಟರಲ್ಲಿ ಮಹಿಳಾ ಪೇದೆಯೊಬ್ಬಳು ವಾರ್ಡಿನ ಒಳಗೆ ಬಂದಳು. ಅವಳು ಬಂದದ್ದು ಪೇಶಂಟಿಗೆ ಗೊತ್ತಾಗಿ, ತಕ್ಶಣ ಕಣ್ಣು ಮುಚ್ಚಿ ಮಲಗಿರುವ ನಾಟಕವಾಡಿದಳು. ಪೇದೆ ಇವಳ ಹತ್ತಿರ ಬಂದು ಎಲ್ಲ ಸರಿಯಾಗಿದೆ ಎಂದು ಕಾತ್ರಿ ಮಾಡಿಕೊಂಡು ವಾರ್ಡಿನ ಬಾಗಿಲ ಹತ್ತಿರ ಕುರ್ಚಿಯಲ್ಲಿ ಕುಂತಳು. ಪೇದೆಯ ಬರುವಿಕೆ ಊಹಿಸದಿದ್ದ ಪೇಶಂಟಿಗೆ ದಿಗಿಲಾಯಿತು. ಈಗ ತಪ್ಪಿಸಿಕೊಳ್ಳುವುದು ಅಶ್ಟು ಸುಲಬದ ಮಾತಾಗಿರಲಿಲ್ಲ. ಏನು ಮಾಡುವುದು? ಇನ್ನೊಂದು ಸಮಯಕ್ಕಾಗಿ ಕಾಯ್ದು ನೋಡುವುದೇ, ಇಲ್ಲಾ ಇವತ್ತೇ ತಪ್ಪಿಸಿಕೊಂಡು ಹೋಗುವುದೇ ಎಂಬ ಇಬ್ಬಗೆಯ ವಿಚಾರದಲ್ಲಿ ಮುಳುಗಿದಳು. ತನ್ನದಲ್ಲದ ತಪ್ಪಿಗೆ ಬಲಿಯಾಗಿ ಕಯ್ಯಲಿರುವ ಜೀವನ ಕಳೆದುಕೊಳ್ಳಬೇಕೆ? ಅವನ ಜೊತೆ ಬಾಳುವುದೂ ಒಂದೇ ಸಾಯುವುದೂ ಒಂದೇಯಾಗಿತ್ತು. ಯಾಕಾದರೂ ಅವನ ತಂತ್ರಕ್ಕೆ ಮಣಿದು ಮದುವೆಯಾದೆನೋ ಎನಿಸಿತು. ಅವನು ಅವಳನ್ನು ಬದುಕಿಸಿಯೇ ಕೊಂದಿದ್ದ. ಅವನನ್ನು ಕೊಂದಿದ್ದರಲ್ಲಿ ಯಾವ ತಪ್ಪೂ ಕಾಣಲಿಲ್ಲ ಅವಳಿಗೆ. ಈಗ ಸಮಾಜದ ಕಟ್ಟುಪಾಡಿಗೆ ಬಿದ್ದು ಬದುಕನ್ನು ಬಲಿಕೊಡಲು ಅವಳು ಸಿದ್ದವಿರಲಿಲ್ಲ. ಈ ಅವಕಾಶ ಬಿಟ್ಟರೆ ಮತ್ತೆ ಸಿಗುವುದಿಲ್ಲ ಎನಿಸಿತು. ಅದಕ್ಕಿಂತ ಹೆಚ್ಚಾಗಿ ಬಿಡುಗಡೆಯ ಕನಸು ಅವಳ ಕಣ್ಣ ಮುಂದೆ ಕುಣಿಯುತ್ತಿತ್ತು. ಕಾಯಲು ಅವಳಿಗೆ ತಾಳ್ಮೆಯಿರಲಿಲ್ಲ. ಹಿಂದೆ ಸರಿಯದಿರಲು ತೀರ್ಮಾನಿಸಿದಳು.

ಗಂಟೆ ಇನ್ನೇನು ಹನ್ನೆರಡಾಗುವ ಹೊತ್ತಿಗೆ ಎತ್ತರದಿಂದ ದುಮುಕುವ ಜೋಗದಂತೆ ಮಳೆ ಬಿರುಸಿನಲ್ಲಿ ಹುಯ್ಯಲು ಮೊದಲುಮಾಡಿತು. ಅಂದುಕೊಂಡ ಸಮಯ ಬಂದಾಯಿತೆಂದು ಪೇಶಂಟು ಎದ್ದು ಕೂತಳು. ಬುಜದ ತುಂಬಾ ಕೂದಲು ಹರಡಿ ತಲೆ ಕೆಳಗೆ ಮಾಡಿದ್ದಳು. ಚೂರು ಪಾರು ಇದ್ದ ಬೆಳಕಿನಲ್ಲಿ ಅವಳ ಮುಕ ಸರಿಯಾಗಿ ಕಾಣುತ್ತಿರಲಿಲ್ಲ. ಅವಳು ಕೂತಿದ್ದ ಆಕಾರ ನೋಡಿ ಸಾವಿತ್ರಿಯ ಎದೆ ಬಡಿತ ನಿಂತೇ ಹೋದಂತಾಗಿತ್ತು. ಪೇದೆ ತನ್ನೆಲ್ಲ ದರ‍್ಯ ಒಟ್ಟುಮಾಡಿ ಅವಳೆಡೆಗೆ ನಡೆದಳು. ಇನ್ನೇನು ಮಂಚದ ಹತ್ತಿರ ಬಂದಾಗ, ಆ ಪೇಶಂಟು, ಆಪರೇಶನ್ ಮಾಡುವಾಗ ದೇಹ ಕುಯ್ಯಲು ಬಳಸುವ ಸ್ಕಾಲಪೆಲ್ ಹಿಡಿದ ಬಲಗಯ್ಯನ್ನು ಎತ್ತಿದಳು. ಅದನ್ನು ನೋಡಿದ ಪೇದೆ ತಕ್ಶಣ ತುಸು ಹಿಂದೆ ಸರಿದಳು. ಪೇಶಂಟು ತಡಮಾಡದೆ, ಕಯ್ಯಲ್ಲಿದ್ದ ಸ್ಕಾಲಪೆಲ್ ಜೋರಾಗಿ ಬೀಸುತ್ತ, ಪೇದೆ ತನ್ನ ಹತ್ತಿರ ಬರದಂತೆ ತಡೆದು, ಎದ್ದು ಬಾಗಿಲ ಕಡೆ ನಡೆದಳು. ಅವಳ ಒಂದು ಕಣ್ಣು ಪೇದೆಯ ಮೇಲೆಯೇ ಇತ್ತು. ಅವಳು ಇನ್ನೇನು ಬಾಗಿಲು ದಾಟಬೇಕೆನ್ನುವಾಗ ಪೇದೆ ಹಿಂದಿನಿಂದ ಹಿಡಿಯಲು ಮಿಂಚಿನ ವೇಗದಲ್ಲಿ ನಡೆದಳು. ಇದನ್ನು ಅರಿತ ಆ ಪೇಶಂಟು ತಕ್ಶಣ ಹಿಂದೆ ತಿರುಗಿ ಸ್ಕಾಲಪೆಲ್ ಬೀಸಿದಳು. ಪೇದೆಯ ಕಯ್ಗೆ ಜೋರಾಗಿ ಏಟು ಬಿದ್ದು ಅವಳು ಹಿಂದೆ ಸರಿದಳು. ರಕ್ತ ದಳದಳನೆ ಹರಿಯಲು ಶುರುಮಾಡಿತು. ಇನ್ನು ಪೇದೆ ಅವಳನ್ನು ಹಿಡಿಯುವ ಮನಸ್ಸಿನಿಂದ ಹಿಂದೆ ಸರಿದಳು. ತನ್ನ ಮೊಬಾಯಿಲನ್ನು ಹೊರತೆಗೆದು ಕರೆ ಮಾಡಲು ಮುಂದಾದಳು. ಅವಳನ್ನು ನೋಡಿ ಸಾವಿತ್ರಿಗೂ ಎಚ್ಚರವಾದಂತಾಗಿ ತನ್ನ ಮೊಬಾಯಿಲು ತೆಗೆದು ಅದೇ ಗಾಬರಿಯಲ್ಲಿ ಸುದಾ ಮೇಡಂಗೆ ಕರೆ ಮಾಡಿ ವಿಶಯ ತಿಳಿಸಿದಳು.

ಮೊಬಾಯಿಲಿನಲ್ಲಿ ಮಾತಾಡುತ್ತಲೇ, ರಕ್ತ ಸೋರುತ್ತಿದ್ದ ಜಾಗವನ್ನು ಬಲವಾಗಿ ಒತ್ತಿ ಹಿಡಿದು, ಆ ಪೇಶಂಟನ್ನು ಹಿಂಬಾಲಿಸಿದಳು ಪೇದೆ. ತನ್ನ ಮೇಲಿನವರಿಗೆ ವಿಶಯ ತಿಳಿಸಿ ಕರೆ ಮುಗಿಸಿದಳು. ಪೇಶಂಟು ಇನ್ನೂ ಸ್ಕಾಲಪೆಲ್ ಬೀಸುತ್ತಲೇ, ಎದುರಿಗೆ ಬಂದವರನ್ನು ದೂರ ಸರಿಸುತ್ತ,

ಆಸ್ಪತ್ರೆಯ ಗೇಟಿನತ್ತ ಹೆಜ್ಜೆ ಹಾಕುತ್ತಿದ್ದಳು. ಸರ್ಕಾರಿ ಆಸ್ಪತ್ರೆಯ ಬಯಲು ದೊಡ್ಡದಾಗಿತ್ತು. ಕಟ್ಟಡದಿಂದ ಹೊರಬಂದ ಕೂಡಲೇ ಕತ್ತಲಿದ್ದ ಜಾಗ ನೋಡಿ ಕಣ್ಮರೆಯಾಗಿ ಹೋದಳು ಆ ಪೇಶಂಟು. ಪೇದೆ ಅವಳ ಹಿಂದೆ ಹಿಂದೆ ಓಡಿದರೂ ಅವಳು ಹೋದ ಕಡೆ ಯಾವುದೆಂದು ನಿಚ್ಚಳವಾಗಿ ತಿಳಿಯಲಿಲ್ಲ. ಗೇಟಿನ ಹೊರಬಂದು ದಾರಿಯ ಎರಡೂ ಬದಿಯಲ್ಲಿ ಹುಡುಕಿ ನೋಡಿದಳು. ಎಲ್ಲೂ ಕಾಣಿಸಲಿಲ್ಲ. ಜೋರು ಮಳೆ ಬೇರೆ. ಅವಳ ಕಯ್ಯಿಂದ ರಕ್ತ ಸೋರುವುದು ಇನ್ನೂ ನಿಂತಿರಲಿಲ್ಲ. ಪೇಶಂಟು ಆಸ್ಪತ್ರೆಯ ಹೊರಗೆ ಹೋದಳೋ, ಇನ್ನೂ ಒಳಗೇ ಇದ್ದಾಳೋ ಗೊತ್ತಾಗದೆ, ಹಾಗೇ ನಡೆದು ಮತ್ತೆ ಆಸ್ಪತ್ರೆಯ ಒಳಗೆ ಬಂದಳು.

ತುಸುವೇ ಸಮಯದಲ್ಲಿ ಗೇಟು ದಾಟಿ ಕಾರೊಂದು ಬಂದು, ಕಾರು ನಿಲುಗಡೆ ಜಾಗದತ್ತ ಹೊರಳಿತು. ಅದರೊಳಗಿದ್ದವರು ಡಾಕ್ಟರ್ ಸುದಾ ಮೇಡಂ. ಕಾರು ನಿಲ್ಲಿಸಿ, ಬಾಗಿಲು ತೆಗೆದು ಕೊಡೆ ಏರಿಸಿದರು. ಮಳೆ ಗಾಳಿಗೆ ಕೊಡೆಯೇ ಹಾರಿ ಹೋಗುವಂತಿತ್ತು. ಕಶ್ಟ ಪಟ್ಟು ಅದನ್ನು ಹಿಡಿಯುತ್ತ ಕಾರಿನಿಂದ ಕೆಳಗಿಳಿದರು. ಸುತ್ತಲೂ ಕಗ್ಗತ್ತಲು. ಬಾಗಿಲು ಹಾಕಿ ಮುನ್ನಡೆದರು. ನಾಲ್ಕು ಹೆಜ್ಜೆ ನಡೆಯುವಶ್ಟರಲ್ಲಿ, ದಪ್ ಎಂದು ಕಾರಿನ ಬಾಗಿಲು ಮುಚ್ಚಿಕೊಳ್ಳುವ ಶಬ್ದ ಬಂದಿತು. ಹಿಂತಿರುಗಿ ನೋಡಿದರು. ಯಾರೂ ಕಾಣಲಿಲ್ಲ. ಅವರ ಕಯ್-ಕಾಲು ನಡುಗುತ್ತಿದ್ದವು. ನಡುಗುತ್ತಲೇ ಕಯ್ಯಲ್ಲಿದ್ದ ರಿಮೋಟಿನಿಂದ ಕಾರನ್ನು ಲಾಕ್ ಮಾಡಿ ಬೆಳಕಿರುವ ಆಸ್ಪತ್ರೆಯ ಮುಂಬಾಗಿಲಿನತ್ತ ಓಡಿದರು.

ಬಯದಲ್ಲಿ ನಡುಗುತ್ತ, ತೊದಲುತ್ತ, ನಡೆದುದೆಲ್ಲವನ್ನೂ ಸುದಾ ಮೇಡಂ ಮುಂದೆ ಹೇಳಿಕೊಂಡಳು ನರ್ಸ್ ಸಾವಿತ್ರಿ. ಅಶ್ಟರಲ್ಲಿ ರಾತ್ರಿ ಪಾಳಿಯ ಇನ್ನೊಬ್ಬ ಡಾಕ್ಟರರೂ ಅಲ್ಲಿ ಬಂದಿದ್ದರು. ಪೇದೆಯ ಕಯ್ ಗಾಯಕ್ಕೆ ಪಟ್ಟಿ ಕಟ್ಟಿಯಾಗಿತ್ತು. ಸಾವಿತ್ರಿ ಕತೆ ಹೇಳಿ ಮುಗಿಸುತ್ತಿದ್ದಂತೆ, ಆಸ್ಪತ್ರೆಯ ಗೇಟಿನಲ್ಲಿ ಹಾಯ್ದು ಪೊಲೀಸ್ ಜೀಪೊಂದು ಬಂದು ನಿಂತಿತು. ಕೆಳಗಿಳಿದ ಎಸ್. ಆಯ್ ನೇರ ಮೊದಲ ಮಹಡಿಯಲ್ಲಿದ್ದ ಆ ವಾರ್ಡಿಗೆ ಬಂದರು. ಬಂದವರೇ, ಪೇದೆ ಹತ್ತಿರ ಹೋಗಿ,

“ಯಾವ್ ಕಡೆ ಹೋದ್ಳು?” ಎಂದು ಕೇಳಿದರು.

ಪೇದೆ ತಡವರಿಸುತ್ತಾ, ಮುಕ ಕೆಳಗೆ ಮಾಡಿ, “ಕತ್ಲಲ್ಲಿ ಗೊತ್ತಾಗ್ಲಿಲ್ಲ ಸರ್, ನಾನೂ ತುಂಬಾ ಹುಡುಕ್ದೆ” ಎಂದಳು.

“ಏನ್ ಹುಡುಕ್ದೆ ನಿನ್ ಪಿಂಡ” ಎಂದು ಎಸ್. ಆಯ್ ತಮ್ಮ ಕೋಪ ಹೊರಹಾಕಿದರು.

ಕೆಳಗಿದ್ದ ಇನ್ನಿಬ್ಬರು ಪೇದೆಗಳ ಜೊತೆ ವಾಕಿ-ಟಾಕಿಯಲ್ಲಿ ಮಾತಾಡಿ ಆಸ್ಪತ್ರೆಯಿಂದ ಯಾರೂ ಹೊರ ಹೋಗದ ಹಾಗೆ ನೋಡಿಕೊಳ್ಳಲು ಹೇಳಿದನು.
“ಎಶ್ಟೊತ್ತಾಯ್ತು ಹೋಗಿ?” ಎಂದು ಪೇದೆಗೆ ಕೇಳಿದನು.

ಪೇದೆ ಮತ್ತೆ ತಡವರಿಸುತ್ತಾ, “ಒಂದ್ ಹತ್-ಹದಿನಯ್ದ್ ನಿಮಿಶ ಆಗಿರಬೌದು ಸಾರ್” ಅಂದಳು.

ಎಸ್. ಆಯ್ ಗೆ ಇನ್ನಶ್ಟು ಸಿಟ್ಟು ಏರಿ, “ಹತ್ತಾ… ಹದಿನಯ್ದಾ ಸರಿಯಾಗಿ ಬೊಗಳೆ” ಎಂದನು.

ಪೇದೆ ಮುಕ ಕೆಳಗೆ ಹಾಕಿದಳು. “ಒಂದ್ ಹುಡುಗಿ ಕಾಯೊಕ್ಕಾಗಲ್ಲಾ ನಿನಗೆ?” ಅಂತ ಜೋರು ಮಾಡಿ ಅಲ್ಲಿಂದ ಹೊರಳಿ, ವಾರ್ಡಿನ ಹೊರಗೆ ಬಂದು ನಿಂತನು. ಮಳೆ ಇನ್ನೂ ಬೀಳುತ್ತಿತ್ತು. ಎದೆಯ ಮೇಲಿನ ಅಂಗಿ ಹಸಿಯಾಗಿತ್ತು. ಅಲ್ಲಿ ನಿಂತು ಆಸ್ಪತ್ರೆಯ ಸುತ್ತ ನೋಡಿದನು. ಏನೂ ಹೊಳೆಯಲಿಲ್ಲ. ಈ ಮಳೆಯಲ್ಲಿ ಇನ್ನಶ್ಟು ಪೇದೆಗಳನ್ನು ಕರಿಸಿ ಅವಳನ್ನು ಹುಡುಕುವುದು ಬಲು ತೊಡಕಿನ ಕೆಲಸವಾಗಿತ್ತು. ಅಂಗಿಯ ಜೇಬಿನಲ್ಲಿದ್ದ ಸಿಗರೇಟು ತೆಗೆದು ಹೊತ್ತಿಸಿದನು.

ಏನೋ ಹೊಳೆದಂತಾಗಿ, ಮತ್ತೆ ಒಳಗೆ ಬಂದು, ಪೇದೆಗೆ “ಅವ್ಳು ಗೇಟ್ ಹೊರಗ್ ಹೋಗಿದ್ದಾದ್ರು ನೋಡಿದ್ಯಾ?”

“ಇಲ್ಲಾ ಸರ್. ಅವ್ಳು ಬಾಗ್ಲಿಂದ ಹೊರಗೋಗಿದ್ದನ್ನ ನೋಡ್ದೆ. ಕತ್ಲಲ್ಲಿ ಎಲ್ಲೊ ಬೇರೆ ಕಡೆ ಓಡಿ ಹೋಗಿರಬೇಕು. ನಾನು ಗೇಟ್ ಕಡೆನೇ ನೋಡ್ತಾ ಇದ್ದೆ. ಯಾರೂ ಹೊರ ಹೋಗೋದು ಕಾಣ್ಸಿಲ್ಲಾ. ಆಮೇಲೆ ನಾನು ಗೇಟ್ ಹತ್ರ ಹೋಗಿ ನೋಡ್ದೆ. ಯಾರೂ ಇರ್ಲಿಲ್ಲ.”

ಅವಳ ಮಾತು ಮುಗಿಯುತ್ತಿದ್ದಂತೆ, ಸುದಾ ಮೇಡಂ ಮಾತಾಡಿದರು, “ನೋಡಿ ಸರ್. ಇದು ಆಸ್ಪತ್ರೆ. ಇಲ್ಲಿ ನೀವು ಸಿಗರೇಟ್ ಸೇದೋ ಹಾಗಿಲ್ಲ”.

ಅವರ ಮಾತು ಕೇಳಿ ಅತ್ತ ತಿರುಗಿದ ಎಸ್. ಆಯ್, ಒಂದೆರಡು ಕ್ಷಣ ದುರುಗುಟ್ಟಿ ನೋಡಿ, ಹೊರಗೆ ಹೋದರು. ಮುಂದೆ ಇನ್ನೆಂದೂ ಸಿಗರೇಟು ಸೇದುವುದಿಲ್ಲವೇನೋ ಎಂಬಂತೆ ಹೀರಿ ಹೀರಿ ಹೊಗೆ ಎಳೆದು, ಆಮೇಲೆ ಆ ತುಂಡನ್ನು ಎಸೆದು ಮತ್ತೆ ಒಳಗೆ ಬಂದನು. ಮಳೆಯಲ್ಲಿ ಅರೆ-ಬರೆ ನೆಂದು ಚೆಂದವಾಗಿ ಕಾಣುತ್ತಿದ್ದ ಮೂವತ್ತರ ಒಳಗಿನ ಸುದಾ ಮೇಡಂ ಕಡೆಗೆ ಬಂದು, "ನೀವು ಯಾರು?" ಎಂದು ನುಂಗಿ ಹಾಕುವಂತೆ ಕೇಳಿದನು.

ಅವನ ಬಾಯಿಂದ ಬರುತ್ತಿದ್ದ ಸಹಿಸಲಾಗದ ವಾಸನೆಯಿಂದ, ಕಯ್ಯನ್ನು ಮೂಗಿಗೆ ಅಡ್ಡ ಹಿಡಿದು, "ನಾನು ಈ ವಾರ್ಡಿನ ಡಾಕ್ಟರ್" ಅಂದರು ಸುದಾ.

ಅವರ ಪ್ರತಿಕ್ರಿಯೆ ನೋಡಿ, ನಾಚಿಕೆಯಾಗಿ ತುಸು ಹಿಂದೆ ಸರಿದ ಎಸ್. ಆಯ್. "ನಿಮ್ದೇನಾ ಡ್ಯುಟಿ ಇದ್ದದ್ದು?" ಎಂದು ಕೇಳಿದ.

"ಇಲ್ಲಾ. ಡ್ಯೂಟಿ ಇದ್ದದ್ದು ಇವರದು" ಎಂದು ಇನ್ನೊಬ್ಬ ಡಾಕ್ಟರ್ ಕಡೆ ತೋರಿಸಿದರು.

"ಮತ್ತೆ ನೀವೇನ್ ಇಶ್ಟೊತ್ತಲ್ಲಿ ಇಲ್ಲಿ?" ಅದೇ ಗಡಸು ದನಿ

"ಏನಾದ್ರು ಎಮರ್ಜೆನ್ಸಿ ಇದ್ರೆ ಕಾಲ್ ಮಾಡು ಅಂತ ನರ್ಸ್ ಗೆ ಹೇಳಿದ್ದೆ. ಅವಳು ಕಾಲ್ ಮಾಡಿ ಹೀಗೆಲ್ಲಾ ಆಗಿದೆ ಅಂದ ತಕ್ಶಣ, ತಡಕೊಳ್ಳೊಕಾಗ್ದೆ ಇಲ್ಲಿಗ್ ಬಂದೆ".

"ಸರಿ" ಎಂದು ಹೊರಳಿದ್ದ ಎಸ್. ಆಯ್. ಮತ್ತೆ ಅವರ ಕಡೆ ತಿರುಗಿ, "ನಾವ್ ಬರೋಕಿಂತ ಮುಂಚೇನೆ ಅದೇಗ್ ಬಂದ್ರಿ?" ಎಂದನು.

"ನನ್ನ ಮನೆ ಇಲ್ಲೇ ಹತ್ರ ಇರೋದು, ಕ್ವಾರ್ಟರ್ಸ್ ನಲ್ಲಿ. ಕಾರಿನಲ್ಲಿ ಬಂದೆ"

"ಒಟ್ನಲ್ಲಿ ಪೊಲೀಸೋರೆ ಲೇಟಾಗಿ ಬರೋದು ಅನ್ನಿ" ಎಂದು ನಕ್ಕನು, ಅವರನ್ನು ನಗಿಸಲೆಂದು. ಸುದಾ ಅವರು ಯಾವ ಪ್ರತಿಕ್ರಿಯೆಯನ್ನೂ ಕೊಡಲಿಲ್ಲ. ಎಸ್. ಆಯ್. ಸುಮ್ಮನಾದ.

ವಾಕಿ-ಟಾಕಿಯಲ್ಲಿ ಮಾತಾಡುತ್ತ, ಪೇದೆಗಳಿಗೆ ಆಸ್ಪತ್ರೆಯ ಸುತ್ತ ಬ್ಯಾಟರಿ ಹಿಡಿದು ಹುಡುಕಲು ಹೇಳಿದನು. ಮಹಿಳಾ ಪೇದೆಯನ್ನು ಕರೆದುಕೊಂಡು ತಾನೂ ಕೆಳಗಿಳಿದು ಬಂದು ಕತ್ತಲಿದ್ದ ಜಾಗದಲ್ಲೆಲ್ಲಾ ಹುಡುಕಲು ಮೊದಲುಮಾಡಿದನು.

ಹದಿನಯ್ದು, ಇಪ್ಪತ್ತು ನಿಮಿಶ ಕಳೆದ ಮೇಲೆ, ಆ ವಾರ್ಡಿನ ಸುತ್ತ ಜನ ಜಮಾಯಿಸಲು ಶುರುಮಾಡಿದ್ದರು, ಕುತೂಹಲ ತಾಳಲಾರದೆ. ನಡೆದುದೆಲ್ಲ ಅದಾಗಲೆ ವಾರ್ಡಿನಿಂದ ವಾರ್ಡಿಗೆ ಹಬ್ಬಿಯಾಗಿತ್ತು. ಹದಿಮೂರನೇ ಮಂಚದ ಗುಣದ ಬಗ್ಗೆ ಸುದಾ ಮೇಡಂ ಅವರಿಗೆ ಸಾವಿತ್ರಿ ಪದೇ ಪದೇ ನೆನಪು ಮಾಡಿ ಕೊಡುತ್ತಿದ್ದಳು. ತನ್ನ ಮಾತು ಕೇಳದಿದ್ದರ ಪರಿಣಾಮ ಏನಾಯಿತು ನೋಡಿ ಎನ್ನುವಂತೆ ಮಾತಿನಲ್ಲೇ ಚುಚ್ಚುತ್ತಿದ್ದಳು. ಅವಳ ಮಾತು ಕೇಳಿ ಸಾಕಾಗಿ ಸುದಾ ಮೇಡಂ ಹೊರಡಲು ಅಣಿಯಾದರು. ಹೇಗೂ ಅಲ್ಲಿ ಅವರು ಯಾವ ಸಹಾಯವನ್ನೂ ಮಾಡುವ ಸ್ತಿತಿಯಲ್ಲಿರಲಿಲ್ಲ. ಕೆಳಗಿಳಿದು ಬಂದು ಕಾರು ನಿಲುಗಡೆಯತ್ತ ನಡೆದರು. ಮಳೆ ಇನ್ನೂ ಬೀಳುತ್ತಿತ್ತು. ಅರ್ದ ಹಾದಿಗೆ ಎದುರಾದದ್ದು ಎಸ್. ಆಯ್., ಕತ್ತಲನ್ನು ಸೀಳುವ ಬ್ಯಾಟರಿ ಹಿಡಿದುಕೊಂಡು.

"ಎಲ್ಲಿಗೆ ಹೊರಟ್ರೆ ಮೇಡಂ?" ಎಂದು ಕೇಳಿದ

"ಮನೆಗೆ. ಏನಾದ್ರು ಪ್ರಾಬ್ಲಮ್ಮಾ?"

"ಪ್ರಾಬ್ಲಮ್ಮ್ ಏನ್ ಇಲ್ಲಾ ಬಿಡಿ. ನೀವು ಹಾಯಾಗಿ ಮಲ್ಕೊಳ್ಳಿ. ನಮ್ ನಾಯಿ ಪಾಡು ಇದ್ದದ್ದೆ", ಎಂದನು.

ಸುದಾ ಅವರು ಕಾರಿನತ್ತ ನಡೆದರು. ಎಸ್ ಆಯ್ ಹಿಂದೆ ಹಿಂದೆ ನಡೆದ. ಕಾರಿನ ಬಳಿ ಬಂದು, ಲಾಕ್ ತೆಗೆದು ಕಾರು ಹತ್ತಿ, ಹೊರಡಬೇಕು ಎನ್ನುವಾಗ, ಹೊರಗಿದ್ದ ಎಸ್. ಆಯ್ ತಡೆದು,

"ಒಂದ್ ನಿಮಿಶ ಮೇಡಂ" ಎಂದು "ಲೋ ಶಂಕ್ರ" ಅಂತ ಜೋರಾಗಿ ಒಬ್ಬ ಪೇದೆಗೆ ಕೂಗಿದ. ಪೇದೆ ಕಯ್ಯಲ್ಲಿ ಬ್ಯಾಟರಿ ಹಿಡಿದು ಓಡಿ ಬಂದ.

“ಮೇಡಂ ಹೋಗ್ತಾರಂತೆ. ಒಂದ್ಸಾರಿ ಕಾರ್ ಚೆಕ್ ಮಾಡು” ಅಂದ.

“ಸರಿ ಸರ್” ಎಂದು ಪೇದೆ ಬೀಳುವ ಮಳೆಯಲ್ಲೇ ಕಾರಿನ ಡಿಕ್ಕಿ, ಬಾಗಿಲು, ಎಲ್ಲಾ ತೆಗೆದು ನೋಡಿದನು. ಅವನು ಸರಿಯಾಗಿದೆ ಎನ್ನುವ ಸೂಚನೆ ಕೊಟ್ಟಾಗ, ಎಸ್. ಆಯ್ ಹೊರಡಲು ಅನುವು ಮಾಡಿ ಕೊಟ್ಟನು.

ಸುದಾ ಅವರ ಕಯ್ ಕಾಲು ಇನ್ನೂ ನಡುಗುತ್ತಿದ್ದವು. ಕಾರನ್ನು ಶುರುಮಾಡಿ, ಮನೆಯತ್ತ ನಡೆಸಿದರು. ಇತ್ತ ಎಸ್. ಆಯ್. ಪೇಶಂಟನ್ನು ಹುಡುಕುವ ಕೆಲಸ ಮುಂದುವರೆಸಿದ.

ಮನೆಗೆ ಹೋಗುವ ದಾರಿಯಲ್ಲಿ, ಕತ್ತಲಿರುವೆಡೆ ಸುದಾ ಮೇಡಂ ಅವರ ಕಾರು ಗಕ್ಕನೆ ನಿಂತಿತು. ಒಂದೆರಡು ನಿಮಿಶದ ನಂತರ ಸುದಾ ಮೇಡಂ ಕೆಳಗಿಳಿದು ಸುತ್ತ ಮುತ್ತ ನೋಡಿದರು. ಯಾರು ಇಲ್ಲದ್ದನು ಕಾತ್ರಿಪಡಿಸಿಕೊಂಡು, ಕಾರಿನ ಡ್ರಾಯ್ವರ್ ಕಡೆಯ ಬಾಗಿಲು ತೆಗೆದು, “ಚಿತ್ರಾ” ಅಂತ ಕರೆದರು.

ಮೆಲ್ಲಗೆ ಹೊರಗಿಳಿದು ಬಂದಳು ಆ ಪೇಶಂಟು! ಅವಳ ಕಣ್ಣಿನಿಂದ ನೀರು ಇಳಿಯುವುದು ಆ ಜೋರು ಮಳೆಯಲ್ಲೂ ಕಾಣುತ್ತಿತ್ತು. ಗೆಳತಿಯನ್ನು ಜೋರಾಗಿ ಅಪ್ಪಿಕೊಂಡರು. ಚಿತ್ರಾಳ ಅಳುವು ಹೆಚ್ಚಾಯಿತು. ತುಸು ಹೊತ್ತಾದ ಮೇಲೆ ತಾವಿರುವ ಸ್ತಿತಿ ನೆನಪಾಗಿ, ಅಪ್ಪುಗೆ ಬಿಡಿಸಿಕೊಂಡರು. ಕಾರಿನಿಂದ ಪರ್ಸೊಂದನ್ನು ತೆಗೆದು, “ತೊಗೋ. ಹತ್ತು ಸಾವಿರ ಇದೆ. ಆದಶ್ಟು ಬೇಗ ಸ್ಟೇಶನ್ಗೆ ಹೋಗು. ಟ್ರೇನ್ ಹೊರಡೋದಕ್ಕೆ ಇನ್ನೂ ಎರಡು ಗಂಟೆ ಇದೆ. ಅದರಲ್ಲೇ ಸೌಮ್ಯಾ ಮನೆ ಅಡ್ರೆಸ್ಸೂ ಇದೆ.” ಅಂದರು ಸುದಾ ಮೇಡಂ.

ಚಿತ್ರಾ ಪರ್ಸ ತೆಗೆದುಕೊಂಡಳು. ಅವಳ ಅಳು ನಿಂತಿರಲಿಲ್ಲ. ಸಮಾದಾನ ಮಾಡಲು ಅದು ಸಮಯವೂ ಆಗಿರಲಿಲ್ಲ. “ನೋಡು, ನಾನ್ ಹೋಗ್ತೀನಿ. ತುಂಬಾ ಹೊತ್ತು ಇಲ್ಲೇ ನಿಂತಿದ್ರೆ ತೊಂದ್ರೆಯಾಗುತ್ತೆ. ಯಾವ್ದಾದ್ರು ಆಟೋ ಹಿಡ್ಕೊಂಡು ಹೋಗು” ಎಂದು ಸುದಾ ಮೇಡಂ ಅನಿವಾರ್ಯವಾಗಿ ಮನಸ್ಸು ಬಾರ ಮಾಡಿಕೊಂಡು ಅಲ್ಲಿಂದ ಹೊರಟರು.

ತುಸು ದೂರ ನಡೆದುಕೊಂಡು ಹೋದ ಚಿತ್ರಾ, ಸಿಕ್ಕ ಆಟೋ ಒಂದನ್ನು ಹತ್ತಿ ಸ್ಟೇಶನ್ ತಲುಪಿದಳು. ಜನರಲ್ ಬೋಗಿಯಲ್ಲೇ ಕುಳಿತು ಒಂದು ದಿನದ ನಂತರ ದೂರದ ಮುಂಬಯ್ ತಲುಪಿದಳು. ರೇಲಿನಿಂದ ಇಳಿದಾಗ ತುಂತುರು ಮಳೆಯ ನಡುವೆ ಮೂಡಣದಲ್ಲಿ ಸೂರ್ಯ ಮೂಡಿದ್ದ. ಮಳೆ-ಬೆಳಕಿನಲ್ಲಿ ಮಿಂದು, ಆಳವಾಗಿ ಉಸಿರೆಳೆದುಕೊಂಡು ಗೆಳತಿಯ ಮನೆಯತ್ತ ಹೆಜ್ಜೆಹಾಕುತ್ತ ಜನರ ಗುಂಪಿನಲ್ಲಿ ಮರೆಯಾದಳು.

***(ಚಿತ್ರ ಸೆಲೆ: galleryhip.com )***

# ನಂಬಿಕೆ



ಆ ಹಳ್ಳಿಯಲ್ಲಿ ಚಿರತೆಯನ್ನು ಕೊಲ್ಲುವ ಗುಂಡಿಗೆ ಇರುವವನೆಂದರೆ ಬಯ್ರುಪ್ಪನೊಬ್ಬನೇ. ಅವನಿಂದ ಮಾತ್ರ ಆ ಕೆಲಸ ಮಾಡಲು ಸಾದ್ಯ ಎಂದು ಊರಿನವರೆಲ್ಲಾ ಮಾತಾಡಿಕೊಳ್ಳುತ್ತಿದ್ದರು. ಈಗಾಗಲೇ ಸಾಕಶ್ಟು ಕುರಿ, ಹಸುಗಳನ್ನು ತಿಂದು, ಇಬ್ಬರ ಜೀವವನ್ನೂ ತೆಗೆದುಕೊಂಡಿದ್ದ ಚಿರತೆಯಿಂದ ಊರಿನ ಜನರೆಲ್ಲ ಬೆಚ್ಚಿದ್ದರು. ರಾತ್ರಿ ಹೊತ್ತಿನ ಮಾತು ಹಾಗಿರಲಿ, ಹಗಲಿನಲ್ಲೇ ಒಂಟಿಯಾಗಿ ಓಡಾಡಲು ಹೆದರಿಕೆಯಾಗುತ್ತಿತ್ತು. ಚಿರತೆಯನ್ನು ಕೊಲ್ಲದಿದ್ದರೆ ಊರನ್ನೇ ಬಿಟ್ಟು ಬಿಡಬೇಕಾದ ಪರಿಸ್ತಿತಿ.

ಆದರೆ ಚಿರತೆಯನ್ನು ಕೊಲ್ಲುವುದಾದರೂ ಹೇಗೆ? ಇಲ್ಲಿ ತನಕವೂ ಅದು ದಾಳಿ ಮಾಡಿದ್ದು ರಾತ್ರಿ ಹೊತ್ತು ಮಾತ್ರ. ಕುರಿ, ಮೇಕೆಗಳನ್ನು ಮುಂದಿಟ್ಟುಕೊಂಡು, ರಾತ್ರಿಯೆಲ್ಲಾ ಕಾದು, ಅದನ್ನು ಬಲೆಗೆ ಬೀಳಿಸುವ ಹಳ್ಳಿ ಜನರ ಪ್ರಯತ್ನ ಕಯ್ಗೂಡಿರಲಿಲ್ಲ. ಅವರು ಕಾದು ಕುಳಿತಾಗ ಅದು ಬರುವುದೇ ಇಲ್ಲ. ಯಾವತ್ತೂ ಅದು ಬಂದಿದ್ದು ಅನಿರೀಕ್ಶಿತವಾಗಿಯೇ. ಅದು ಪ್ರತಿದಿನ ಊರೊಳಗೆ ಬರದಿದ್ದರೂ, ಆ ಊರಿನ ಸುತ್ತಮುತ್ತಲಿನಲ್ಲೇ ಓಡಾಡುವ ಹೆಜ್ಜೆ ಗುರುತುಗಳು ದಿನ ಬೆಳಗಾದರೆ ಊರ ಹೊರಗೆ ಕಾಣಿಸುತ್ತಿದ್ದವು. ಈಗ ಇರುವ ಒಂದೇ ದಾರಿಯೆಂದರೆ ಅದನ್ನು ಹುಡುಕಿಕೊಂಡು ಹೋಗಿ ಕೊಲ್ಲುವುದು. ಹೋಗುವವರಾರು?

ಒಡೆಯರ ಆಳ್ವಿಕೆಯಲ್ಲಾಗಿದ್ದರೆ ಅವರಿಗೆ ಬೇಡಿ, ಸಯ್ನಿಕರಿಂದಲೇ ಈ ಕೆಲಸ ಮಾಡಿಸಬಹುದಿತ್ತು. ಇತ್ತೀಚೆಗೆ ಊರಿಗೆ ಬಂದಿರುವ ಪೊಲೀಸ್ ಆಪೀಸರ್ ಗಳು ಕೋವಿ ಹಿಡಿದು ಕಾಡು ನುಗ್ಗಿ, ತಾವೇ ಗಾಯ ಮಾಡಿಕೊಂಡು ಬಂದಿದ್ದರು. ಚಿರತೆ ಮಾತ್ರ ಸತ್ತಿರಲಿಲ್ಲ. ಸ್ವಲ್ಪ ದಿನದಲ್ಲೇ ಹೆಚ್ಚಿನ ಪೊಲೀಸಿನವರನ್ನು ಕರೆಸಿ ಚಿರತೆಯನ್ನು ಕೊಲ್ಲಿಸುತ್ತೇವೆಂದು ಮಾತು ಕೊಟ್ಟಿದ್ದರು. ಆ ಹೆಚ್ಚಿನ ಪೊಲೀಸಿನವರು ಬಂದು ಚಿರತೆಯನ್ನು ಕೊಲ್ಲುವಶ್ಟರಲ್ಲಿ ಅದೆಶ್ಟು ಜನ, ಪ್ರಾಣಿಗಳು ಬಲಿಯಾಗುತ್ತವೆಯೋ ಎನ್ನುವ ಯೋಚನೆ ಊರಿನವರಿಗೆ. ಬಯ್ರುಪ್ಪನೊಬ್ಬನೇ ಚಿರತೆಯನ್ನು ಕೊಲ್ಲಬಹುದೆಂಬ ಗುಸು ಗುಸು ಮಾತು ದಿನಕಳೆದಂತೆ ಬಲಪಡೆದು, ಕೊನೆಗೆ ಅವನೇ ಈ ಕೆಲಸ ಮಾಡಬೇಕೆಂದು ಊರಿನವರು ತಮ್ಮ ತಮ್ಮಲ್ಲೇ ತೀರ್ಮಾನ ಮಾಡಿಕೊಂಡರು. ಗೌಡರ ಕಿವಿಗೂ ಈ ಮಾತು ಬಿದ್ದು ಅವರಿಗೂ ಅದೇ ಸರಿಯೆನಿಸಿತು. ಸರಿ, ಗೌಡರು ಊರ ಹಿರಿಯರನ್ನು ಕರೆದುಕೊಂಡು ಬಯ್ರುಪ್ಪನ ಬಳಿ ನೆರವು ಕೇಳಲು ಹೋಗುವುದಾಗಿ ತೀರ್ಮಾನಿಸಿದರು.

ಬಯ್ರಪ್ಪನೆಂದರೆ ಸಾಮಾನ್ಯನಲ್ಲ. ಹಳೆಯ ಕುಸ್ತಿ ಪಟು. ಹಿರಿದಾದ ಆಳು. ಆರಡಿ ಎತ್ತರ, ಅದಕ್ಕೆ ತಕ್ಕ ಮಯ್ಕಟ್ಟು. ಅಗಲವಾದ ಕಪ್ಪು ಮುಕದಲ್ಲಿ ಅಗಲವಾದ ಹಣೆ. ದಪ್ಪ ಮೂಗು, ಮೂಗಿನ ಕೆಳಗೆ ಮೇಲ್ದುಟಿ ಕಾಣದಂತೆ ತುಂಬಿದ ಮೀಸೆ. ಅವನ ಬಿಗುವಿನ ಮುಕ, ನಡೆ ನೋಡಿದರೆ ಯಾವ ಕುಸ್ತಿ ಪಯ್ಲ್ವಾನನಾದರೂ ನಾಚಬೇಕು. ಅವನ ತೋಳುಗಳನ್ನು ನೋಡಿದರೆ ಒಂದೇ ಕಯ್ಯಿಂದಲೇ ಯಾರನ್ನಾದರೂ ಎತ್ತಿ ಬೀಳಿಸಬಹುದೆಂದು ಅನಿಸುತ್ತಿತ್ತು. ಸೊಂಟಕ್ಕೆ ಚರ‍್ಮದ ಪಟ್ಟಿ ಕಟ್ಟಿ, ಚರ‍್ಮದ ಹೊದಿಕೆಯಿರುವ ಚಾಕುವೊಂದನ್ನು ಅದರಲ್ಲಿ ಯಾವಾಗಲೂ ಸಿಕ್ಕಿಸಿರುತ್ತಿದ್ದನು.

ಅವನ ಮಾತು, ನಡತೆ ಒರಟೆನಿಸಿದರೂ ಯಾವತ್ತೂ ಯಾರೊಂದಿಗೂ ಜಗಳವಾಡಿದ ಉದಾಹರಣೆಯಿರಲಿಲ್ಲ. ಹಾಗೆಯೇ ಅವನನ್ನು ಕೆಣಕುವ ಸಾಹಸವನ್ನೂ ಯಾರು ಮಾಡಿರಲಿಲ್ಲ. ತನ್ನ ಪಾಡಿಗೆ ತಾನು ತೋಟ ನೋಡಿಕೊಂಡು ಇರುತ್ತಿದ್ದನು. ಈ ಊರಿಗೆ ಬಂದ ಮೇಲೆ ಕುಸ್ತಿ ಆಡುವುದನ್ನೂ ಬಿಟ್ಟಿದ್ದನು. ನಲವತ್ತು ದಾಟಿದ್ದರೂ ಮದುವೆಯಾಗಿರಲಿಲ್ಲ. ಬ್ರಮ್ಮಚಾರಿಯಾಗಿರುವುದರಿಂದಲೇ ಅವನಿಗೆ ಹನುಮನಶ್ಟು ಶಕ್ತಿಯೆಂದು ಜನ ಮಾತಾಡಿಕೊಳ್ಳುತ್ತಿದ್ದರು. ಅವನ ಸಾಹಸ ಹೇಳುವ ಬಗೆ ಬಗೆಯ ಕತೆಗಳು ಹುಟ್ಟಿಕೊಂಡಿದ್ದವು. ಆ ಕತೆಗಳ ಬಗ್ಗೆ ಕೇಳಿದಾಗ ಆತ ಗತ್ತಿನಿಂದಲೇ "ಹಾಗೆಲ್ಲ ಏನ್ ಇಲ್ಲಾ" ಎಂದು ತೆಗೆದು ಹಾಕುತ್ತಿದ್ದನು.

ಅಂದು ಗೌಡರು, ಸಂಜೆಯ ಹೊತ್ತಿನಲ್ಲಿ ಇಬ್ಬರು ಹಿರಿಯರನ್ನು ಕರೆದುಕೊಂಡು ಬಯ್ರಪ್ಪನ ತೋಟದ ಮನೆಗೆ ಬಂದರು. ಅವನ ಚಿಕ್ಕಪ್ಪ ಕಟ್ಟಿಸಿದ್ದ ಮನೆ. ಮಕ್ಕಳಿಲ್ಲದ ಅವನ ಚಿಕ್ಕಪ್ಪ ಸತ್ತು ಹೋದ ಮೇಲೆ ಬೇರೆ ಊರಿನಲ್ಲಿದ್ದ ಬಯ್ರಪ್ಪ ಇಲ್ಲಿ ಬಂದು ತಾತನ ಆಸ್ತಿಯಾದ ಇಪ್ಪತ್ತು ಎಕರೆ ತೋಟ ನೋಡಿಕೊಂಡಿದ್ದನು. ಮನೆಯ ಜಗುಲಿ ಮೇಲೆ ಹೊಗೆಸೊಪ್ಪು ಜಗಿಯುತ್ತ ಯಾವುದೋ ಲೆಕ್ಕ ನೋಡುತ್ತ ಕುಳಿತಿದ್ದನು ಬಯ್ರಪ್ಪ. ಅವನ ಪಕ್ಕದಲ್ಲಿ ಅವನ ಮನೆಯ ಆಳು ನಾಗಪ್ಪ ಇದ್ದನು. ದೂರದಿಂದಲೇ ಗೌಡರು ಬರುವುದನ್ನು ನೋಡಿ, ಹೊಗೆಸೊಪ್ಪು ಉಗುಳಿ, ಅವರನ್ನು ಬರಮಾಡಿಕೊಳ್ಳಲು ಕೆಳಗಿಳಿದು ಬಂದನು. ಒಬ್ಬರಿಗೊಬ್ಬರು ನಮಸ್ಕಾರ ಹೇಳಿ, ಮನೆಯ ಜಗುಲಿಯ ಮೇಲೇಯೆ ಕುಂತರು. ಬಂದವರಿಗೆ ಕುಡಿಯಲು ಎಳನೀರು ಕೊಚ್ಚಿ ತರಲು ನಾಗಪ್ಪ ಹೋದನು. ಬಯ್ರಪ್ಪನ ಸ್ತಿತಿಗತಿ ವಿಚಾರಿಸಿದ ಮೇಲೆ, ಗೌಡರು ಬಂದ ವಿಶಯ ಹೇಳಲು ಮೊದಲುಮಾಡಿದರು.

ಚಿರತೆಯ ಕಾಟದ ವಿವರಗಳನ್ನು ಮುನ್ನುಡಿಯಾಗಿ ಹೇಳಿ, ನಂತರ ಊರಿನ ಜನರಿಗೆ ಅದರಿಂದ ಉಂಟಾಗಿರುವ ಹೆದರಿಕೆಯ ಬಗ್ಗೆ ಹೇಳಿದರು. ಈ ಎಲ್ಲ ವಿಶಯವನ್ನೂ ತಿಳಿದಿದ್ದ ಬಯ್ರಪ್ಪ ಗೌಡರ ಮಾತಿಗೆ ಹೌದು ಎನ್ನುವ ರೀತಿಯಲ್ಲಿ ತಲೆಯಾಡಿಸುತ್ತಿದ್ದನು. ಗೌಡರು ಚಿರತೆಯ ಉಪಟಳಕ್ಕೆ ಕೊನೆಯಾಗಲೇಬೇಕೆನ್ನುವುದನ್ನು ಬಯ್ರಪ್ಪನಿಗೆ ಮನದಟ್ಟು ಮಾಡಿರುವುನ್ನು ನಿಕ್ಕಿ ಮಾಡಿಕೊಂಡು, ತಮ್ಮ ಮನದಲ್ಲಿದ್ದ ಮಾತು ಹೊರತೆಗೆದರು.

"ಆ ಚಿರತೆನಾ ಕೊಲ್ದೆ ದಾರಿಯಿಲ್ಲ ನೋಡು ಬಯ್ರಪ್ಪ. ಏನಂತೀಯಾ?"

"ಹೌದು ಗೌಡ್ರೆ. ನೀವ್ ಹೇಳೋದ್ ಸರಿ. ಅದನ್ನ ಹಂಗೇ ಬಿಟ್ರೆ ಇನ್ನು ಎಶ್ಟ್ ಜೀವ ಹೋಗ್ತಾವೋ"

"ಅಲ್ವಾ ಮತ್ತೆ? ಅದಕ್ಕೆ ನಿನ್ ಹತ್ರ ಬಂದಿರೋದು ನೋಡು" ಅಂದರು ಗೌಡ್ರು. ಅಲ್ಲೀ ತನಕ ಗೌಡರ ಯಾವ ಮಾತಿಗೂ ಯೋಚಿಸದೆ ಸುಮ್ಮನೆ ತಲೆಯಾಡಿಸುತ್ತಿದ್ದ ಬಯ್ರಪ್ಪ, ಈ ಮಾತು ಕೇಳಿ ಚುರುಕಾದನು. ನನ್ ಹತ್ರ ಯಾಕ್ ಬಂದ್ರು, ನಾನೇನ್ ಮಾಡಬಲ್ಲೆ ಅನ್ನೋ ಕೇಳ್ವಿಗಳು ತಟ್ಟನೆ ಅವನ ಮನಸ್ಸಿನಲ್ಲಿ ಬಂದು ಹೋದವು. ಗೌಡರನ್ನೇ ದಿಟ್ಟಿಸಿ ನೋಡುತ್ತಿದ್ದ, "ಮುಂದೆ ಹೇಳಿ" ಎನ್ನುವ ರೀತಿಯಲ್ಲಿ. ಗೌಡರು ಅವನ ಮುಕದ ಬಾವನೆಗಳನ್ನು ತಿಳಿದು, ಮಾತು ಮುಂದುವರೆಸಿದರು.

"ನಮ್ ಸೀಮೆನಾಗಿ ಆ ಚಿರತೆ ಕೊಲ್ಲೋ ಗುಂಡಿಗೆ ನಿನಗ್ ಬಿಟ್ರೆ ಇನ್ಯಾರಗಿದೆ ಹೇಳು?" ಎಂದು ಅವನ ಉತ್ತರಕ್ಕಾಗಿ ಮಾತನ್ನು ಅಲ್ಲಿಗೇ ನಿಲ್ಲಿಸಿದರು.

ಗೌಡರ ಮಾತಿನ ಹುರುಳು ಬಯ್ರಪ್ಪನಿಗೆ ತಕ್ಶಣ ಗೊತ್ತಾಯಿತು. ಏರು ದನಿಯಲ್ಲಿ ಉದ್ಗರಿಸಿದನು, "ನಾನಾ?!" ಎಂದು. ಕನಸು ಮನಸಿನಲ್ಲಿಯೂ ಅವನು ಈ ಮಾತನ್ನು ನಿರೀಕ್ಶಿಸಿರಲಿಲ್ಲ. ಬೆರಗು, ಗೊಂದಲ, ಗಾಬರಿ ಎಲ್ಲ ಒಟ್ಟಿಗೆ ಆಗಿ ಅವನ ಎದೆಬಡಿತ ಹೆಚ್ಚಾಯಿತು. ಒಪ್ಪಿಗೆ ಇಲ್ಲದ ಅವನ ದನಿ ಕಂಡ ಗೌಡರು, ಅವನನ್ನು ಒಪ್ಪಿಸಲು ಮುಂದಾದರು. ಈ ಕೆಲಸವನ್ನು ಅವನೊಬ್ಬನೇ ಮಾಡಬಲ್ಲನೆಂದು ಅವರಿಗೆ ಮನವರಿಕೆಯಾಗಿತ್ತು.

"ಹೌದು ಬಯ್ರಪ್ಪಣ್ಣ. ನೀನೇ ಮಾಡಬೇಕು. ಹಳ್ಳಿ ಜನ ಎಲ್ಲಾ ನಿನ್ನೇ ನಂಬಕಂಡವ್ರೆ. ಬೇಕಿದ್ರೆ ಈರಯ್ಯನೋರ್ನೆ ಕೇಳು" ಎಂದು ತಮ್ಮ ಜೊತೆ ಬಂದಿದ್ದ ಹಿರಿ ತಲೆಯೆಡೆಗೆ ನೋಡಿದರು.

"ಹೌದು ಬಯ್ರಪ್ಪ. ಈಗೆ ನೀನೊಬ್ನೇ ನಮಗ್ ದಿಕ್ಕು" ಎಂದರು ಈರಯ್ಯನವರು.

ಬಯ್ರಪ್ಪ ತಲೆ ಕೆಳಗಾಕಿ ಯೋಚಿಸುತ್ತಾ ಕುಳಿತ. ಎಷ್ಟೊತ್ತಾದರೂ ಮಾತಾಡಲಿಲ್ಲ. ಗೌಡರೇ ಅಲ್ಲಿ ತುಂಬಿದ್ದ ಮೌನ ಮುರಿದರು,

"ಬಯ್ರಪ್ಪ, ನನ್ ಕೈಲಿ ಆಗುತ್ತಾ ಅಂತ ಅನ್ಕೋಬೇಡಾ. ನಿನ್ ಶಕ್ತಿನಾಗೆ ನಂಗ್ ಪೂರ್ತಿ ನಂಬಿಕೆ ಅದೆ. ನೀನ್ ಈ ಕೆಲ್ಸ್ ಮಾಡೇ ಮಾಡ್ತೀಯಾ. ನಿನೆಗಿರೋ ಗುಂಡಿಗೆ ಮುಂದೆ ಆ ಚಿರತೆ ಯಾವ್ ಮಹಾ ಬಿಡು." ಎಂದು ಅವನನ್ನು ಹುರಿದುಂಬಿಸುವ ಮಾತನಾಡಿದರು.

"ಅದು ಹಂಗಲ್ಲಾ ಗೌಡ್ರೆ" ಎಂದು ಮಾತನ್ನು ಅರ್ಧಕ್ಕೇ ನಿಲ್ಲಿಸಿದ ಬಯ್ರಪ್ಪ.

ಅಷ್ಟರಲ್ಲಿ ಗೌಡರು ಮುಂದೆ ಬಂದು, ಅವನ ಕಯ್ ಹಿಡಿದು ಬೇಡಿಕೊಂಡರು, "ಬಯ್ರಪ್ಪ. ನೀನೇ ದಿಕ್ಕು ಅಂತಾ ಬಂದಿದೀವಿ. ನೀನು ಇಲ್ಲಾ ಅಂದ್ರೆ ನಮ್ಗೆ ಊರು ಬಿಡೊದೊಂದೆ ದಾರಿ".

ಗೌಡರ ಮಾತಿನಿಂದ ಬಯ್ರಪ್ಪನಿಗೆ ಕಟ್ಟಿಹಾಕಿದಂತಾಯಿತು. ಆದರೂ ತಕ್ಶಣ ಒಪ್ಪಿಕೊಳ್ಳಲು ಅವನ ಮನಸ್ಸು ಹಿಂಜರಿಯಿತು. "ಗೌಡ್ರೆ, ನಾನ್ ಒಂದ್ ಗಳಿಗೆ ಯೋಚ್ನೆ ಮಾಡಿ ನಾಳೆ ತಿಳಿಸ್ಲಾ?"

ಈಗ ಗೌಡರಿಗೂ ಅವನ ಮಾತಿಗೆ ಇಲ್ಲ ಎನ್ನಲು ಆಗಲಿಲ್ಲ. "ಸರಿ ಬಯ್ರಪ್ಪ. ನಾವು ನಾಳೆ ಸಂಜೆ ಬರ್ತೀವಿ. ನೀನ್ ಒಪ್ಕೊಂಡೇ ಒಪ್ಕೊತೀಯಾ ಅಂತ ನಂಗ್ ನಂಬಿಕೆ ಅದೆ" ಎಂದರು.

ಆ ರಾತ್ರಿ ಬಯ್ರಪ್ಪ ಸರಿಯಾಗಿ ನಿದ್ದೆ ಮಾಡಲಿಲ್ಲ. ಬೆಳಗು ಹರಿಯುವ ಮುಂಚೆಯೇ ಎದ್ದು ಕೂತಿದ್ದ. ಚಿಂತೆ ಅವನನ್ನು ಕಾಡುತಿತ್ತು. ಬೆಳಗು ಮೂಡುವ ಹೊತ್ತಿಗೆ ಮನೆ ಗುಡಿಸಲು ಬಂದ ಆಳು ನಾಗಪ್ಪ, ಆಗಲೇ ಎದ್ದು ಕುಂತಿದ್ದ ತನ್ನ ಸ್ವಾಮಿಯನ್ನು ನೋಡಿ ಬೆರಗಾದನು. ತನ್ನ ಸ್ವಾಮಿ ಅಶ್ಟು ಬೇಗ ಎದ್ದದ್ದು ಅವನಿಗೆ ನೆನಪಿರಲಿಲ್ಲ.

"ಯಾಕ್ ಸಾಮ್ಯಾರೆ, ಇಶ್ಟು ಲಗು ಎದ್ದೀರಿ?" ಎಂದ.

ಬಯ್ರಪ್ಪನಿಗೆ ನಾಗಪ್ಪ ಇಪ್ಪತ್ತು ವರುಶಗಳಿಂದ ಪರಿಚಯ. ಪರಿಚಯಕ್ಕಿಂತ ಗೆಳೆತನ ಅನ್ನಬಹುದು. ಅವನಿಗಿಂತ ಸುಮಾರು ಇಪ್ಪತ್ತು ವರುಶ ದೊಡ್ಡವನು. ನಂಬಿಕಸ್ತ ಆಳು. ಯಾವತ್ತೂ ಬಯ್ರಪ್ಪನ ಹಿತ ಕಾಪಾಡುವವನು. ಬಯ್ರಪನ ಚಿಕ್ಕಪನ ಕಾಲದಿಂದಲೂ ಅವರ ತೋಟದಲ್ಲಿ ಕೆಲಸಮಾಡುತ್ತಿದ್ದನು. ಹೀಗಾಗಿ ಅವರಿಬರಲ್ಲಿ ಆತ್ಮೀಯತೆ ಬೆಳೆದಿತ್ತು. ತನ್ನ ಚಿಂತೆಯನ್ನು ಅವನ ಬಳಿ ಹೇಳಿಕೊಳ್ಳಲು ಯಾವ ಮುಜುಗರವೂ ಈಗ ಉಳಿದಿರಲಿಲ್ಲ.

"ನಾಗಪ್ಪ, ನಿನ್ ಹತ್ರ ಒಂದ್ ವಿಶ್ಯಾ ಹೇಳಬೇಕಿತ್ತು"

"ಏನ್ ಸಾಮ್ಯಾರೆ?"

"ನಿನ್ನೆ ಗೌಡ್ರು ಬಂದಿದ್ರಲ್ಲಾ... ಅದೇ... ನಂಗ್ ಚಿರತೆ ಕೊಲ್ಲು ಅಂತ ಹೇಳೋಕೆ. ನಿಂಗೇನ್ ಅನ್ಸುತ್ತೆ?"

"ಅದೇನ್ ಮಹಾ ಕೆಲಸ ಬಿಡಿ ಸಾಮ್ಯಾರೆ. ಕುಸ್ತಿನಾಗ್ ನೀವ್ ಜಟ್ಟಿಗಳನ್ನಾ ಎತ್ತಿ ಒಗದಂಗ್ ಆ ಚಿರತೆನಾ ಒಂದ್ ಏಟ್ಗೇ ಮುಗುಸ್ತೀರಿ".

ಅವನ ಮಾತು ಕೇಳಿ ಚಿಂತೆಯಲ್ಲೂ ಬಯ್ರಪ್ಪನಿಗೆ ನಗು ಬಂತು. "ಅದೇ ವಿಶ್ಯಾನ ನಿನ್ ಹತ್ರ ಹೇಳಬೇಕು" ಎಂದು ಮಾತು ಮುಂದುವರೆಸಿದನು. ನಾಗಪ್ಪ ಅಲ್ಲೇ ಕುಂತು ಕಿವಿಗೊಟ್ಟು ಕೇಳಿದ.

"ನಾನು ನಿಜವಾಗಲೂ ಯಾವ್ ಕುಸ್ತಿ ಪಯ್ಲ್ವಾನನೂ ಅಲ್ಲಾ. ಯಾರನ್ನೂ ಎತ್ತಿ ಹಾಕಿಲ್ಲ."

ನಾಗಪ್ಪನಿಗೆ ಗೊಂದಲವಾಯಿತು. "ಏನ್ ಹಂಗಂದ್ರೆ?" ಎಂದು ಕೇಳಿದನು.

"ಹೇಳ್ತೀನಿ ಕೇಳು. ಇಪ್ಪತ್ತು ವರ್ಶ್ದ್ ಕೆಳಗೆ ನಾನು ನಮ್ಮಪ್ಪನ ಜೊತೆ ಇಲ್ಲಿಂದ ತುಂಬಾ ದೂರದಲ್ಲಿರೋ ಮಂಗ್ಳೂರಿನಲ್ಲಿದ್ದೆ. ನಾನ್ ತುಂಬಾ ಚಿಕ್ಕೊನಿದ್ದಾಗ ಅಮ್ಮ ಸತ್ತಹೋದ್ಳಂತೆ. ಮಂಗ್ಳೂರನಲ್ಲಿ ಯಾವ್ದೋ ಕೆಲಸ ಸಿಕ್ತು ಅಂತ ಅಪ್ಪ ನನ್ ಕರಕೊಂಡು ಅಲ್ಲಿಗೇ ಹೋದ್ನಂತೆ. ನಂಗ್ ಯಾವ್ದು ನೆನಪಿಲ್ಲ. ನಾನು ಅಲ್ಲೇ ಬೆಳದೆ, ಅಪ್ಪನ ಹಂಗೆ ಎತ್ತರಕ್ಕೆ, ದಪ್ಪಗೆ. ನಾನೂ ಅಲ್ಲೇ ಒಂದ್ ಕೆಲಸ ಹುಡುಕ್ಕೊಂಡೆ. ಮದುವೆನೂ ಆದೆ. ಆದ್ರೆ ಏನ್ ಮಾಡೋದು, ಒಂದ್ ವರ್ಶ್ಕ್ಕೇ ಅವಳು ಯಾವನ್ ಜೊತೆನೋ ಓಡ್ ಹೋದ್ಳು. ಇಲ್ಲಿ ಚಿಕ್ಕಪ್ಪ ಸಾಯೋದಕ್ಕೂ, ಅಲ್ಲಿ ಅಪ್ಪಂಗೆ ಲಕ್ವಾ ಹೊಡಯೋದಕ್ಕೂ ಸರಿಯಾಯ್ತು ನೋಡು. ಕುಡದೂ ಕುಡದೂ ಆರೋಗ್ಯ ಹಾಳ್ ಮಾಡ್ಕೊಂಡ. ಚಿಕ್ಕಪ್ಪ ಸತ್ತ್ ವಿಶ್ಯಾ ನಮಗ್ ಗೊತ್ತಾಗಿ, ಇಲ್ಲಿ ತೋಟ ನೋಡ್ಕೊಳ್ಳೊದಕ್ಕೆ ಯಾರೂ ಇಲ್ಲಾ ಅಂತ ಅಪ್ಪ ನಂಗೆ ಇಲ್ಲಿ ಹೋಗು ಅಂತ ಹೇಳಿದ್ರು. ಊರು ಹೊಸದು, ಯಾರನ್ನೂ ನಂಬೇಡ, ನಿನ್ ಎಚ್ಚರಕೆಯಲ್ಲಿ ನೀನಿರು ಅಂತ ಹೇಳಿ ಅವನೂ ಸತ್ತ್ ಹೋದ. ಅವ್ನ್ ಮಣ್ಣ ಮಾಡಿ ನಾನು ಸೀದಾ ಇಲ್ಲಿಗ್ ಬಂದೆ.

ಅಪ್ಪ ಹೇಳಿದ್ ಮಾತು ನಂಗೆ ಹುಳದಂಗೆ ತಲೇಲಿ ಕೊರೀತಾ ಇತ್ತು. ಊರು ಹೊಸದು, ಜನ ಹೊಸಬ್ರು, ಕೆಲಸ ಹೊಸದು. ಯಾರನ್ನೂ ನಂಬೊಹಂಗಿಲ್ಲ. ಅದಕ್ಕೇ ಯಾರ್ ಹತ್ರಾನೂ ಹೆಚ್ಚ್ ಮಾತಾಡ್ತಿರಲಿಲ್ಲ. ನನ್ ಎಚ್ಚರಿಕೆಲಿ ನಾನ್ ಇದ್ರಾಯ್ತು ಅಂತ ಒಂದ್ ದೊಡ್ಡ ಚಾಕು ತಂದೆ. ನನ್ ಆಕಾರ ನೋಡಿ, ಕುಸ್ತಿ ಪಯ್ಲ್ವಾನಾ ಅಂತ ನೀನೇ ಕೇಳ್ದೆ. ನಾನೂ ಇರಲಿ ಅಂತ ಹೂಂ ಅಂದೆ. ನೀನ್ ಅದನ್ನೇ ಸತ್ಯ ಮಾಡಿ ಊರೋರಿಗೆಲ್ಲ ಹೇಳಿ, ಎಲ್ರೂ ನಂಗೆ ಹೆದರೋಕ್ ಶುರು ಮಾಡಿದ್ರು. ನಂಗೂ ಒಂತರಾ ಕುಶಿಯಾಯ್ತು. ನಾನೂ ಅದನ್ನೇ ಮುಂದವರಿಸ್ದೆ. ಎಲ್ರುಗೂ ಕಾಣೋ ತರಾ ಚಾಕು ಸಿಕ್ಕಸಕೊಂಡ್ ಓಡಾಡ್ತಿದ್ದೆ."

ಅವನ ಮಾತನ್ನು ತಡೆದು ನಾಗಪ್ಪ ಕೇಳಿದ, "ಅಂದ್ರೆ ನೀವು ಯಾವತ್ತೂ ಕುಸ್ತಿ ಆಡೇ ಇಲ್ವಾ?"

ಬಯ್ರಪ್ಪ ನಕ್ಕು ಹೇಳಿದ "ಕುಸ್ತಿ ಆಡೋರನ್ನೂ ನಾ ಸರಿಯಾಗಿ ನೋಡಿಲ್ಲ ನಾಗಪ್ಪ".

"ಹೌದಾ!" ನಾಗಪ್ಪ ಗೊಂದಲಕ್ಕೆ ಬಿದ್ದನು. "ನೀವು ಕುಸ್ತಿ ಪಯ್ಲ್ವಾನ ಅನ್ಕೊಂಡು, ಅಶ್ಟ ಜನಕ್ ಹೊಡ್ದಾಕಿದೀರಾ, ಇಶ್ಟ ಜನಕ್ ಹೊಡ್ದಾಕಿದೀರಾ ಅಂತ ಕತೆ ಕಟ್ಟಿ ಊರೋರ್ಗೆಲ್ಲಾ ಹೇಳಿಬಿಟ್ಟೇನಲ್ಲಾ ಸಾಮ್ಯಾರೆ?"

"ನೀನ್ ಹೇಳ್ದಾಗ ನಾನೂ ಉಬ್ಬಿದ್ದೆ. ಆದ್ರೆ ಈಗ ಅದೇ ಮುಳು ಆಗ್ಯೆತೆ. ಚಿರತೆ ಹೊಡಯೋದ್ ಹಂಗಿರ್ಲಿ, ಹೆಗ್ಗಣ ಕೂಡ ಹೊಡಯೋ ದರ್ಯ ನಂಗ ಇಲ್ಲಾ".

"ಬುಡಿ ಸಾಮ್ಯಾರೆ, ನಿಮಗ್ ಅದೆಶ್ಟ್ ಶಕ್ತಿ ಅದೆ. ನೀವು ಈಗ್ಲೂ ಮನಸ್ ಮಾಡುದ್ರೆ ಆ ಚಿರತೆನಾ ಹೊಡಿಬೌದು."

"ಶಕ್ತಿ ಇರೋದು ಮಯ್ ನಾಗಲ್ಲಾ ನಾಗಪ್ಪ, ಮನಸ್ಸಿನಾಗೆ. ನನ್ ಕಯ್ಲಿ ಆ ಕೆಲಸ ಆಗುಲ್ಲ ಅಂತ ನಂಗ್ ಗೊತ್ತು" ಎಂದು ನಿಟ್ಟುಸಿರು ಬಿಟ್ಟನು.

ತುಸು ಹೊತ್ತ ಮೌನದ ಮೇಲೆ, ನಾಗಪ್ಪ ಕೇಳಿದನು, "ಈಗ್ ಏನ್ ಮಾಡ್ತೀರ ಸಾಮ್ಯಾರೆ?"

"ನಾನೂ ರಾತ್ರಿಯೆಲ್ಲಾ ಯೋಚಿಸ್ದೆ. ಊರೋರೆಲ್ಲ ನನ್ ನಂಬ್ಕೊಂಡು ಕುಂತಾರೆ. ನಾನು ಇರೋ ಸತ್ಯ ಹೇಳಿದ್ರೆ, ನಂಗ್ ನಾಳೆ ಈ ಊರಲ್ಲಿ ಓಡಾಡೋಕು ಕಶ್ಟ ಆಗಬೌದು. ಎಲ್ರೂ ನನ್ನ ಹೀಯಾಳಿಸ್ತಾರೆ. ನನಗ ದ್ಯೆರ್ಯ ಇಲ್ಲಾ ಅಂತ ಗೊತ್ತಾದ್ರೆ, ಇವತ್ತು ನನಗ್ ಹೆದರೋರೆಲ್ಲ ನಾಳೆ ನನಗ್ ಕೇಡ್ ಮಾಡ್ಬೌದು. ನನಗಾದ್ರೂ ಯಾರ್ ಇದಾರೆ ಕಾಪಾಡೋಕೆ? ಆದ್ರೆ ಸತ್ಯ ಹೇಳ್ದಿದ್ರೆ ಚಿರತೆ ಕೊಲ್ಲೊದಕ್ ಹೋಗ್ಬೇಕಾಗುತ್ತೆ. ಗೌಡ್ರಗೆ ಇಲ್ಲಾ ಅನ್ನೋಕಾಗುಲ್ಲ. ಹೋಗೊಲ್ಲ ಅಂತ ಕಡ್ಡಿ ತುಂಡ ಮಾಡ್ದಂಗೆ ಹೇಳಿದ್ರೂ, ನನಗ್ ಈಗಿರೋ ಮರ್ಯಾದೆ ಮುಂದೆ ಇರುಲ್ಲ. ಏನ್ ಮಾಡ್ಲಿ ತಿಳೀತಿಲ್ಲ."

ಮತ್ತೇ ಮೌನ. ನಾಗಪ್ಪನ ಅನಿಸಿಕೆ ತಿಳಿದುಕೊಳ್ಳಲು ಅವನನ್ನೇ ಕೇಳಿದ ಬಯ್ರಪ್ಪ. "ನೀನೇ ಹೇಳು ನಾಗಪ್ಪ. ಯಾವ್ದು ಸರಿ? ಜನಗಳ ಕಣ್ಣಲ್ಲಿ ಸಣ್ಣವನಾಗಿ ಕೊನೆವರ್ಗೂ ಇದ್ದುಬಿಡ್ಲಾ, ಇಲ್ಲಾ ಚಿರತೆ ಕಯ್ಯಲ್ ಸತ್ತು ಅವರ ನಂಬಿಕೆ ಉಳಿಸ್ಕೊಳ್ಳಾ?"

ನಾಗಪ್ಪ ತುಸು ಹೊತ್ತು ಯೋಚಿಸಿ, "ನಂಗ್ ಗೊತ್ತಾಯ್ತಿಲ್ಲಾ ಸಾಮ್ಯಾರೆ, ನಿಮ್ ಮಾತಿಗೆ ಮೂಕ ಆಗೀನಿ." ಅಂದ.

ನಾಗಪ್ಪ ಇಡೀ ದಿನ ಅದೇ ಗುಂಗಿನಲ್ಲಿ, ತನ್ನ ಕೋಣೆ ಬಿಟ್ಟು ಹೊರಬರಲಿಲ್ಲ. ಸಂಜೆಯಾಯಿತು. ಗೌಡ್ರು ನಿನ್ನೆ ಹೇಳಿದಂತೆ ಅದೇ ಸಮಯಕ್ಕೆ ಅವನ ಮನೆಗೆ ಬಂದರು. ಗೌಡರು ಬಂದ ವಿಶಯ ತಿಳಿಸಲು ಬಯ್ರಪ್ಪನ ಕೋಣೆಗೆ ನಾಗಪ್ಪ ಬಂದ.

"ಗೌಡ್ರು ಬಂದ್ರು ಸಾಮ್ಯಾರೆ. ಏನ್ ಹೇಳ್ತೀರಿ?"

ಬಯ್ರಪ್ಪ ತನ್ನ ಕುರ್ಚಿಯಿಂದ ಎದ್ದು, ಪಕ್ಕದಲ್ಲಿಟ್ಟಿದ್ದ ಚರ್ಮದ ಪಟ್ಟಿಯನ್ನು ಸೊಂಟಕ್ಕೆ ಸುತ್ತಿ, ಅದರಲ್ಲಿ ಚಾಕು ಸಿಕ್ಕಿಸಿ, ಚಿರತೆಯನ್ನು ಹುಡುಕಲು ಹೊರಟು ನಿಂತ. ತನ್ನ ಸ್ವಾಮಿಯ ತೀರ್ಮಾನ ಕಂಡು ನಾಗಪ್ಪನ ಕಣ್ಣುಗಳು ತೇವಗೊಂಡವು.

***(ಚಿತ್ರಸೆಲೆ: [kolkatasayantanc.blogspot.in](kolkatasayantanc.blogspot.in) )***